

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 27 ಶನಿವಾರ 2023

ಸಂಪುಟ: 44 | ಸಂಚಿಕೆ: 41 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ಇಂದು ಸಂಪುಟ ವಿಸ್ತರಣೆ

24 ಮಂದಿ ನೂತನ ಸಚಿವರು

● ವೀರಶೈವ, ಪರಿಶಿಷ್ಟ ಜಾತಿ, ಪಂಗಡಕ್ಕೆ ಜಾಕ್‌ಪಾಟ್
● ವರಿಷ್ಠರ ಈ ನಿಲುವಿನಿಂದ ಹಿರಿಯರಿಗೆ ಭಾರೀ ಶಾಕ್



ಬೆಂಗಳೂರು, ಮೇ 26(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಮಂತ್ರಿಮಂಡಲವನ್ನು ನಾಳೆ ಬೆಳಿಗ್ಗೆ ವಿಸ್ತರಿಸಿ, ಹೊಸದಾಗಿ 24 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ.

ನಾಳೆ ಬೆಳಗ್ಗೆ 11.30ಕ್ಕೆ ರಾಜಭವನದ ಗಾಜಿನ ಮನೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಂಪುಟದ ನೂತನ ಸದಸ್ಯರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ.

ಮಂತ್ರಿಮಂಡಲ ವಿಸ್ತರಿಸಲೆಂದೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆಗೂಡಿ, ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ವರಿಷ್ಠರೊಟ್ಟಿಗೆ ಸುದೀರ್ಘ ಸಮಾಲೋಚನೆ ನಡೆಸಿದ ನಂತರ ಸಂಪುಟ ಸೇರುವ ಸದಸ್ಯರ ಪಟ್ಟಿ ಅಂತಿಮಗೊಳಿಸಿ, ನಗರಕ್ಕೆ ಹಿಂತಿರುಗಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಮಂಡಲ ರಚನೆಗೆ ವರಿಷ್ಠರು ಒತ್ತು ನೀಡಿದ್ದು, ಇದರಿಂದ ವೀರಶೈವ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಸಮುದಾಯಕ್ಕೆ ಸಂಪುಟದಲ್ಲಿ ಜಾಕ್‌ಪಾಟ್ ಹೊಡೆಯುತ್ತಿದೆ. ಕಳೆದ ರಾತ್ರಿಯವರೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಬೆಂಬಲಿಗರಿಗೆ ಮಂತ್ರಿ ಸ್ಥಾನ ಸಮಪಾಲು ಪಡೆದಿದ್ದರು. ಆದರೆ ಬೆಳಿಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿನ್ನೆ ನಡೆದ ಆಯ್ಕೆಯಲ್ಲಿ ಕೆಲ ಬದಲಾವಣೆಗೊಂಡವು ● 9ನೇ ಪುಟಕ್ಕೆ

ನೂತನ ಸಚಿವರ ಪಟ್ಟಿ



ಡಾ.ಹೆಚ್.ಸಿ.ಮಹದೇವಪ್ಪ



ಕೆ.ವೆಂಕಟೇಶ್



ಚೆಲುವರಾಯಸ್ವಾಮಿ

- ಹೆಚ್.ಕೆ.ಪಾಟೀಲ್
- ಕೃಷ್ಣ ಭೈರೇಗೌಡ
- ಈಶ್ವರ ಖಂಡ್ರೆ
- ಕೆ.ಎನ್.ರಾಜಣ್ಣ
- ದಿನೇಶ್ ಗುಂಡೂರಾವ್
- ಶರಣಬಸಪ್ಪ ದರ್ಶನಾಪುರ
- ಶಿವಾನಂದ ಪಾಟೀಲ್
- ತಿಮ್ಮಾಪುರ ರಾಮಪ್ಪ ಬಾಲಪ್ಪ
- ಎಸ್.ಎಸ್.ಮಲ್ಲಿಕಾರ್ಜುನ
- ಶಿವರಾಜ್ ತಂಗಡಗಿ
- ಡಾ.ಶರಣಪ್ರಕಾಶ ರುದ್ರಪ್ಪ ಪಾಟೀಲ್
- ಮಂಕಾಳ ವೈದ್ಯ
- ಲಕ್ಷ್ಮೀ ಹೆಬ್ಬಾಳ್ಕರ್
- ರಹೀಂ ಖಾನ್
- ಡಿ.ಸುಧಾಕರ್
- ಸಂತೋಷ್ ಲಾಡ್
- ಎನ್.ಎಸ್. ಬೋಸರಾಜು
- ಭೈರತಿ ಎಸ್.ಸುರೇಶ್
- ಮಧು ಬಂಗಾರಪ್ಪ
- ಡಾ.ಎಂ.ಸಿ.ಸುಧಾಕರ್
- ಬಿ.ನಾಗೇಂದ್ರ

ಹಿರಿಯರಿಗೆ ಸಿಗದ ಸಚಿವ ಸ್ಥಾನ

ಆರ್.ವಿ. ದೇಶಪಾಂಡೆ, ಟಿ.ಬಿ. ಜಯಚಂದ್ರ, ಬಸವರಾಜ ರಾಯರೆಡ್ಡಿ, ಬಿ.ಕೆ. ಹರಿಪ್ರಸಾದ್, ವಿನಯ್ ಕುಲಕರ್ಣಿ, ಎನ್.ಎ. ಹ್ಯಾರಿಸ್, ತನ್ವೀರ್ ಸೇಟ್ ಸೇರಿದಂತೆ ಹಲವು ಹಿರಿಯರಿಗೆ ಸಂಪುಟದಲ್ಲಿ ಸ್ಥಾನ ದೊರೆತಿಲ್ಲ. ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ತಮಗೆ ಸಚಿವ ಸ್ಥಾನ ದೊರೆಯದ ಹಿನ್ನೆಲೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ. ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುವ ಬಗ್ಗೆ ಅವರು ತಮ್ಮ ಆಪ್ತರೊಂದಿಗೆ ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅದೇ ರೀತಿ ಸಿದ್ದರಾಮಯ್ಯ ಆಪ್ತರಾದ ಟಿ.ಬಿ.ಜಯಚಂದ್ರ ಅವರು ಕೂಡ ಸಚಿವ ಸ್ಥಾನ ಕೈತಪ್ಪಿದ್ದರಿಂದ ತೀವ್ರ ಅಸಮಾಧಾನಗೊಂಡಿದ್ದಾರೆ.




ಪುಟ್ಟರಂಗಶೆಟ್ಟಿ ಡೆಪ್ಯುಟಿ ಸ್ಪೀಕರ್



ಬೆಂಗಳೂರು, ಮೇ 26– ಚಾಮರಾಜನಗರ ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅವರನ್ನು ವಿಧಾನ ಸಭೆಯ ಡೆಪ್ಯುಟಿ ಸ್ಪೀಕರ್ ಆಗಿ ಕಾಂಗ್ರೆಸ್ ಪಕ್ಷ ಆಯ್ಕೆ ಮಾಡಿದೆ.

ಸಿದ್ದರಾಮಯ್ಯ ಅವರ ಸಂಪುಟ ದಲ್ಲಿ ಪುಟ್ಟರಂಗ ಶೆಟ್ಟಿ ಸಚಿವರಾಗು ತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರಿಗೆ ಸಂಪುಟದಲ್ಲಿ ಸ್ಥಾನ ನೀಡದಿದ್ದರೂ ವಿಧಾನ ಸಭೆಯ ಡೆಪ್ಯುಟಿ ಸ್ಪೀಕರ್ ಮಾಡುವ ಮೂಲಕ ಉಪ್ಪಾರ ಜನಾಂಗದ ಏಕೈಕ ಶಾಸಕನಿಗೆ ಉನ್ನತ ಸ್ಥಾನ ಕಲ್ಪಿಸಲಾಗಿದೆ. ಯಳಂದೂರಿನವರಾದ ಪುಟ್ಟರಂಗಶೆಟ್ಟಿ ಜಿಲ್ಲಾ ಪರಿಷತ್ ಸದಸ್ಯರಾಗಿದ್ದು, ನಂತರ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಚುನಾವಣೆಯಲ್ಲೇ ತಮ್ಮ ರಾಜಕೀಯ ಗುರು, ಮಾಜಿ ಸಚಿವ ಎಂ. ಮಹದೇವು ಅವರನ್ನು ಸೋಲಿಸುವ ಮೂಲಕ ವಿಧಾನಸಭೆ ಪ್ರವೇಶಿಸಿದರು. ಚಾಮರಾಜನಗರ ಕ್ಷೇತ್ರದಲ್ಲಿ ಸತತ ಮೂರನೇ ಬಾರಿಗೆ ಗೆಲುವು ಸಾಧಿಸಿದ ಪ್ರಥಮ ಶಾಸಕ ಎಂಬ ಹೆಗ್ಗಳಿಕೆಗೆ ಗುರಿಯಾಗಿದ್ದ ಅವರು, ನಾಲ್ಕನೇ ಚುನಾವಣೆಯಲ್ಲಿ ತಮ್ಮ ಮತ್ತೋರ್ವ ರಾಜಕೀಯ ಗುರು ವಿ. ಸೋಮಣ್ಣ ವಿರುದ್ಧ ಗೆಲುವಿನ ನಗೆ ಬೀರಿದರು.

ಕಾಂಗ್ರೆಸ್‌ನಲ್ಲಿ ಶೆಟ್ಟರ್, ಸವದಿಗೆ ಇಲ್ಲ ಸ್ಥಾನಮಾನ; ಚರ್ಚೆಗೆ ಗ್ರಾಸ



ಬೆಂಗಳೂರು, ಮೇ 26–ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಸ್ಥಾನ ನೀಡದೇ ಇರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಬಿಜೆಪಿಯಲ್ಲಿ ಟಿಕೆಟ್ ತಪ್ಪಿದ ಕಾರಣ ಸಿಡಿದೆದ್ದು ಕಾಂಗ್ರೆಸ್ ಸೇರ್ಪಡೆಗೊಂಡ ಈ ಇಬ್ಬರೂ ನಾಯಕರಿಗೆ ಗೌರವಯುತ ಸ್ಥಾನಮಾನ ನೀಡುವುದಾಗಿ ಸಿದ್ದರಾಮಯ್ಯ ಸೇರಿದಂತೆ ಹಿರಿಯ ಕಾಂಗ್ರೆಸ್ ಮುಖಂಡರು ಹೇಳಿದ್ದರು. ಜಗದೀಶ್ ಶೆಟ್ಟರ್ ಚುನಾವಣೆಯಲ್ಲಿ ಸೋತಿದ್ದರೂ ಅವರನ್ನು ಹಾಗೂ ಬಿಜೆಪಿಯ ರಮೇಶ್ ಜಾರಕಿಹೊಳಿಗೆ ಸೆಡ್ಡು ಹೊಡೆದು ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳು ಬರಲು ಕಾರಣವಾಗಿದ್ದ ಲಕ್ಷ್ಮಣ ಸವದಿ ಅವರನ್ನು ಮಂತ್ರಿಯನ್ನಾಗಿ ಮಾಡಿ ಪ್ರಮುಖ ಖಾತೆ ನೀಡಲಾಗುವುದು ಎಂಬ ಮಾತುಗಳು ಕೇಳಿ ಬಂದಿದ್ದವು. ಆದರೆ ಇಮಬ್ಬರಿಗೂ ಸಂಪುಟದಲ್ಲಿ ಸ್ಥಾನ ನೀಡಿಲ್ಲ. ಅದೇ ವೇಳೆ ವಿಧಾನ ಮಂಡಲದ ಎರಡೂ ಸದನಗಳಲ್ಲೂ ಸದಸ್ಯರಾಗಿಲ್ಲದಿರುವ ● 9ನೇ ಪುಟಕ್ಕೆ



ಭಾರತದ ಪ್ರಜಾಪ್ರಭುತ್ವ ಸಂಪತ್ತು ಈ ಸಂಸತ್ ಭವನ
ನಾಳೆ ಉದ್ಘಾಟನೆಗೊಳ್ಳಲಿರುವ ಭವ್ಯ ಭವನದ ಹತ್ತು ಹಲವು ವಿಶೇಷತೆ ■ ಪುಟ–7

ಐಪಿಎಲ್ ಬೆಟ್ಟಿಂಗ್‌ಗೆ ಯುವಕ ಬಲಿ

ಬೆಟ್ಟಿಂಗ್ ಹಣದ ವಿಚಾರದಲ್ಲಿ ಘರ್ಷಣೆ; ಮಾರಕಾಸ್ತ್ರಗಳಿಂದ ದಾಳಿ



ಪುನೀತ್

ಭಾರತಿನಗರ, ಮೇ 26– ಐಪಿಎಲ್ ಬೆಟ್ಟಿಂಗ್ ಹಣ ಕೊಡುವ ವಿಚಾರವಾಗಿ ನಡೆದ ಘರ್ಷಣೆಯಲ್ಲಿ ಯುವಕನೋರ್ವ ಹತ್ಯೆಗೀಡಾದ ಘಟನೆ ಭಾರತಿನಗರ ಸಮೀಪದ ಬೋರಾಪುರ ಕಾಲೋನಿ ಬಳಿ ಗುರುವಾರ ಸಂಜೆ ನಡೆದಿದ್ದು, ಈ ಸಂಬಂಧ ಮದ್ದೂರು ಠಾಣೆ ಪೊಲೀಸರು 10 ಮಂದಿಯನ್ನು ಬಂಧಿಸಿದ್ದಾರೆ.

ಚಿಕ್ಕರಸಿನಕೆರೆ ಗ್ರಾಮದ ರಾಜೇಂದ್ರ ಎಂಬುವರ ಪುತ್ರ ಪುನೀತ್(30) ಹತ್ಯೆಗೀಡಾದವನಾಗಿದ್ದು, ಈತ, ಸ್ನೇಹಿತರೊಂದಿಗೆ ನಿರಂತರವಾಗಿ ಐಪಿಎಲ್ ಬೆಟ್ಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದ ಎಂದು ಹೇಳಲಾಗಿದೆ. ದರ್ಶನ್ ಮತ್ತು ಶರತ್ ಎಂಬುವರ ನಡುವೆ ಬೆಟ್ಟಿಂಗ್ ನಡೆದಿದ್ದು, ಅದರಲ್ಲಿ ದರ್ಶನ್ ಗೆದ್ದಿದ್ದಾನೆ. ಆದರೆ, ಶರತ್ ಬೆಟ್ಟಿಂಗ್ ಹಣ ಕೊಡದೆ ಸತಾಯಿಸಿದ್ದರಿಂದ ಶರತ್‌ನಿಂದ ಹಣ ಪಡೆಯಲು ಪುನೀತ್‌ನ ಸಹಕಾರವನ್ನು ದರ್ಶನ್ ಕೇಳಿದ್ದ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಮೊಬೈಲ್ ಮೂಲಕ ಶರತ್‌ಗೆ ಕರೆ ಮಾಡಿದ ಪುನೀತ್, ಬೆಟ್ಟಿಂಗ್ ಹಣದ ವಿಚಾರ ಪ್ರಸ್ತಾಪಿಸಿದ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, 'ಎಲ್ಲಿದ್ದೀಯಾ ಹೇಳು' ಎಂದು ಶರತ್ ಕೇಳಿದಾಗ, ತಾನು ಮತ್ತು ದರ್ಶನ್ ಬೋರಾಪುರ ಕಾಲೋನಿ ಗೇಟ್ ಬಳಿಯ ಕಾಲುವೆ ರಸ್ತೆಯಲ್ಲಿ ಇರುವುದಾಗಿಯೂ, ತಾಕತ್ತಿದ್ದರೆ ಬಾ ಎಂದು ಶರತ್‌ನನ್ನು ಪುನೀತ್ ಕರೆದಿದ್ದಾನೆ ಎಂದು ಹೇಳಲಾಗಿದೆ. ತನ್ನ ಸ್ನೇಹಿತರಾದ ಮಂಜು ಅಲಿಯಾಸ್ ದೊಡ್ಡ ಮಂಜ, ಬಿ.ಎಲ್. ಮಂಜ, ಸುಮಂತ್ ಸೇರಿದಂತೆ 10 ಮಂದಿ ತಂಡದೊಂದಿಗೆ ಸ್ಥಳಕ್ಕೆ ಲಗ್ಗೆ ಇಟ್ಟ ಶರತ್, ಅಲ್ಲಿದ್ದ ಪುನೀತ್ ಮತ್ತು ದರ್ಶನ್ ಜೊತೆ ವಾಗ್ವಾದ ನಡೆಸಿ, ತನ್ನ ಸ್ನೇಹಿತರೊಡಗೂಡಿ ಪುನೀತ್ ಮತ್ತು ದರ್ಶನ್ ಮೇಲೆ ● 9ನೇ ಪುಟಕ್ಕೆ

ಯಾರೂ ವಿದ್ಯುತ್ ಬಿಲ್ ಕಟ್ಟಬೇಡಿ; ಬಸ್‌ಗಳಲ್ಲಿ ಹೆಂಗಸರು ಟಿಕೆಟ್ ಪಡಿಬೇಡಿ!

ಬೆಂಗಳೂರು, ಮೇ 26(ಕೆಎಂಶಿ)–ರಾಜ್ಯದಲ್ಲಿ ವಿದ್ಯುತ್ ಬಿಲ್ ಕಟ್ಟಬೇಡಿ. ಮಹಿಳೆಯರು ಬಸ್ ಟಿಕೆಟ್ ಪಡೆಯಬೇಡಿ ಎಂದು ಬಿಜೆಪಿ ಇಂದಿಲ್ಲಿ ರಾಜ್ಯದ ಜನತೆಗೆ ಕರೆ ನೀಡಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಗ್ಯಾರಂಟಿಗಳ ಜಾರಿಗೆ ನೀಡಿದ್ದ ಸಮಯ ಮುಗಿದಿರುವುದರಿಂದ ನಿಮ್ಮ ನಿಮ್ಮ ಹಕ್ಕನ್ನು ನೀವೇ ಪಡೆದುಕೊಳ್ಳಿ ಎಂದಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಾಜಿ ಸಚಿವ ಆರ್.ಅಶೋಕ್ ಯಾವುದೇ ಷರತ್ತುಗಳಿಲ್ಲದೆ, ಗ್ಯಾರಂಟಿ ಜಾರಿ ಮಾಡಬೇಕು. ಭರವಸೆ ನೀಡುವ ಸಂದರ್ಭದಲ್ಲಿ ಯಾವುದೇ ಷರತ್ತು ಇರಲಿಲ್ಲ. ಆದರೆ ಈಗ ಷರತ್ತುಗಳನ್ನು ಹಾಕಿ ಗ್ಯಾರಂಟಿಗಳನ್ನು ಕಸಿಯುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ದೂರಿದರು. ಷರತ್ತು ಹಾಕಿದರೆ ನಮ್ಮ ಹೋರಾಟ ಆರಂಭವಾಗಲಿದೆ. ರಾಜ್ಯ ಪ್ರವಾಸ ಮಾಡಿ, ಸರ್ಕಾರಕ್ಕೆ ಚಳಿ–ಜ್ವರ ಬಿಡಿಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ವಿರೋಧ ಪಕ್ಷವಾಗಿ ಜನರ ಭಾವನೆಯನ್ನು ಸರಕಾರಕ್ಕೆ ಮುಟ್ಟಿಸುವ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ ಹೊಸ ಸರಕಾರ ಬಂದಿದೆ. ಮಂತ್ರಿ ಕಾರ್ಡ್ ಯಾರ್‍ಯಾರಿಗೆ ಗ್ಯಾರಂಟಿ ಎಂದು ಗೊತ್ತಿಲ್ಲ. ಇದೊಂದು ಡಬಲ್ ಸ್ಟೇರಿಂಗ್ ಸರಕಾರ ಎಂದು ವ್ಯಂಗ್ಯವಾಡಿದರು. ಉಪ ಮುಖ್ಯಮಂತ್ರಿ ಸ್ಥಾನ ಸಾಂವಿಧಾನಿಕ ಹುದ್ದೆ ಅಲ್ಲ. ಪಾರ್ಟಿ ಘೋಷಣೆಯಿಂದ ಇದು ಸಿಕ್ಕಿದೆ. ಪ್ರತಿ ಸಭೆಯಲ್ಲೂ ಮುಖ್ಯಮಂತ್ರಿ ಮಾತನಾಡುವ ಮೊದಲು ಉಪ ಮುಖ್ಯಮಂತ್ರಿ ಮಾತನಾಡುತ್ತಾರೆ. ಹೊಸ ಸರಕಾರ ಬಂದಾಗ ಮುಖ್ಯಮಂತ್ರಿಗಳು ಖಡಕ್ ಮಾತನಾಡುವುದು ಪರಿಪಾಠ. ಆದರೆ, ಇಲ್ಲಿ ಅವರು ಸೈಲೆಂಟ್, ಡೆಪ್ಯುಟಿ ಸಿಎಂ ವಯಲೆಂಟ್. ಅಧಿಕಾರಿಗಳು, ಪೊಲೀಸರು, ಹಿಂದೂ ಕಾರ್ಯಕರ್ತರಿಗೆ ಧಮ್ಕಿ ಹಾಕುತ್ತಿದ್ದಾರೆ. ಧಮ್ಕಿ ಹಾಕುವುದು ಅವರ ಹಣೇಬರಹ ಎಂದು ನುಡಿದರು. ದಾರಿಯಲ್ಲಿ ಹೋಗುವವರಿಗೆಲ್ಲ ಗ್ಯಾರಂಟಿ ಕೊಡಲು ಸಾಧ್ಯವೇ ಎನ್ನುವ ಡಿಸಿಎಂ, ದಾರಿಯಲ್ಲಿ ಹೋಗುವವರಿಂದ ಮತ ಹಾಕಿಸಿದ್ದಾರೆ ಅಲ್ಲವೇ. ದಾರಿಯಲ್ಲಿ ಹೋಗುವವರಿಗೆಲ್ಲ ಗ್ಯಾರಂಟಿ ಕೊಟ್ಟು ಈಗ ಅಪಮಾನ ಮಾಡುತ್ತೀರಲ್ಲಾ, ನಿಮಗೆ ನಾಚಿಕೆ ಆಗುವುದಿಲ್ಲವೇ. ಪ್ರತಿಯೊಬ್ಬರ ಮನೆಗೂ 200 ಯೂನಿಟ್ ಉಚಿತ ಎಂದಿದ್ದ ಸಿದ್ದರಾಮಯ್ಯರವರು ಈಗ ಷರತ್ತು ವಿಧಿಸುತ್ತಿದ್ದಾರೆ. ಇದು ಡಬಲ್ ಸ್ಟಾಂಡರ್ಡ್ ಎಂದು ಆರ್.ಅಶೋಕ್ ಟೀಕಿಸಿದರು.

ರಾಜ್ಯದ ಜನತೆಗೆ ಬಿಜೆಪಿ ಕರೆ

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಎಂದಿದ್ದರು. 'ಮಾವನ ಮನೆಗೆ ಹೋಗುವವರಿಗೆ, ಸೊಸೆ ಕರೆದುಕೊಂಡು ಬರಲು ಅತ್ತೆ ಹೋದರೆ ಫ್ರೀ, ಹಾಸನಕ್ಕೆ ಹೋಗಲು ಫ್ರೀ' ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಮಹಿಳೆಯರು ಯಾರೂ ಟಿಕೆಟ್ ತೆಗೆದುಕೊಳ್ಳಬೇಡಿ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಈಗ ದ್ವಿಮುಖ ನೀತಿ ಅನಾವರಣ ಆಗುತ್ತಿದೆ ಎಂದು ಆಕ್ಷೇಪಿಸಿದರು. ಆರ್ಥಿಕ ಸಂಪನ್ಮೂಲದ ಬಗ್ಗೆ ಈಗ ಮಾತನಾಡುತ್ತಿದ್ದೀರಿ. ಸಿದ್ದರಾಮಯ್ಯನವರು 13 ಬಜೆಟ್ ಮಂಡಿಸಿದವರು. ನಿಮಗೆ ಮಾಹಿತಿ–ಜ್ಞಾನ ಇರಲಿಲ್ಲವೇ, ವಿದ್ಯುತ್ ಲಭ್ಯತೆ ಬಗ್ಗೆ ಅರಿವಿಲ್ಲವೇ. ಜ್ಞಾನ ಇಲ್ಲದೆ ನಿಮ್ಮ ಪ್ರಣಾಳಿಕೆ ಪ್ರಿಂಟ್ ಮಾಡಿದ್ದೀರಾ. ಜನ ಈಗ ನಗುವಂತಾಗಿದೆ ಅಲ್ಲವೇ ಎಂದು ಪ್ರಶ್ನೆಗಳನ್ನು ಮುಂದಿಟ್ಟರು.

ಫ್ರೀ ಫ್ರೀ ವಿಚಾರವನ್ನು ದೂರವಿಟ್ಟು ವಿಷಯಾಂತರ ಮಾಡಲು ಆರೆಸ್ಸೆಸ್ ಬ್ಯಾನ್ ಮಾಡುವ ಮಾತನಾಡುತ್ತಿದ್ದಾರೆ. ನೀವು ಬಿಡಿ. ನಿಮ್ಮಪ್ಪ, ನಿಮ್ಮ ಅಜ್ಜಿ, ಮುತ್ತಾತನಿಗೇ ಬ್ಯಾನ್ ಮಾಡಲು ಆಗಲಿಲ್ಲ. ಸಂಸತ್ತಿನಲ್ಲಿ ಮೆಜಾರಿಟಿ ಇತ್ತು. ಆಗಲೇ ಬೇಳೆ ಬೇಯ್ಯಲಿಲ್ಲ. ನೀವು ತಾಕತ್ತಿದ್ದರೆ, ದಮ್ಮಿದ್ರೆ, ಶಕ್ತಿ ಇದ್ರೆ ಬ್ಯಾನ್ ಮಾಡಿ. ನಿಮ್ಮ ಸರಕಾರ ಮೂರು ರಾಜ್ಯಗಳಲ್ಲಿದೆ. ಆರೆಸ್ಸೆಸ್‌ನ ಲಕ್ಷಾಂತರ ಶಾಖೆಗಳಿವೆ. ಆರೆಸ್ಸೆಸ್ ಮತ್ತು ಭಜರಂಗ ದಳ ಹಿಂದೂಗಳ ಧ್ವನಿ. ಹಿಂದೂಗಳ ಪರವಾಗಿ ನಿಲ್ಲುವ ಸಾರ್ವಜನಿಕ ಸಂಸ್ಥೆ ಎಂದು ತಿಳಿಸಿದರು. ಆರೆಸ್ಸೆಸ್ ಬ್ಯಾನ್ ಮಾಡಿದರೆ ನಿಮ್ಮ ಗೂಟದ ಕಾರು ಮೂರು ತಿಂಗಳಲ್ಲಿ ಇರುವುದಿಲ್ಲ. ಅವು ವಿಧಾನಸೌಧದ ಮುಂದೆ ನಿಲ್ಲುತ್ತವೆ ಎಂದು ಎಚ್ಚರಿಸಿದರು. ಈ ದೇಶದ ಪ್ರಧಾನಿ, ದೇಶದ ಗೃಹ ಸಚಿವರು, ರಾಷ್ಟ್ರಪತಿಗಳೂ ಆರೆಸ್ಸೆಸ್‌ನವರು. ನಾವೂ ಆರೆಸ್ಸೆಸ್‌ನವರು ಎಂದರಲ್ಲದೆ, ಇವರು ದೇಶವಿರೋಧಿ ಪಿಎಫ್‌ಐ, ಕೆ.ಎಫ್.ಡಿ. ಹಿಜಾಬ್, ಗೋಹತ್ಯೆ ನಿಷೇಧ ರದ್ದು ಮಾಡುವ ಬೇಡಿಕೆ ಇಟ್ಟ ಅಮ್ನೆಸ್ಟಿ ಇಂಟರ್ ನ್ಯಾಷನಲ್ ಪರ ಇರುವವರು. ಅವರನ್ನು ಸಂತುಷ್ಟಗೊಳಿಸಲು ಆರೆಸ್ಸೆಸ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆಲ್ಲ ಸೊಪ್ಪು ಹಾಕುವುದಿಲ್ಲ. ಇದನ್ನು ಬಿಜೆಪಿ ಎದುರಿಸಲಿದೆ ಎಂದು ತಿಳಿಸಿದರು.

ಕಾಂಗ್ರೆಸ್ ತಲಾ 5000 ರೂ. ಉಡುಗೊರೆ ಕೂಪನ್ ಹಂಚಿ ಅಧಿಕಾರಕ್ಕೆ ಬಂದಿದೆ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆರೋಪ ● ರಾಮನಗರದಲ್ಲಿ ನಿಖಿಲ್ ಸೋಲಿಗೆ ಇದೇ ಕಾರಣ
● ಹೊಸ ಸಂಸತ್ ಭವನದ ಉದ್ಘಾಟನೆ ವಿಷಯದಲ್ಲಿ ಕಾಂಗ್ರೆಸ್‌ನದು ಅನುಕೂಲ ಸಿಂಧು ರಾಜಕಾರಣ

ಬೆಂಗಳೂರು, ಮೇ 26(ಕೆಎಂಶಿ)–ತಲಾ ರೂ. 5,000 ಮೊತ್ತದ ಉಡುಗೊರೆಯ ಕೂಪನ್ ಹಂಚಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಇದರಿಂದಾಗಿಯೇ ಹಲವು ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಸೋತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸಾಮಿ ಇಂದಿಲ್ಲಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾನದ ಮೊದಲ ದಿನ ಮತದಾರರಿಗೆ ಕೂಪನ್‌ಗಳನ್ನು ಹಂಚಿ ಅಕ್ರಮ ಎಸಗಿದ್ದಾರೆ ಎಂದು ಕೂಪನ್‌ಗಳನ್ನು ಪ್ರದರ್ಶಿಸಿದರು. ರಾಮನಗರ ಕ್ಷೇತ್ರದಲ್ಲಿ ಇಕ್ಬಾಲ್ ಹುಸೇನ್ ಮತದಾರರಿಗೆ ಕೂಪನ್ ಹಂಚಿದ್ದರು. ಇಲ್ಲದಿದ್ದರೆ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸೋಲುತ್ತಿರಲಿಲ್ಲ ಎಂದರು.

ಚುನಾವಣೆಯಲ್ಲಿ ಮೂರೂ ಪಕ್ಷಗಳು ಹಣ ಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ಇಂತಹ ಹಣದ ಮೂಲಕ ಚುನಾವಣೆ ನಡೆಸುವ ವ್ಯವಸ್ಥೆಯೇ ಬೇಡ. ರಾಜಕೀಯ ಪಕ್ಷಗಳು ನೀಡುವ ಒಂದೆರಡು ಸಾವಿರ ರೂಪಾಯಿಗಳಿಗಾಗಿ ಸಾವಿರಾರು ಕುಟುಂಬಗಳು ಬೀದಿ ಪಾಲಾಗುತ್ತಿವೆ ಎಂದು ಹೇಳಿದರು. ಮುಂದಿನ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕಾರ್ಯಕಾರಿಣಿ ಸಮಾಲೋಚನೆ ನಡೆಸಿತು. ಹಾಗೆಯೇ, ಪಕ್ಷದ ಸದಸ್ಯತ್ವ ನೊಂದಣಿ ವಿಚಾರದಲ್ಲಿ, ಕೇರಳ ನಾಯಕರು ಹೆಚ್ಚು ಆದ್ಯತೆ ಕೊಡಬೇಕು ಎಂದು ಸಲಹೆ ಮಾಡಿದರು. ಅದಕ್ಕೂ ಕಾರ್ಯಕಾರಿಣಿ ಒಪ್ಪಿಗೆಯ ಮುದ್ರೆ ಒತ್ತಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ದೇಶದ ಉದ್ದಗಲಕ್ಕೂ ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಬೆಳೆಗೆ ಸೂಕ್ತ ಬೆಲೆ, ಸಬ್ಸಿಡಿ, ರಸಗೊಬ್ಬರ ಸಮಸ್ಯೆ ಇತ್ಯಾದಿ ಸೌಲಭ್ಯ ಸಿಗದೆ ಕಂಗಾಲಾಗಿದ್ದಾರೆ. ಹೀಗಾಗಿ ದೇಶಾದ್ಯಂತ ರೈತರ ಪರವಾಗಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ ಎಂದರು.



ಕಾಂಗ್ರೆಸ್‌ನದು ಅನುಕೂಲ ಸಿಂಧು ರಾಜಕಾರಣ: ಸಂಸತ್ ಭವನ ಉದ್ಘಾಟನೆ ವಿಚಾರದಲ್ಲಿ ಕಾಂಗ್ರೆಸ್ ರಾಜಕಾರಣ ಮಾಡುತ್ತಿದ್ದು, ತನ್ನ ಅನುಕೂಲಕ್ಕೆ ತಕ್ಕಂತೆ ಮಾತನಾಡುತ್ತಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಅಲ್ಲದೆ, ಕಾಂಗ್ರೆಸ್ ಇವತ್ತು ಆದಿವಾಸಿ ಮಹಿಳೆ ಎಂಬ ಕಾರಣಕ್ಕೆ ಮಾನ್ಯ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ಅದೇ ಆದಿವಾಸಿ ಮಹಿಳೆ ರಾಷ್ಟ್ರಪತಿ ಚುನಾವಣೆ ಅಭ್ಯರ್ಥಿ ಆಗಿದ್ದಾಗ ಕಾಂಗ್ರೆಸ್ ಯಶವಂತ ಸಿನ್ಹಾ ಅವರನ್ನು ಅಭ್ಯರ್ಥಿ ಮಾಡಿದ್ದು ಯಾಕೆ ಎಂದು ಖಾರವಾಗಿ ಪ್ರಶ್ನೆ ಮಾಡಿದರು.

ಸಂಸತ್ ಭವನ ಉದ್ಘಾಟನೆಗೆ 21 ಪಕ್ಷಗಳು ಬಹಿಷ್ಕಾರ ಹಾಕಿವೆ. ಅದು ಆಯಾ ಪಕ್ಷದ ನಿಲುವು. ಸಂಸತ್ ಭವನ ಯಾವುದೋ ಪಕ್ಷ ಸಂಘಟನೆಗೆ ಸೀಮಿತವಾದ ಭವನ ಅಲ್ಲ. ದೇಶದ ಜನರ ತೆರಿಗೆ ಹಣದಿಂದ ಕಟ್ಟಿರುವ ಭವನ ಅದು. ರಾಷ್ಟ್ರಪತಿಗಳಿಂದ ಉದ್ಘಾಟನೆ ಆಗಬೇಕಿತ್ತು ಅನ್ನುವ ವಿಚಾರ ತೆಗೆದು ಕಾಂಗ್ರೆಸ್ ಬಹಿಷ್ಕಾರ ಮಾಡಲು ಮುಂದಾಗಿದೆ. ಇದೇ ಕಾಂಗ್ರೆಸ್ ಪಕ್ಷ ಛತ್ತೀಸಗಢದಲ್ಲಿ ವಿಧಾನ ಸಭಾ ಕಟ್ಟಡದ ಉದ್ಘಾಟನೆಯನ್ನು ● 9ನೇ ಪುಟಕ್ಕೆ

ಮೈಸೂರಲ್ಲಿ ಖ್ಯಾತ ವಿಮರ್ಶಕ ಪ್ರೊ.ಜಿ.ಹೆಚ್.ನಾಯಕ್ ನಿಧನ



ಮೈಸೂರು, ಮೇ 26 (ಆರ್‌ಕೆ)– ಕನ್ನಡ ಸಾಹಿತ್ಯ ಲೋಕದ ಖ್ಯಾತ ವಿಮರ್ಶಕ ಪ್ರೊ.ಜಿ.ಹೆಚ್.ನಾಯಕ್ (88) ಅವರು ಇಂದು ಮಧ್ಯಾಹ್ನ ಮೈಸೂರಿನ ಕುವೆಂಪುನಗರದ ನಿವಾಸದಲ್ಲಿ ನಿಧನರಾದರು.

ಪತ್ನಿ ಹೆಸರಾಂತ ಚಳವಳಿಗಾರರಾದ ಶ್ರೀಮತಿ ಮೀರಾನಾಯಕ್, ಪುತ್ರಿ ಕೀರ್ತಿ, ಮೊಮ್ಮಗಳು, ಅಳಿಯ ಹಾಗೂ ಅಪಾರ ಬಂಧುವರ್ಗವನ್ನು ಪ್ರೊ. ಗೋವಿಂದರಾಯ ಹಮ್ಮಣ್ಣ ನಾಯಕ ಅವರು ಅಗಲಿದ್ದಾರೆ.

ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದ ಅವರು, ಮೈಸೂರಿನ ಕುವೆಂಪುನಗರ 4ನೇ ಮೇನ್, 5ನೇ ಕ್ರಾಸ್, ಮಾರುತಿ ದೇವಸ್ಥಾನದ ರಸ್ತೆ (ಕಾಮಾಕ್ಷಿ ಆಸ್ಪತ್ರೆ ಹಿಂಭಾಗ)ಯ ತಮ್ಮ ನಿವಾಸದಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಇಹಲೋಕ ತ್ಯಜಿಸಿದರು.

ನಾಳೆ (ಮೇ 27) ಮಧ್ಯಾಹ್ನ 12 ಗಂಟೆ ನಂತರ ಚಾಮುಂಡಿಬೆಟ್ಟದ ತಪ್ಪಲಿನ ಅನಿಲ ಚಿತಾಗಾರದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಉತ್ತರ ಕನ್ನಡ ಜಿಲ್ಲೆ, ಅಂಕೋಲ ತಾಲೂಕಿನ ಸೂರ್ವೆ ಗ್ರಾಮದಲ್ಲಿ 1935ರ ಸೆಪ್ಟೆಂಬರ್ 18ರಂದು ಜನಿಸಿದ್ದ ಪ್ರೊ ಜಿ.ಹೆಚ್. ನಾಯಕ್, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಬಳಿಕ ಮೈಸೂರಿನಲ್ಲೇ ನೆಲೆಸಿದ್ದರು. 1994–95ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗೂ 1996–97ರಲ್ಲಿ ಮೈಸೂರಿನ ಕುವೆಂಪು ಕಾವ್ಯಾಧ್ಯಯನದಲ್ಲೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಸಾಹಿತ್ಯ ಕೃಷಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ● 9ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 27 ಮೇ 2023

ಮೈಸೂರು ಉತ್ಪನ್ನಗಳ ಜಾಗತಿಕ ವ್ಯಾಪಾರಕ್ಕೆ ಪ್ರೋತ್ಸಾಹ



ಮೈಸೂರು, ಮೇ 26 (ಆರ್‌ಕೆ)– ಮೈಸೂರಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಒದಗಿಸಿ ಕೈಗಾರಿಕೋದ್ಯಮಿಗಳಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರ (ಡಿಐಸಿ)ದ ಜಂಟಿ ನಿರ್ದೇಶಕ ಟಿ. ದಿನೇಶ್ ಅಭಿಪ್ರಾಯಪಟ್ಟಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮತ್ತು ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟ (Federation of Indian Export Organisation)ವು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಎಂಸಿಸಿಐ) ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಎಂಎಸ್‌ಎಂಇ ಸಹಯೋಗದೊಂದಿಗೆ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಪೈ ವಿಸ್ತಾ ಹೋಟೆಲ್‌ನಲ್ಲಿ ಇಂದು ಆಯೋಜಿಸಿದ್ದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮೈಸೂರು ಅಗರಬತ್ತಿ, ಸಿಲ್ಕ್, ಸಾಂಪ್ರದಾಯಿಕ ಪೇಂಟಿಂಗ್ಸ್, ಗಂಧದೆಣ್ಣೆ, ಸಾಬೂನು, ಮಲ್ಲಿಗೆ, ಕರಕುಶಲ, ಗಂಜೀಫಾ ಕಲೆಯಂತಹ ಪ್ರಸಿದ್ಧ ಉತ್ಪನ್ನಗಳನ್ನು ರಫ್ತು ಮಾಡಿ ವಿದೇಶದಲ್ಲಿ ಮಾರುಕಟ್ಟೆ ಒದಗಿಸುವ ಮೂಲಕ ಸಾಂಸ್ಕೃತಿಕ ನಗರಿಯ ಖ್ಯಾತಿಯನ್ನು ವಿಶ್ವ ಭೂಪಟದಲ್ಲಿ ರಾರಾಜಿಸುವಂತೆ ಮಾಡಲು ರಫ್ತು ವ್ಯಾಪಾರಕ್ಕೆ ಉತ್ತೇಜನ ನೀಡಬೇಕೆಂದು ಅವರು ಸಲಹೆ ನೀಡಿದರು.

ಮೈಸೂರು ಸುತ್ತಮುತ್ತಲ ಕೈಗಾರಿಕೆಗಳಿಗೆ ಸರ್ಕಾರದಿಂದ ನೀಡಲಾಗುವ ಸಬ್ಸಿಡಿ, ಸಹಾಯ ಧನ ಹಾಗೂ ಇನ್ನಿತರ ಸೌಲಭ್ಯಗಳನ್ನು ಬಳಸಿಕೊಂಡು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿ ರಫ್ತು ವ್ಯಾಪಾರ ಮಾಡಿ ಆದಾಯ ಹೆಚ್ಚಿಸಿಕೊಳ್ಳುವ ಜೊತೆಗೆ ಮೈಸೂರಿನ ಅಭಿವೃದ್ಧಿಗೂ ಕೈ ಜೋಡಿಸಬೇಕೆಂದು ಅವರು ಇದೇ ಸಂದರ್ಭ ನುಡಿದರು. ಬೆಂಗಳೂರಿನ ಡಿಜಿಎಫ್‌ಟಿ ಸೆಕ್ಷನ್ ಮುಖ್ಯಸ್ಥ ರಾಜೇಂದ್ರ ಮೀನಾ, ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟದ ಉಪನಿರ್ದೇಶಕಿ ದಾನಿಷ ಮಿನು, ಜೂನಿಯರ್ ಅಸಿಸ್ಟೆಂಟ್ ವಿ. ಭಾಗ್ಯಲಕ್ಷ್ಮಿ, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಾರ್ಯದರ್ಶಿ ಶಿವಾಜಿರಾವ್, ಸಹ ಕಾರ್ಯದರ್ಶಿ ವಿನೋದ್ ಜೈನ್, ಎಂಎಸ್‌ಎಂಇ ಡೆಪ್ಯೂಟಿ ಡೈರೆಕ್ಟರ್ ಶಶಿಕುಮಾರ್, ಹ್ಯಾಂಡಿಕ್ರಾಫ್ಟ್ ಸರ್ವೀಸ್ ಸೆಂಟರ್‌ನ ಅಸಿಸ್ಟೆಂಟ್ ಡೈರೆಕ್ಟರ್ ಸುನೀಲ್ ಕುಮಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಸೇರಿದಂತೆ 80ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳು ಕಾರ್ಯ ಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದೇಶಿ ವ್ಯಾಪಾರ ನೀತಿಯಡಿ ಪ್ರಯೋಜನ ಪಡೆಯಲು ಬಹು ಉತ್ಪನ್ನಗಳು ಮತ್ತು ಬಹುಸೇವೆಗಳ ರಫ್ತಿಗಾಗಿ ನೋಂದಣಿ ಮಾಡಿಕೊಂಡು ಸದಸ್ಯರು ಪ್ರಮಾಣ ಪತ್ರ ನೀಡಲು ರಫ್ತು ಪ್ರಚಾರ ಮಂಡಳಿ (ಇಪಿಸಿ) ಕಾರ್ಯೋನ್ಮುಖವಾಗಿದೆ. ಆರಿಜಿನ್ ಪ್ರಿಫರೆನ್ಸಿಯಲ್ ಪ್ರಮಾಣ ಪತ್ರ, ವೀಸಾ ಪಡೆಯಲು ಶಿಫಾರಸು ಪತ್ರ, ಕಸ್ಟಮ್ಸ್, ಸುಂಕ ಪ್ರಮಾಣ ಪತ್ರ ನೀಡಲು ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟ ಸಹಕಾರ ನೀಡಲಿದೆ.

ವ್ಯಾಪಾರ ಮುನ್ನಡೆಸುವುದು ರಫ್ತುದಾರರ ಸಮಸ್ಯೆ ನಿವಾರಿಸುವುದು, ವಿದೇಶಿ ಖರೀದಿದಾರರು ವೀಕ್ಷಿಸಲು ಅನುಕೂಲ ಎಸ್‌ಎಂಎಸ್ ಮೂಲಕ ಹೊರದೇಶದ ವಿನಿಮಯ ನವೀಕರಣದಂತಹ ಪ್ರಯೋಜನಗಳನ್ನು ಒಕ್ಕೂಟದಿಂದ ಉದ್ದಿಮೆದಾರರು ಪಡೆಯಬಹುದಾಗಿದೆ.

ಪುಸ್ತಕಗಳು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಕಾರಿ

ಕೆ.ಆರ್.ನಗರ ಹಿರಿಯ ನಿವೃತ್ತ ಉಪನ್ಯಾಸಕ ಲಕ್ಕೇಗೌಡ



ಮೈಸೂರು, ಮೇ 26– ಪುಸ್ತಕಗಳು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿವೆ ಎಂದು ಕೆ.ಆರ್.ನಗರದ ನಿವೃತ್ತ ಉಪನ್ಯಾಸಕ ಲಕ್ಕೇಗೌಡ ಹೇಳಿದರು

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ರಾಜೇಶ್ವರಯ್ಯನವರ ದತ್ತಿ ಅಂಗವಾಗಿ ಮೈಸೂರಿನ ಕೃಷ್ಣಮೂರ್ತಿಪುರಂ ಮಂಜುಳ ಶಿವಪ್ರಸಾದ್ ಅವರ ಮನೆಯಲ್ಲಿ ಹಮ್ಮಿಕೊಂಡಿದ್ದ ಶರಣ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ದೇಶದಲ್ಲಿ ಮತ್ತು ವಿಶ್ವದಲ್ಲಿ ಸಾಧನೆ ಮಾಡಿರುವ ಸಾಧಕರ ಜೀವನಚರಿತ್ರೆ ಮತ್ತು ಆತ್ಮಕಥೆಗಳನ್ನು ಅಧ್ಯಯನ ಮಾಡಿದರೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಕೂಡಾ ಆತ್ಮವಿಶ್ವಾಸ ಹೆಚ್ಚಾಗಿ ತಾವೂ ಕೂಡಾ ಸಾಧನೆ ಮಾಡಿ ಶ್ರೇಷ್ಠ ವ್ಯಕ್ತಿಗಳಾಗಲು ಪ್ರೇರಣೆಯಾಗುತ್ತದೆ. ವಚನ ಸಾಹಿತ್ಯ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾದಾಗ ಸುಸಂಸ್ಕೃತ ಸಮಾಜ ತಾನೇ ತಾನಾಗಿ ನಿರ್ಮಾಣವಾಗುತ್ತದೆ ಎಂದರು. ಶರಣು ವಿಶ್ವವಚನ ಫೌಂಡೇಶನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ಮನೆಮನೆಗಳಲ್ಲಿ ಮತ್ತು ಮನಮನಗಳಲ್ಲಿ ವಚನ ಸಂದೇಶ ಬಿತ್ತರಿಸಲು ಶರಣ ಸಂಗಮ ಕಾರ್ಯಕ್ರಮ ಸಹಕಾರಿಯಾಗಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಂದಲೂ ವಚನ ವಾಚನ ಮತ್ತು ಗಾಯನ ಮಾಡಿಸುವುದರ ಮೂಲಕ ವಚನ ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಲಾಗುತ್ತಿದೆ. ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲ ಸಂಗಮದೇವನ ಎಂಬ ಬಸವಣ್ಣನವರ ವಚನದಿಂದ ಪ್ರೇರಿತರಾಗಿ ಆಧ್ಯಾತ್ಮಿಕತೆಯನ್ನು ವಯಸ್ಸಾದ ಮೇಲೆ ಮೈಗೂಡಿಸಿಕೊಳ್ಳುವುದಕ್ಕಿಂತ ಶಕ್ತಿ ಇರುವಾಗಲೇ ರೂಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕ ಡಾ. ದೀಪು, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಕಾರ್ಯದರ್ಶಿ ಅನಿತಾ ನಾಗರಾಜ್, ನಿವೃತ್ತ ಪ್ರಾಂಶುಪಾಲರಾದ ಮಂಜುಳ ಶಿವಪ್ರಸಾದ್, ಶಿವಪ್ರಸಾದ್ ಮೇಲುದುರ್ಗ ಮಠ, ಶಿಕ್ಷಕರಾದ ಎಚ್.ಟಿ.ಲೋಕೇಶ್, ಕಾಂತರಾಜು, ಭಾಗ್ಯ, ನಾಗವೀಣ, ಶೋಭ ಕಾಂತರಾಜು, ಛಾಯಾದೇವಿ, ರುಕ್ಮಿಣಿ, ಮನೋಹರ್, ಪ್ರೀತಿ, ಗಾಯತ್ರಿ ಪ್ರಸಾದ್, ಸೌಮ್ಯನಾಯಕ್, ರಾಜೇಶ್ವರಿ, ಯಶಸ್ವಿನಿ, ಕೆಂಪಮ್ಮಣಿ, ಗುರುನಾಗರಾಜ ಉಪಸ್ಥಿತರಿದ್ದರು.

ಸಿಐಐನ ನೂತನ ಪದಾಧಿಕಾರಿಗಳು


ಆರ್.ದಿನೇಶ್


ಸಂಜೀವ್ ಪುರಿ


ರಾಜೀವ್ ಮೇಮಾನಿ

ಮೈಸೂರು, ಮೇ 26– ನ್ಯಾಷನಲ್ ಕೌನ್ಸಿಲ್ ಆಫ್ ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಯ ಸಭೆಯಲ್ಲಿ 2023–24ನೇ ಸಾಲಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಟಿವಿಎಸ್ ಸಪ್ಲೈ ಚೈನ್ ಸೆಲ್ಯೂಷನ್ಸ್‌ನ ಉಪಾಧ್ಯಕ್ಷರಾದ ಆರ್. ದಿನೇಶ್ ಅಧ್ಯಕ್ಷರಾಗಿ, ಬಜಾಜ್ ಫಿನ್‌ಸರ್ವ್ ಲಿಮಿಟೆಡ್‌ನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಸಂಜೀವ್ ಬಜಾಜ್ ಅವರಿಂದ ಅಧಿಕಾರ ವಹಿಸಿಕೊಂಡರು. ಡಿಸಿಗ್ನೇಟ್ ಅಧ್ಯಕ್ಷರಾಗಿ ಸಂಜೀವ್ ಪುರಿ ಮತ್ತು ಉಪಾಧ್ಯಕ್ಷರಾಗಿ ರಾಜೀವ್ ಮೇಮಾನಿ ಆಯ್ಕೆಯಾಗಿದ್ದಾರೆ.



ಕಾಂಗ್ರೆಸ್‌ನ ಹಿರಿಯ ಮುಖಂಡರಾದ ತಿವಾರಿ ಅವರು ಶಾಸಕರಾದ ತನ್ವೀರ್ ಸೇಠ್ ಹಾಗೂ ಕೆ.ಹರೀಶ್‌ಗೌಡ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಲೋಕೇಶ್ ಪಿಯಾ, ಶಿವಣ್ಣ, ಸುನಂದಕುಮಾರ್ ಇದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಅರ್ಥಪೂರ್ಣ ಜನುಮ ದಿನಾಚರಣೆ



ಮೈಸೂರು, ಮೇ 26–ಶ್ರೀ ಶ್ರೀ ಅವಧೂತ ದತ್ತ ಪೀಠಾಧಿಪತಿ ಗಣಪತಿ ಸಚ್ಚಿದಾನಂದ ಸ್ವಾಮಿಗಳ 81 ನೇ ಜನುಮ ದಿನಾಚರಣೆ ಪ್ರಯುಕ್ತ ಗೋಪೂಜೆ ಮಾಡಿ ಬೆಲ್ಲ, ಹುಲ್ಲು, ಮೇವು ವಿತರಿಸುವ ಮೂಲಕ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಭಾರತಿ ಯೋಗಧಾಮದಲ್ಲಿ ಶ್ರೀಗಳ ಭಕ್ತ ವೃಂದದಿಂದ ಶ್ರೀಗಳ ಜನ್ಮದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಂತರ ಮಾತನಾಡಿದ ಕೇಬಲ್ ಮಹೇಶ್, ಗಣಪತಿ ಸಚ್ಚಿದಾನಂದ ಆಶ್ರಮ ಆಧ್ಯಾತ್ಮಿಕ ಧಾರ್ಮಿಕ ಕೇಂದ್ರದೊಂದಿಗೆ ಪರಿಸರ ಪೋಷಣೆ ಮನಃಶಾಂತಿ ಸಿಗುವ ತಾಣವಾಗಿದೆ. ಪ್ರವಾಸೋದ್ಯಮದಲ್ಲಿ ದೇಶವಿದೇಶದಿಂದ ಭಕ್ತವೃಂದವನ್ನು ಆಕರ್ಷಿಸುತ್ತದೆ. ಯಾವುದೇ ಜಾತಿಭೇದವಿಲ್ಲದೆ ಜನಮುಖಿ ಕೇಂದ್ರವಾಗಿದೆ. ಕಳೆದ ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ಮಂದಿಗೆ ಪ್ರತಿನಿತ್ಯ ಅನ್ನದಾನ ಮತ್ತು ವೈದ್ಯಕೀಯ ನೆರವು ನೀಡಿ ಮಾನವೀಯತೆ ಮೆರೆದಿದೆ. ಈ ಬಾರಿ ನಾಡಹಬ್ಬ ದಸರಾವನ್ನು ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಉದ್ಘಾಟಿಸುವಂತೆ ಸರ್ಕಾರ ಪರಿಗಣಿಸಲಿ. ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸೋದ್ಯಮಕ್ಕೂ ಸಹಕಾರಿಯಾಗಲಿದೆ ಎಂದರು. ಇದೇ ಸಂದರ್ಭದಲ್ಲಿ ಇಂದು ಅಯೋಧ್ಯೆಯಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆಯ ಗುದ್ದಲಿ ಪೂಜೆಯನ್ನು ಶ್ರೀಗಳು ನೆರವೇರಿಸುತ್ತಿರುವುದು ಭಕ್ತವೃಂದಕ್ಕೆ ಇನ್ನೂ ಹೆಚ್ಚಿನ ಸಂತೋಷ ಉಂಟು ಮಾಡಿದೆ. ಇದೇ ವೇಳೆ ಭಕ್ತಾದಿಗಳಾದ ಅಪೂರ್ವ ಸುರೇಶ್, ವಿಕ್ರಮ ಅಯ್ಯಂಗಾರ್, ದುರ್ಗಾ ಪ್ರಸಾದ್, ಆನಂದ್, ಚೇತನ್, ಮಹದೇವ್ ಸ್ವಾಮಿ, ಸಂತೋಷ್, ಹಾಗೂ ಇನ್ನಿತರ ಭಕ್ತಾದಿಗಳು ಹಾಜರಿದ್ದರು.

ನಿಧನ



ಕರ್ತಮಾಡ ಸಜಿನಿ ಕಾವೇರಮ್ಮ

ಮೈಸೂರು, ಮೇ 26– ಮೈಸೂರಿನ ವಿಜಯನಗರ 4ನೇ ಹಂತ, ಡ್ರಗ್ ಕಂಟ್ರೋಲರ್ ಬಿಲ್ಡಿಂಗ್ ಹಿಂಭಾಗದ ಇರುವ ಮನೆ ನಂ. 6162ರ ನಿವಾಸಿ ರೋಶನ್ ಅಪ್ಪಯ್ಯ ಅವರ ಪತ್ನಿ ಕರ್ತಮಾಡ ಸಜಿನಿ ಕಾವೇರಮ್ಮ (ಕುಪ್ಪಂಡ) ಅವರು ಶುಕ್ರವಾರ ಬೆಳಗ್ಗೆ ನಿಧನರಾದರು. ಅವರಿಗೆ 54 ವರ್ಷ ವಯಸ್ಸಾಗಿತ್ತು. ಮೃತರು ತಂದೆ ತಾಯಿ, ಪತಿ, ಓರ್ವ ಪುತ್ರ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು, ಮೇ 26– ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ 13 ಪರೀಕ್ಷಾ ಕೇಂದ್ರಗಳಲ್ಲಿ ಕೇಂದ್ರ ಲೋಕಸೇವಾ ಆಯೋಗದ ವತಿಯಿಂದ ಮೇ 28 ರಂದು ನಡೆಯಲಿರುವ 2023ನೇ ಸಾಲಿನ ಸಿವಿಲ್ ಸರ್ವೀಸ್ (ಪ್ರಿಲಿಮನರಿ) ಪರೀಕ್ಷೆಗಳ, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಕಲಂ 144 ಸಿ.ಆರ್.ಪಿ.ಸಿ. ಅನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಪರೀಕ್ಷಾ ಕೇಂದ್ರಗಳು: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಸದ್ವಿದ್ಯಾ ಪದವಿ ಪೂರ್ವ ಕಾಲೇಜು, ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಿ.ಬನುಮಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜು, ವಿಜಯ ವಿಠಲ ಪಿ.ಯು. ಕಾಲೇಜು, ಎಸ್.ಬಿ.ಆರ್.ಆರ್. ಮಹಾಜನ ಪದವಿಪೂರ್ವ ಕಾಲೇಜು, ಟೆರಿಷಿಯನ್ ಪದವಿ ಪೂರ್ವ ಕಾಲೇಜು, ವಿಭಜಿತ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಎಂ.ಎಂ.ಕೆ. & ಎಸ್.ಡಿ.ಎಂ. ಪದವಿಪೂರ್ವ ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜು ಕುವೆಂಪುನಗರ ಹಾಗೂ ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಪದವಿ ಪೂರ್ವ ಕಾಲೇಜು ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾವಧಿಯಲ್ಲಿ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ

ಮೈಸೂರು, ಮೇ 26– ಜೂನ್ 4 ರಂದು ಜಿಲ್ಲಾ ಮಟ್ಟದಲ್ಲಿ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಆಚರಿಸುವ ಸಂಬಂಧ ಮೇ 30 ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಕನ್ನಡಕ ವಿತರಣಾ ಕಾರ್ಯಕ್ರಮ

ಮೈಸೂರು, ಮೇ 26– ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್, ಅನ್ನಪೂರ್ಣ ಆಸ್ಪತ್ರೆ ವತಿಯಿಂದ ಮೇ 28ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಪುರಭವನದಲ್ಲಿ ಉಚಿತ ಕಣ್ಣು ತಪಾಸಣೆ, ಕನ್ನಡಕ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. ಸಂಖ್ಯೆ 88676 88676 ಅನ್ನು ಸಂಪರ್ಕಿಸಲು ಕೋರಲಾಗಿದೆ.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಒತ್ತು: ಶಾಸಕ ಕೆ.ಹರೀಶ್‌ಗೌಡ ಭರವಸೆ

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯಿಂದ ಸನ್ಮಾನ



ಮೈಸೂರು, ಮೇ 26– ತಾವು ಪ್ರತಿನಿಧಿಸುತ್ತಿರುವ ಚಾಮರಾಜ ಕ್ಷೇತ್ರದಲ್ಲಿ ಶೇ.70 ರಷ್ಟು ಮಂದಿ ಪದವೀಧರರಿದ್ದು, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಒತ್ತು ನೀಡುವುದಾಗಿ ಶಾಸಕ ಕೆ. ಹರೀಶ್‌ಗೌಡ ಭರವಸೆ ನೀಡಿದ್ದಾರೆ.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯು ಶುಕ್ರವಾರ ಕಾಲೇಜು ಎದುರು ಏರ್ಪಡಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಾನು ಕಳೆದ 10 ವರ್ಷಗಳಿಂದಲೂ ಉದ್ಯೋಗ ಮೇಳ ನಡೆಸಿಕೊಂಡು ಬರುತ್ತಿದ್ದೇನೆ. ಈಗ ಕಾಂಗ್ರೆಸ್ ಸರ್ಕಾರದ ಯುವನಿಧಿ ಗ್ಯಾರೆಂಟಿ ಕಾರ್ಯಕ್ರಮದಲ್ಲಿ ನಿರುದ್ಯೋಗಿಗಳಿಗೆ ಭತ್ಯೆ ಘೋಷಿಸಲಾಗಿದೆ. ಹೀಗಿದ್ದರೂ ಉದ್ಯೋಗ ಮೇಳಗಳನ್ನು ಮುಂದುವರೆಸುತ್ತಾ, ಯಾವ ರೀತಿ ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಬೇಕು ಎಂಬ ಬಗ್ಗೆ ತಜ್ಞರ ಸಮಿತಿ ರಚಿಸಿ, ಸಲಹೆ–ಸೂಚನೆ ಪಡೆಯುವುದಾಗಿ ಪ್ರಕಟಿಸಿದರು.

ನಾನು ಮನಸ್ಸು ಮಾಡಿದ್ದರೆ ಕಳೆದ ಬಾರಿಯೇ ಬಿಜೆಪಿ ಟಿಕೆಟ್ ಪಡೆದು ಶಾಸಕನಾಗಬಹುದಿತ್ತು. ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಎಂಟು ಬಾರಿ ಸಂಪರ್ಕಿಸಿದ್ದರು. ಆದರೆ ನಾನು ಸಿದ್ಧಾಂತಕ್ಕೆ ಬದ್ಧನಾಗಿ ರಾಜಕಾರಣ ಮಾಡುತ್ತಿರುವುದರಿಂದ ಆ ಪಕ್ಷ ಸೇರಲಿಲ್ಲ. ದೇಶದ ಜನರ ನಡುವೆ ಸಾಮರಸ್ಯ ಮೂಡಿಸುವ ಕೆಲಸ ಮಾಡುತ್ತಿರುವ ಪಕ್ಷ ಹಾಗೂ ನಾಯಕರಿರುವ ಕಾಂಗ್ರೆಸ್‌ನಿಂದ ಈಗ ಶಾಸಕನಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಅವರು ಹೇಳಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಇದ್ದ ಪರಿಸ್ಥಿತಿ ಇವತ್ತು ಇಲ್ಲ. ಕ್ರಾಫರ್ಡ್ ಭವನಕ್ಕೆ ಪ್ರವೇಶ ಮಾಡುವಾಗ ಸರಸ್ವತಿ ವಿಗ್ರಹಕ್ಕೆ ತಲೆಎತ್ತಿ ನಮಸ್ಕಾರ ಮಾಡಿ ಒಳ ಹೋಗುವಂತಹ ಪರಿಸ್ಥಿತಿ ಇರಬೇಕೇ ಹೊರತು ತಲೆತಗ್ಗಿಸಿ ಹೋಗುವಂತಾಗಬಾರದು. ನಾನು ಮೈವಿವಿ ಸಮಸ್ಯೆಗಳು ಸೇರಿದಂತೆ ಕ್ಷೇತ್ರದ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ ಎಂದರು.

ನಾನು ಪ್ರಧಾನಿ ನರೇಂದ್ರ ಮೋದಿಯವರು ಹೇಳಿರುವಂತೆ ಪ್ರಧಾನ ಸೇವಕ. ಆದರೆ ಅವರಂತೆ ಅಲ್ಲದೇ ನನ್ನದೇ ಆದ ರೀತಿಯಲ್ಲಿ ಜನಸೇವೆ ಮಾಡುತ್ತೇನೆ. ಜನ ನನ್ನನ್ನು ಬಳಸಿಕೊಂಡು ಸಾರ್ವಜನಿಕ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು ಎಂದರು. ನಾನು ಮಹಾರಾಜ ಕಾಲೇಜಿನಲ್ಲಿ ಪದವಿ ಪಡೆದಿದ್ದೇನೆ. ಇದೇ ವಿವಿಯಲ್ಲಿ ಅಧ್ಯಾಪಕೇತರ ನೌಕರನಾಗಿ ಕೆಲಸ ಮಾಡಿದ್ದೇನೆ. ನನಗೆ ಪದವಿ ಪ್ರಮಾಣ ಪತ್ರ ಹಾಗೂ ಉದ್ಯೋಗ ನೇಮಕಾತಿ ಪತ್ರ ನೀಡಿದ್ದ ವಿಶ್ರಾಂತ ಕುಲಪತಿ ಪ್ರೊ.ಎಂ. ಮಾದಯ್ಯ ಅವರಿಂದ ಇವತ್ತು ಆಶೀರ್ವಾದ ಪಡೆದಿದ್ದೇನೆ ಎಂದು ಭಾವುಕರಾಗಿ ಹೇಳಿದರು.


ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡುತ್ತಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅವರ ಶ್ರಮವೂ ನನ್ನ ಗೆಲುವಿನ ಹಿಂದೆ ಇದೆ. ಹೀಗಾಗಿ ಅವರು ಮುಂದಿನ ದಿನಗಳಲ್ಲಿ ಎಂ.ಎಲ್ಸಿ ಆಗುವ ಬದಲು ಮೈಸೂರಿನ ಎಂಪಿ ಆಗಬೇಕು ಎಂದು ಹರೀಶ್‌ಗೌಡ ಆಶಿಸಿದರು.

ಶ್ರೀ ನಟರಾಜ ಶಿಕ್ಷಣ ಸಂಸ್ಥೆಯ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಾನಸ ಗಂಗೋತ್ರಿ ಸಮಾಜಕಾರ್ಯ ವಿಭಾಗದ ಮುಖ್ಯಸ್ಥೆ ಡಾ.ಎಚ್.ಪಿ. ಜ್ಯೋತಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್. ಸಪ್ನ, 'ಆಂದೋಲನ' ವ್ಯವಸ್ಥಾಪಕ ಸಂಪಾದಕಿ ರಶ್ಮಿ ಕೋಟಿ ಮಾತನಾಡಿ, ಹರೀಶ್‌ಗೌಡರಿಗೆ ಶುಭ ಹಾರೈಸಿ, ಕ್ಷೇತ್ರದ ಸಮಸ್ಯೆಗಳ ನಿವಾರಣೆಗೆ ಕೆಲಸ ಮಾಡುವಂತೆ ಸಲಹೆ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್. ಉಮೇಶ್, ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ಎ. ಶ್ರೀಧರ್, ಮೈವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್. ಸೋಮಶೇಖರಪ್ಪ, ಪ್ರೊ.ಸಿ.ಡಿ. ಪರಶುರಾಮ್, ಮುಖ್ಯ ವೈದ್ಯಾಧಿಕಾರಿ ಡಾ. ಎಂ.ಎಸ್. ಬಸವರಾಜ್, ದೇವರಾಜ ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಕೆ.ದಿನೇಶ್, ಮಹಾರಾಣಿ ಕಲಾ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಸಂಗೀತಾ ಮುಖ್ಯ ಅತಿಥಿಗಳಾಗಿದ್ದರು.

ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಜಗದೀಶ್, ವೇದಿಕೆಯ ಅಧ್ಯಕ್ಷ ಆರ್. ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಸಹ ಕಾರ್ಯದರ್ಶಿ ಯೋಗೇಶ್, ಸಂಚಾಲಕ ವಿವೇಕ್, ಖಜಾಂಚಿ ಶಿವಕುಮಾರ್, ನಿರ್ದೇಶಕರಾದ ನವೀನಕುಮಾರ್, ಗಣೇಶ, ಮಧುಸೂದನ್, ಚಿದಾನಂದ, ಲೋಕೇಶ್, ವಿಜಯಕುಮಾರ್, ಅಭಿಷೇಕ್, ರಿಷಿರಾಜ್, ಮಂಜುನಾಥ್, ಮಂಜು ಆರ್. ಗೌಡ, ಅಖಿಲೇಶ್ ಗೌಡ, ಬಿ.ಎಸ್. ಚೇತನ್, ಎನ್. ಶಶಿಕುಮಾರ್, ಆನಂದ ಮೊದಲಾದವರು ಇದ್ದರು. ಮಹಾರಾಣಿ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವಿ.ಆರ್. ರಮೇಶ್ ಬಾಬು ನಿರೂಪಿಸಿದರು. ಡಾ.ಬಿ.ಎಸ್. ದಿನಮಣಿ ಸ್ವಾಗತಿಸಿದರು. ಡಾ.ಮಧುಸೂದನ್, ಡಾ.ಆರ್. ನಿಂಗರಾಜು ಪ್ರಾರ್ಥಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.5.2023 ಶನಿವಾರ, ಮಳೆ ನಕ್ಷತ್ರ: ರೋಹಿಣಿ, 25.05.2023 ರಿಂದ 07.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಮೈಸೂರ್ ಅರ್ಬನ್ ಹಾತ್, ಮೈಸೂರು:** ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ. ಸ್ಥಳ ಅರ್ಬನ್ ಹಾತ್ ಆವರಣ, ಹೆಬ್ಬಾಳು ಕೈಗಾರಿಕ ಪ್ರದೇಶ, ರಿಂಗ್ ರೋಡ್. ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ.

■ **ನೈಸರ್ಗಿಕ ಸಾವಯವ ರೈತರ ಸವಾಲುಗಳಿಗಾಗಿ ಸಂತೆ :** ಸ್ಥಳ: 18ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಗೃಹ ಶೋಭೆ:** ಟ್ರೇಡ್ ಫೇರ್. ಸ್ಥಳ: ಮಹಾರಾಜ ಕಾಲೇಜು ಮೈದಾನ. ಬೆಳಗ್ಗೆ 11ರಿಂದ ರಾತ್ರಿ 9ಕ್ಕೆ

■ **ಕರ್ನಾಟಕ ರಾಜ್ಯ ರೈತ ಸಂಘ :** ನೂತನ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಅಧ್ಯಕ್ಷತೆ : ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮುಖ್ಯ ಅತಿಥಿಗಳು : ಎಂ.ಎಸ್. ಅಶ್ವತ್ಥನಾರಾಯಣರಾಜೇ ಅರಸ್, ರವಿಕಿರಣ್, ಪ್ರಸನ್ನ ಎನ್. ಗೌಡ, ಎಸ್.ಸಿ. ಮಧುಚಂದನ್, ಉಗ್ರನರಸಿಂಹೇಗೌಡ, ಆಲಗೂಡು ಶಿವಕುಮಾರ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ಸುರುಚಿ ರಂಗ ಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–777, ಕಥೆ ಹೇಳುವವರು : ಶಿಕ್ಷಣ ತಜ್ಞ ಎನ್. ಪುರುಷೋತ್ತಮ ರಾವ್, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5.30 ರವರೆಗೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಾಗಾ ಮ್ಯೂಸಿಕ್ ಅಕಾಡೆಮಿ:** ವಿದುಷಿ ಸಿ.ಎಸ್.ಕೇಶವ ಚಂದ್ರ ಅವರಿಂದ ಕೊಳಲು ವಾದನ, ವಿದುಷಿ ಸಿ.ವಿ.ಶ್ರುತಿ–ವಯೋಲಿನ್, ವಿದ್ವಾನ್ ಸಾಯಿ ಶಿವು ಲಕ್ಷ್ಮೀ ಕೇಶವ್–ಮೃದಂಗ, ವಿದ್ವಾನ್ ಶಮಿತ್‌ಗೌಡ – ಘಟ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ ಸಂಜೆ 6ಕ್ಕೆ

■ **ಅಭಿವ್ಯಕ್ತಿ, ಕಲಾ ಮತ್ತು ಸಾಂಸ್ಕೃತಿಕ ಕೇಂದ್ರ :** ಸನ್ನುತ ಜಯರಾಂ ಅವರಿಂದ ಭರತನಾಟ್ಯ ರಂಗ ಪ್ರವೇಶ, ನಟುವಾಂಗ : ವಿದುಷಿ ಸುಹಾಸಿನಿ ಕೌಲಗಿ, ಗಾಯನ : ವಿದ್ವಾನ್ ವಿನಯ್ ರಾಜಮಾನ್ಯ, ಮೃದಂಗ: ವಿದ್ವಾನ್ ವೆಂಕಟ್ ಸುಬ್ರಹ್ಮಣ್ಯನ್, ಪಿಟೀಲು : ವಿದ್ವಾನ್ ಎಚ್.ಎಸ್. ತಾಂಡವಮೂರ್ತಿ, ಕೊಳಲು: ವಿದ್ವಾನ್ ಬಿ.ಭರತ್‌ರಾಜ್, ಮುಖ್ಯ ಅತಿಥಿಗಳು: ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕರಾದ ಡಾ.ಶೀಲಾ ಶ್ರೀಧರ್, ಗಾನಭಾರತಿ ಅಧ್ಯಕ್ಷೆ ಡಾ. ರಮಾ ವಿ.ಬೆಣ್ಣೂರು, ಸ್ಥಳ:ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಾದುರ್ಭಾವೋತ್ಸವ, ಬೆಳಗ್ಗೆ 7 ರಿಂದ ಶ್ರೀ ಶ್ರೀಪಾದಂಗಳವರಿಂದ ಸಕಲ ಪುರುಷರಿಗೆ ಶ್ರೀ ಮದ್ಭಾಗವತ ತಾತ್ಪರ್ಯ ಪಾಠ, ಬೆಳಗ್ಗೆ 8.15 ರಿಂದ ಸಾಮೂಹಿಕ ಪಾದಪೂಜೆ ಹಾಗೂ ತಪ್ತಮುದ್ರಾಧಾರಣೆ, ಸಂಜೆ 5.30 ರಿಂದ ವಿದ್ವಾಂಸರಾದ ಪಂಡಿತ್ ಕಲ್ಲಾಪುರ ಪವಮಾನಾಚಾರ್ಯ ಅವರಿಂದ ಕೃಷ್ಣನ ಬಾಲಲೀಲೆಗಳು ಕುರಿತು ಪ್ರವಚನ, ಸಂಜೆ 6.30 ರಿಂದ ಗಣ್ಯರು ಹಾಗೂ ವಿಶೇಷ ಸೇವಾಕರ್ತರಿಗೆ ಶ್ರೀ ಶ್ರೀಪಾದಂಗಳವರಿಂದ ಅನುಗ್ರಹ ಫಲಮಂತ್ರಾಕ್ಷತೆ, ಸಂಜೆ 7 ರಿಂದ ಶ್ರೀಪಾದಂಗಳವರ ಅನುಗ್ರಹ ಸಂದೇಶ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

ಗುಂಡ್ಲುಪೇಟೆಯಲ್ಲಿಂದು

■ **ಜನಚೈತನ್ಯ ಫೌಂಡೇಷನ್ :** ಹಾಡೊಂದು ನಾ ಹಾಡುವೆನು ಹೃದಯರಾಗದಲ್ಲಿ ಗಾಯನೋತ್ಸವ ಕಾರ್ಯಕ್ರಮ, ಅಧ್ಯಕ್ಷತೆ : ಗುಂಡ್ಲುಪೇಟೆ ಶ್ರೀವೆಂಕಟೇಶ್ವರ ಕಲಾಮಂದಿರದ ಮಾಲೀಕರಾದ ದಶರಥ ಶೆಟ್ಟಿ, ಮುಖ್ಯ ಅತಿಥಿಗಳು: ಡಾ.ಕೆ.ಎ.ಕೆ.ಸುರೇಂದ್ರನ್, ಡಾ. ರೇಖಾ ಅರುಣ್, ಡಾ. ರೇಖಾ ಮನಃಶಾಂತಿ, ಅಜರುದ್ದೀನ್, ಶ್ರೀಮತಿ ರಾಜೇಶ್ವರಿ ಚಂದ್ರಶೇಖರ್, ಸ್ಥಳ: ಶ್ರೀವೆಂಕಟೇಶ್ವರ ಕಲಾಮಂದಿರ, ಗುಂಡ್ಲುಪೇಟೆ, ಸಂಜೆ 4 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿ.ಎಫ್.ಟಿ.ಆರ್.ಐ ಸಿರಿಧಾನ್ಯದ ಸಿರಿ–ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ– ಬಾನುಲಿ ಸರಣಿ– ಪರಿಸರ ಪ್ರೀತಿಯ ಮ್ಯಾನ್ ಮನು ಅವರೊಡನೆ ಸಂದರ್ಶನ, ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ 10.00 ಆರ್. ಹರಿಣಿ– ಹಾಡುಗಾರಿಕೆ. **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ಗೌರಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯ ಕ್ರಮ, 3.30 ಮಕ್ಕಳ ಮಂಟಪ– ನಂದಗೋಕುಲ– ಕೆ. ಬಿ. ಮೀನಾ, 4.00 ಹಾಸ್ಯ ನಾಟಕ "ಸ್ವಯಂವರ" ರಚನೆ– ಎಸ್.ಎನ್. ಕಿತ್ತೂರ್ ನಿರ್ಮಾಣ: ಪ್ರಭುಸ್ವಾಮಿ ಮಳಿಮಠ, 4.30 ನೆನಪಿನಂಗಳ– "ಹೊಸಗನ್ನಡ ಸಾಹಿತ್ಯದಲ್ಲಿ ಹಾಸ್ಯ"–ಜಿ.ಪಿ. ರಾಜರತ್ನಂ ಅವರಿಂದ ಭಾಷಣ, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕುರಿತು ಮಾತನಾಡುತ್ತಾರೆ ಪ್ರೊ. ದೇ.ಜವರೇಗೌಡ, 6.50 ಕೃಷಿರಂಗ, ತೋರಣ ಹೂರಣ, ಪ್ರಸ್ತುತಿ–ಜಿ. ಶಾಂತಕುಮಾರ್, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಶಂಕರ್ ಭಟ್ಟಾಚಾರ್ಯ–ಸರೋಡ್ ವಾದನ

ಮೈಸೂರು ಪಾಲಿಕೆಯ 22-23ನೇ ಸಾಲಿನ ಆಯವ್ಯಯದಲ್ಲಿ ಶೇ.80ಕ್ಕಿಂತ ಅಧಿಕ ಸಾಧನೆ

● ಬಜೆಟ್ ಪೂರ್ವಭಾವಿ ಸಭೆಗೆ ಮುನ್ನ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ವಿವರಣೆ ● ಸಂಪನ್ಮೂಲ ಸಂಗ್ರಹದಲ್ಲಿ ನಿರೀಕ್ಷೆಗೂ ಮೀರಿ ಪ್ರಗತಿ



ಮೈಸೂರು, ಮೇ 26(ಎಸ್‌ಬಿಡಿ)- ಮೈಸೂರು ಮಹಾನಗರ ಪಾಲಿಕೆಯ 2022-23ನೇ ಸಾಲಿನ ಆಯವ್ಯಯದಲ್ಲಿ ಶೇ.80ಕ್ಕಿಂತ ಹೆಚ್ಚು ಗುರಿ ಸಾಧನೆಯಾಗಿದೆ ಎಂದು ಪಾಲಿಕೆ ಆಯುಕ್ತಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ಪಾಲಿಕೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ(ಹಳೇ ಕೌನ್ಸಿಲ್ ಹಾಲ್)ದಲ್ಲಿ ಶುಕ್ರವಾರ ಪ್ರಸಕ್ತ ಬಜೆಟ್ ಪೂರ್ವಭಾವಿ ಸಭೆಗೂ ಮುನ್ನ ಮೇಯರ್ ಶಿವಕುಮಾರ್ ಸಮ್ಮುಖದಲ್ಲಿ ಕಲಾಪ ಸಲಹಾ ಸಮಿತಿಗೆ ಹಿಂದಿನ ಬಜೆಟ್ ಸಾಧನೆ ಬಗ್ಗೆ ಮಾಹಿತಿ ನೀಡಿದರು.

ಹಿಂದಿನ ಆಯವ್ಯಯದಲ್ಲಿ ಶೇ.80ರಷ್ಟು ಅನುಷ್ಠಾನಗೊಂಡಿದೆ. ಈ ಹಿಂದೆ ವಾರ್ಷಿಕ 110-115 ಕೋಟಿ ರೂ. ಆಸ್ತಿ ತೆರಿಗೆ ಹಾಗೂ 40-50 ಕೋಟಿ ರೂ. ಕುಡಿಯುವ ನೀರಿನ ಶುಲ್ಕ ಸಂಗ್ರಹವಾಗುತ್ತಿತ್ತು. ಆದರೆ ಕಳೆದ ಆರ್ಥಿಕ ವರ್ಷದಲ್ಲಿ ಸಾರ್ವಜನಿಕರು, ಮೇಯರ್ ಹಾಗೂ ಪಾಲಿಕೆಯ ಎಲ್ಲಾ ಸದಸ್ಯರ ಸಹಕಾರದಿಂದ 170 ಕೋಟಿ ರೂ.ಗೂ ಹೆಚ್ಚು ಆಸ್ತಿ ತೆರಿಗೆ ಹಾಗೂ 93 ಕೋಟಿ ರೂ. ಕುಡಿಯುವ ನೀರಿನ ಶುಲ್ಕ ಸಂಗ್ರಹವಾಗಿದೆ ಎಂದರು.

ಈ ಎರಡು ಪ್ರಮುಖ ಆದಾಯ ಮೂಲದ ಸುಧಾರಣೆ ಜೊತೆಗೆ ಟ್ರೇಡಿಂಗ್ ಲೈಸೆನ್ಸ್‌ನಿಂದ 8-9 ಕೋಟಿ ರೂ. ಸಂಗ್ರಹವಾಗಿದೆ. ಒಟ್ಟಾರೆ ಎಲ್ಲಾ ಮೂಲಗಳಿಂದ ಕಳೆದ ಆರ್ಥಿಕ ವರ್ಷದಲ್ಲಿ 305 ಕೋಟಿ ರೂ. ಪಾಲಿಕೆಯ ಸ್ವಂತ ನಿಧಿ ಸಂಗ್ರಹವಾಗಿರುವುದು ಸಂತಸದಾಯಕ ಸಂಗತಿ. ಈ ಹಿಂದೆ ಸರಾಸರಿ 200-210 ಕೋಟಿ ರೂ. ಸಂಗ್ರಹವಾಗುತ್ತಿತ್ತು. ಸಂಪನ್ಮೂಲ ಕ್ರೋಢೀಕರಣದಲ್ಲಾದ ಸುಧಾರಣೆ ಪರಿಣಾಮ ನಾಲ್ಕೂವರೆ ವರ್ಷಗಳಿಂದ ಬಾಕಿ ಇದ್ದ ಗುತ್ತಿಗೆದಾರರ ಬಿಲ್ ಪಾವತಿಗೆ ನೆರವಾಯಿತು ಎಂದು ತಿಳಿಸಿದರು.

ಯುಜಿಡಿ ಹಾಗೂ ನೀರು ಸರಬರಾಜು ಸಂಬಂಧ ಮೇ 20ರವರೆಗೂ ಎಲ್ಲಾ ಬಿಲ್‌ಗಳು ಸಿದ್ಧ ಅನುದಾನದಲ್ಲಿ(ರೆಡಿ ಗ್ರಾಂಟ್) ಕ್ಲಿಯರ್ ಮಾಡಲಾಗಿದೆ. ಇನ್ನು ಸಾಮಾನ್ಯ ಅನುದಾನದಲ್ಲಿ ಕಾಮಗಾರಿ ನಡೆಸಿರುವ ಗುತ್ತಿಗೆದಾರರಿಗೂ ಫೆಬ್ರವರಿವರೆಗೆ ಕ್ಲಿಯರ್ ಆಗಿದ್ದು ಇನ್ನೆರಡು ತಿಂಗಳ ಬಿಲ್ ಮಾತ್ರ ಬಾಕಿ ಇದೆ. ಗುತ್ತಿಗೆದಾರರ ಬಿಲ್‌ಗಳಿಗೆ ಅನುಮೋದನೆ ನೀಡಲಾಗಿದ್ದು ಬಜೆಟ್ ಮುಗಿದ ತಕ್ಷಣವೇ ಹಣ ಬಿಡುಗಡೆಯಾಗಲಿದೆ. ಇದರಿಂದ ಟೆಂಡರ್‌ನಲ್ಲಿ ಗುತ್ತಿಗೆದಾರರು ಉತ್ಸಾಹದಿಂದ ಭಾಗಿಯಾಗುವುದರ ಜೊತೆಗೆ ವಿಶ್ವಾಸದಿಂದ ಕಾಮಗಾರಿ ನಡೆಸುವ ವಾತಾವರಣ ನಿರ್ಮಾಣವಾಗಿದೆ ಎಂದು ಹೇಳಿದರು.

3 ಸರ್ವೀಸ್ ಸ್ಟೇಷನ್: ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಸದ್ಯ ಪಾಲಿಕೆ ಪ್ರಧಾನ ಕಚೇರಿ ಆವರಣದಲ್ಲಿ ಮಾತ್ರ ವಾಹನಗಳಿಗೆ ಇಂಧನ ತುಂಬಿಸುವುದು ಹಾಗೂ ರಿಪೇರಿ ಕೆಲಸ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಿಂದ ವಿದ್ಯಾರಣ್ಯಪುರಂ ಸೀವೇಜ್ ಫಾರಂ ಜೊತೆಗೆ ಕೆಸರೆ ಹಾಗೂ ರಾಯನಕೆರೆ ಘಟಕಕ್ಕೆ ಕಸ ವಿಲೇವಾರಿ ಮಾಡಲಾಗುತ್ತಿದ್ದು ಈ ಮೂರು ಕಡೆ ಸರ್ವೀಸ್ ಸ್ಟೇಷನ್ ನಿರ್ಮಾಣಕ್ಕೆ ಕಾರ್ಯಾದೇಶ ಆಗಿದೆ. ತಲಾ ಮೂರು ವಲಯ ಕಚೇರಿ ವ್ಯಾಪ್ತಿಯ ವಾಹನಗಳ ನಿರ್ವಹಣೆ ಮಾಡಲಾಗುತ್ತದೆ. ಇದರಿಂದ ತ್ವರಿತ ಕಾರ್ಯಾಚರಣೆಗೆ ಅನುಕೂಲವಾಗಲಿದೆ ಎಂದರು.

ವಿವಿಧ ಯೋಜನೆ: ಹಿಂದಿನ ಬಜೆಟ್‌ನಲ್ಲಿ ಘೋಷಿಸಿದಂತೆ ವೃತ್ತಗಳ ಅಭಿವೃದ್ಧಿ ಸೇರಿದಂತೆ ಹಲವು ಯೋಜನೆಗಳನ್ನು ಕೈಗೊಳ್ಳಲಾಗಿದೆ. ನರಸಿಂಹರಾಜ ಕ್ಷೇತ್ರದಲ್ಲಿ ಒಂದು, ಹೆಬ್ಬಾಳಿನ ಕುವೆಂಪು ವೃತ್ತ, ಕನ್ನೇಗೌಡನ ಕೊಪ್ಪಲು ವೃತ್ತ ಸೇರಿ ಚಾಮರಾಜ ಕ್ಷೇತ್ರದಲ್ಲಿ ಮೂರು ವೃತ್ತಗಳ ಅಭಿವೃದ್ಧಿ ಯೋಜನೆ ಪ್ರಕ್ರಿಯೆ ನಡೆದಿದೆ. ನಜರ್‌ಬಾದ್‌ನ ಮಲೆ ಮಹದೇಶ್ವರ ರಸ್ತೆ ಅಭಿವೃದ್ಧಿಯಾಗಿದೆ. ಕ್ರೀಡಾಂಗಣ ಅಭಿವೃದ್ಧಿ ಯೋಜನೆಯಡಿ ಹೆಬ್ಬಾಳಿನಲ್ಲಿ ಸ್ಕೇಟಿಂಗ್ ರಿಂಗ್ ನಿರ್ಮಾಣ ಕಾಮಗಾರಿಗೆ ಶನಿವಾರ ಗುದ್ದಲಿ ಪೂಜೆ ನೆರವೇರುತ್ತಿದೆ. ದಟ್ಟಗಳ್ಳಿಯಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣ ಮುಕ್ತಾಯ ಹಂತದಲ್ಲಿದೆ. ನರಸಿಂಹರಾಜ ಕ್ಷೇತ್ರದಲ್ಲಿ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಿಸುವ ಯೋಜನೆಯಿದ್ದು ಅದು ಕಾರ್ಯಾದೇಶದ ಹಂತದಲ್ಲಿದೆ. ದೇವನೂರು ಕೆರೆ ಅಭಿವೃದ್ಧಿ ಯೋಜನೆಯನ್ನು ಮುಡಾ ಸಹಯೋಗದಲ್ಲಿ ಆರಂಭಿಸಲಾಗುತ್ತಿದೆ. ಕುಡಿಯುವ ನೀರಿನ ಹಿಂದಿನ ವರ್ಷದ ಬಾಕಿ ಮೇಲಿನ ಬಡ್ಡಿ ನಿಶ್ಚಲಗೊಳಿಸುವ ನಿರ್ಧಾರವೂ ಅನುಷ್ಠಾನವಾಗಿದೆ. ಐದು ಪರಿಸರ ಸ್ನೇಹಿ ವಾಹನಗಳನ್ನು ಖರೀದಿಸಲಾಗಿದೆ ಎಂದು ವಿವರಣೆ ನೀಡಿದರು.

ಸ್ವಂತ ಕಟ್ಟಡ ನಿರ್ಮಾಣ: ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಲಯ ಕಚೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಹಾಗೂ ಅಗತ್ಯವಿರುವ ಕಡೆ ಕಟ್ಟಡ ವಿಸ್ತರಣೆಯನ್ನು ಹಿಂದಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಹಾಗೆಯೇ ವಲಯ ಕಚೇರಿ 7ರ ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಆಗಿದ್ದು, ವಲಯ 8ರ ಕಚೇರಿ ಕಟ್ಟಡದ ಅಂದಾಜು ಪಟ್ಟಿ ಸಿದ್ಧವಾಗಿ ಟೆಂಡರ್ ಹಂತದಲ್ಲಿದೆ. ವಲಯ ಕಚೇರಿ 3 ಹಾಗೂ 5ರ ಕಟ್ಟಡ ನಿರ್ಮಾಣ ಆರಂಭವಾಗಿದೆ. ವಲಯ ಕಚೇರಿ 4ರ ಸ್ವಂತ ಕಟ್ಟಡ ವಿಸ್ತರಣೆಗೆ ಕಾರ್ಯಾದೇಶ ಆಗಿದೆ. ವಲಯ ಕಚೇರಿ 9ಕ್ಕೆ ನೂತನ ಕಟ್ಟಡ ನಿರ್ಮಿಸಲು ಸ್ಥಳ ಗುರುತಿಸಿ, ಅನುಮೋದನೆ ಪಡೆಯಲಾಗಿದೆ. ಇನ್ನು ವಲಯ ಕಚೇರಿ 1ರ ಕಟ್ಟಡ ನಿರ್ಮಾಣ ಮುಕ್ತಾಯದ ಹಂತದಲ್ಲಿದೆ ಎಂದು ತಿಳಿಸಿದರು.

ಸ್ಮಶಾನ ಅಭಿವೃದ್ಧಿ: ಗೋಕುಲಂ, ಗೌಸಿಯಾ ನಗರ ಸೇರಿದಂತೆ ವಿವಿಧೆಡೆ ಇರುವ ಸ್ಮಶಾನಗಳ ಅಭಿವೃದ್ಧಿಯಾಗಿದೆ. ಲಭ್ಯವಿದ್ದ ಅನುದಾನದಲ್ಲಿ ಅಗತ್ಯದಷ್ಟು ಹಣ ಒದಗಿಸಲಾಗಿದೆ. ಕಳೆದ 2 ವರ್ಷಗಳಿಂದ ಗ್ರಂಥಾಲಯ ಸೆಸ್ ವರ್ಗಾವಣೆಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಸಾರ್ವಜನಿಕರಿಂದ ಸಂಗ್ರಹಿಸುವ ಗ್ರಂಥಾಲಯ ಸೆಸ್ ಅನ್ನು ಅನ್ಯ ಕೆಲಸಗಳಿಗೆ ಬಳಸುತ್ತಿಲ್ಲ. ಕಾಲಾನುಸಾರ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ವರ್ಗಾವಣೆ ಮಾಡಲಾಗುತ್ತಿದೆ. 2021-22ನೇ ಸಾಲಿಗಿಂತ ಹಿಂದಿನ ಬಾಕಿ 19-20 ಕೋಟಿ ರೂ. ಸೆಸ್ ಮೊತ್ತವನ್ನು ಏಕಕಾಲಕ್ಕೆ ವರ್ಗಾವಣೆ ಮಾಡಿದರೆ ಪಾಲಿಕೆ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗುತ್ತದೆ. ಹಂತ ಹಂತವಾಗಿ ಬಾಕಿ ಪಾವತಿಸುವ ಸಂಬಂಧ ಕ್ರಮ ವಹಿಸಬೇಕಿದೆ ಎಂದರು.

ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್.ನಾಗರಾಜು, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ, ಸದಸ್ಯ ಎಂ.ಸತೀಶ್, ಪಟ್ಟಣ ಯೋಜನೆ ಮತ್ತು ಸುಧಾರಣೆಗಾಗಿ ಸ್ಥಾಯಿ ಸಮಿತಿ ಅಧ್ಯಕ್ಷೆ ಹೆಚ್.ಎಂ.ಶಾಂತಕುಮಾರಿ, ಸದಸ್ಯರಾದ ಕೆ.ವಿ.ಶ್ರೀಧರ್, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷ ವಿ.ರಮೇಶ್, ಸದಸ್ಯರಾದ ಅಯೂಬ್‌ಖಾನ್, ಪುಷ್ಪಲತಾ ಜಗನ್ನಾಥ್, ಎಂ.ಎಸ್.ಶೋಭಾ, ಮಾಜಿ ಉಪಮೇಯರ್‌ಗಳಾದ ಸಿ.ಶ್ರೀಧರ್, ಅನ್ವರ್ ಬೇಗ್, ಸದಸ್ಯರಾದ ಬಿ.ವಿ.ಮಂಜುನಾಥ್, ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಅಶ್ವಿನಿ ಅನಂತ್, ಎಂ.ಯು. ಸುಬ್ಬಯ್ಯ, ಭಾಗ್ಯ ಮಾದೇಶ್, ಸತ್ಯರಾಜ್, ಎಡಿಸಿ ರೂಪಾ, ಎಸ್‌ಇ ಮಹೇಶ್, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

> **ಕಳೆದ ಆರ್ಥಿಕ ವರ್ಷದಲ್ಲಿ 170 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾಗಿದೆ. ಪ್ರಸಕ್ತ ಸಾಲಿನ ಏಪ್ರಿಲ್‌ನಿಂದ ಈವರೆಗೆ 97 ಕೋಟಿ ರೂ. ಸಂಗ್ರಹವಾಗಿದ್ದು, ಮಾಸಾಂತ್ಯಕ್ಕೆ 100 ಕೋಟಿ ರೂ. ದಾಟಬಹುದು. ಸಾರ್ವಜನಿಕರು ಆಸ್ತಿ ತೆರಿಗೆ ಹಾಗೂ ಕುಡಿಯುವ ನೀರಿನ ಶುಲ್ಕವನ್ನು ಸಮರ್ಪಕವಾಗಿ ಪಾವತಿಸುತ್ತಿದ್ದಾರೆ. ಈ ಸಾಧನೆಗೆ ಕಾರಣರಾದ ಸಾರ್ವಜನಿಕರು, ಮೇಯರ್, ಉಪಮೇಯರ್, ಪಾಲಿಕೆ ಸದಸ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಧನ್ಯವಾದ ತಿಳಿಸುತ್ತೇನೆ.**
> **-ಲಕ್ಷ್ಮಿಕಾಂತ ರೆಡ್ಡಿ, ಆಯುಕ್ತ,** ಮೈಸೂರು ಮಹಾನಗರ ಪಾಲಿಕೆ

ಇಂದು ಸ್ಕೇಟಿಂಗ್ ರಿಂಗ್ ಕಾಮಗಾರಿಗೆ ಚಾಲನೆ

ಮೈಸೂರು, ಮೇ 26- ಚಾಮರಾಜ ಕ್ಷೇತ್ರದಲ್ಲಿ ನಿರ್ಮಿಸಲುದ್ದೇಶಿಸಿರುವ ಸ್ಕೇಟಿಂಗ್ ರಿಂಗ್ ಕಾಮಗಾರಿಗೆ ಶನಿವಾರ ವಿದ್ಯುಕ್ತ ಚಾಲನೆ ದೊರಕಲಿದೆ.

ಪಾಲಿಕೆ ವಲಯ ಕಚೇರಿ 5ರ ವ್ಯಾಪ್ತಿಯ ಹೆಬ್ಬಾಳು ಸಿಐಟಿಬಿ ಚೌಲ್ಟ್ರಿ ಪಕ್ಕದ ಆಟದ ಮೈದಾನದಲ್ಲಿ ಜೆಎನ್ ನರ್ಮ್ ಯೋಜನೆಯಡಿ 3.50 ಲಕ್ಷ ರೂ. ಅಂದಾಜು ಮೊತ್ತದಲ್ಲಿ ಸ್ಕೇಟಿಂಗ್ ರಿಂಗ್ ನಿರ್ಮಾಣ ಕಾಮಗಾರಿ ಕೈಗೊಳ್ಳುತ್ತಿದ್ದು ಶನಿವಾರ ಬೆಳಗ್ಗೆ 9.30ಕ್ಕೆ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಕೆ.ಹರೀಶ್‌ಗೌಡರು ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಮಂಚೇಗೌಡನಕೊಪ್ಪಲಲ್ಲಿ ಕಲುಷಿತ ನೀರು ಪೂರೈಕೆ: ಅಧಿಕಾರಿಗಳ ತರಾಟೆಗೆ ತೆಗೆದುಕೊಂಡ ಮೇಯರ್

ತಕ್ಷಣ ಕ್ರಮ ಕೈಗೊಳ್ಳುವಂತೆ ತಾಕೀತು

ಮೈಸೂರು, ಮೇ 26(ಎಸ್‌ಬಿಡಿ)- ಮೈಸೂರಿನ ಮಂಚೇಗೌಡನ ಕೊಪ್ಪಲು ವಾರ್ಡ್‌ನಲ್ಲಿ ಕಲುಷಿತ ನೀರು ಪೂರೈಕೆಯಾಗುತ್ತಿದ್ದರೂ ನಿರ್ಲಕ್ಷಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಮೇಯರ್ ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಬಜೆಟ್ ಪೂರ್ವಭಾವಿ ಸಭೆಗೆ ಮುನ್ನ ಮಂಚೇಗೌಡನಕೊಪ್ಪಲು ಭಾಗದ ಕಾರ್ಪೊರೇಟರ್ ಪ್ರೇಮಾ ಶಂಕರೇಗೌಡರು ದೂರಿದ್ದಕ್ಕೆ ಪ್ರತಿಕ್ರಿಯಿಸಿ, ಈ ರೀತಿ ಎಚ್ಚರಿಕೆ ನೀಡಿದರಲ್ಲದೆ ಕೂಡಲೇ ಕ್ರಮ ಕೈಗೊಳ್ಳಲು ಅಧಿಕಾರಿಗಳನ್ನು ಸಭೆಯಿಂದಲೇ ಕಳುಹಿಸಿದರು.

ಜನರ ಜೀವದ ಜೊತೆ ಚೆಲ್ಲಾಟ: ಪ್ರೇಮಾ ಶಂಕರೇಗೌಡ ಮಾತನಾಡಿ, ಮಂಚೇಗೌಡನ ಕೊಪ್ಪಲು, ಮಹಾಜನ ಲೇಔಟ್‌ಗೆ ಕಲುಷಿತ ನೀರು ಪೂರೈಕೆಯಾಗುತ್ತಿದೆ. ನೀರಿನಲ್ಲಿ ಹುಳುಗಳು ಬರುತ್ತಿವೆ ಎಂದು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಯಾವ ಅಧಿಕಾರಿ ಬಂದು ಪರಿಶೀಲನೆ ನಡೆಸಿದ್ದಾರೆ ಕೇಳಿ? ಕಾರ್ಪೊರೇಟರ್‌ಗೆ ಕಿಂಚಿತ್ತೂ ಬೆಲೆಯಿಲ್ಲವೇ? ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದೀರಾ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆಯ ಬಳಿಕ ಪರಿಶೀಲನೆಗೆ ತೆರಳುವುದಾಗಿ ಅಧಿಕಾರಿಯೊಬ್ಬರು ಹೇಳಿದ್ದರಿಂದ ಸಿಟ್ಟಾದ ಎಸ್‌ಬಿಎಂ ಮಂಜು, ಅಧಿಕಾರಿಗಳಿಗೆ ಸಭೆ ಮುಖ್ಯವೋ? ಅಥವಾ ಜನರ ಜೀವ ಮುಖ್ಯವೋ?. ಮಲೀನ ನೀರು ಸೇವಿಸಿ ಜನರಿಗೇನಾದರೂ ತೊಂದರೆಯಾದರೆ ಯಾರು ಹೊಣೆ? ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಅಯೂಬ್‌ಖಾನ್ ಮಾತನಾಡಿ, ಹಿಂದೆ ಮಲೀನ ನೀರು ಪೂರೈಕೆಯಾಗುವುದು ಗಮನಕ್ಕೆ ಬಂದ ತಕ್ಷಣವೇ ಕ್ರಮ ಕೈಗೊಳ್ಳಲಾಗುತ್ತಿತ್ತು. ಎಷ್ಟು ಸಮಯವಾದರೂ ಸರಿಪಡಿಸದೆ ವಾಪಸ್ಸಾಗುತ್ತಿರಲಿಲ್ಲ. ಆದರೆ ಈಗ 8 ದಿನವಾದರೂ ಸರಿಪಡಿಸುವುದಿಲ್ಲ. ವಾರದಿಂದ ಮಲೀನ ನೀರು ಪೂರೈಕೆಯಾಗುತ್ತಿರುವ ಬಗ್ಗೆ ಸ್ಥಳೀಯ ಕಾರ್ಪೊರೇಟರ್ ತಿಳಿಸಿದ್ದರೂ ಅಧಿಕಾರಿಗಳು ಏಕೆ ಕ್ರಮ ವಹಿಸಿಲ್ಲ. ವಾರ್ಡ್ ಇನ್ಸ್‌ಪೆಕ್ಟರ್‌ಗಳು, ಇಂಜಿನಿಯರ್‌ಗಳು ಏನು ಮಾಡುತ್ತಿದ್ದಾರೆ. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಅಮಾನತು ಮಾಡಿ, ಸಾಧ್ಯವಾದರೆ ಹುದ್ದೆಯಿಂದ ಬಿಡುಗಡೆ ಮಾಡಿ ಕಳುಹಿಸಿ. ನಂತರ ಸಭೆ ಮುಂದುವರೆಸಿ ಎಂದು ಪಟ್ಟು ಹಿಡಿದರು.

ಬಳಿಕ ಮೇಯರ್ ಶಿವಕುಮಾರ್ ಮಾತನಾಡಿ, ವಾರ್ಡ್ ಇನ್ಸ್‌ಪೆಕ್ಟರ್ ಅನ್ನು ವಿಚಾರಣೆ ಮಾಡಿ, ಇದರಲ್ಲಿ ಯಾವ ಅಧಿಕಾರಿ ತಪ್ಪಿದೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರಲ್ಲದೆ, ಸಭೆಯಲ್ಲಿದ್ದ ಎಇ, ಎಇಇಗಳು ಕೂಡಲೇ ವಾರ್ಡ್‌ಗೆ ಭೇಟಿ ನೀಡಿ ಪರಿಶೀಲಿಸಿ. ಎಲ್ಲಿ ಮಲೀನವಾಗುತ್ತಿದೆ ಎಂದು ಪತ್ತೆಹಚ್ಚಿ ಸರಿಪಡಿಸಿ. ಅಗತ್ಯವಾದ ಎಲ್ಲಾ ವ್ಯವಸ್ಥೆ ಮಾಡುತ್ತೇವೆ. ಎಷ್ಟು ಸಮಯವಾದರೂ ಸರಿ ಸಮಸ್ಯೆಯನ್ನು ಪರಿಹರಿಸಬೇಕೆಂದು ತಾಕೀತು ಮಾಡಿದರು.

ಸ್ವಚ್ಛತಾ ಕಾರ್ಯ ನಿರ್ವಹಿಸುವ ಎಲ್ಲಾ ಪೌರ ಕಾರ್ಮಿಕರ ಖಾಯಂ ಮಾಡಿ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪೌರಕಾರ್ಮಿಕರ ಮಹಾಸಂಘ ಮನವಿ



ಮೈಸೂರು,ಮೇ 26(ಪಿಎಂ)- ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೇರ ಪಾವತಿ ಪೌರ ಕಾರ್ಮಿಕರು, ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಮತ್ತು ಒಳಚರಂಡಿ ಕಾರ್ಮಿಕರು ಸೇರಿದಂತೆ ಸ್ವಚ್ಛತೆ ಕೆಲಸದಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರನ್ನು ಏಕ ಕಾಲದಲ್ಲಿ ಖಾಯಂ ಮಾಡಬೇಕೆಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರ ಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರಿಗೆ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ, ಇದೀಗ ನಮ್ಮ ಬೇಡಿಕೆ ಎಂದರೆ ಸ್ವಚ್ಛತೆ ಕೆಲಸದಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರನ್ನು ಏಕಕಾಲದಲ್ಲಿ ಖಾಯಂ ಮಾಡಬೇಕು ಎಂಬುದಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಇದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.ರಾಜ್ಯಾದ್ಯಂತ ಕೆಲಸ ಸ್ಥಗಿತಗೊಳಿಸಿ ಹೋರಾಟ ನಡೆಸಿದ ಹಿನ್ನೆಲೆಯಲ್ಲಿ 2022ರ ಜು.1ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೇರ ಪಾವತಿ ಪೌರಕಾರ್ಮಿಕರನ್ನು ಖಾಯಂ ಮಾಡುವುದಾಗಿ ಹಾಗೂ ಹೊರ ಗುತ್ತಿಗೆಯಡಿ ಕೆಲಸ ಮಾಡುತ್ತಿರುವ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಮತ್ತು ಒಳಚರಂಡಿ ಕಾರ್ಮಿಕರನ್ನು ನೇರ ಪಾವತಿಯಡಿಗೆ ತರುವುದಾಗಿ ಭರವಸೆ ನೀಡಿದ್ದರು. ಅದರಂತೆ ಮೊದಲ ಹಂತದಲ್ಲಿ 11,333 ಹಾಗೂ ಎರಡನೇ ಹಂತದಲ್ಲಿ 12,872 ನೇರ ಪಾವತಿ ಪೌರಕಾರ್ಮಿಕರನ್ನು ಖಾಯಂ ಮಾಡಲು ಆದೇಶ ಹೊರಡಿಸಿದ್ದರು. ಆದರೆ ಸಮರ್ಪಕವಾಗಿ ಈ ಖಾಯಂ ಪ್ರಕ್ರಿಯೆ ನಡೆಯಲಿಲ್ಲ ಎಂದು ಹೇಳಿದರು. ಮಹಾಸಂಘದ ಉಪಾಧ್ಯಕ್ಷ ಆರ್.ಶಿವು, ಖಜಾಂಚಿ ಯತಿರಾಜು, ಕೊಳಚೆ ನಿವಾಸಿಗಳ ಒಕ್ಕೂಟದ ಅಧ್ಯಕ್ಷಆರ್.ದಾಸ್ ಗೋಷ್ಠಿಯಲ್ಲಿದ್ದರು.

ಮೈ ರಿಯಾಲಿಟಿ ಪ್ರಾಪರ್ಟಿ ಎಕ್ಸ್‌ಪೋಗೆ ಚಾಲನೆ



ಮೈ ರಿಯಾಲಿಟಿ ಪ್ರಾಪರ್ಟಿ ಎಕ್ಸ್‌ಪೋಗೆ ಚಾಲನೆ ನೀಡಿದ ನಂತರ ಮಳಿಗೆಗಳನ್ನು ವೀಕ್ಷಿಸಿದ ಜಿಲ್ಲಾಧಿಕಾರಿ ಡಾ,.ರಾಜೇಂದ್ರ

ಮೈಸೂರು, ಮೇ 26(ಎಂಟಿವೈ)- ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆರಂಭವಾದ 'ಮೈ ರಿಯಾಲಿಟಿ' ಮೆಗಾ ಪ್ರಾಪರ್ಟಿ ಎಕ್ಸ್‌ಪೋದಲ್ಲಿ ರಿಯಲ್ ಎಸ್ಟೇಟ್, ವಸತಿ ಸಮುಚ್ಚಯ ಹಾಗೂ ಲೇಔಟ್‌ಗಳ ಸಂಬಂಧಿಸಿದ ಮಾಹಿತಿ ಅನಾವರಣಗೊಂಡಿದೆ.

ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ (ಬಿಎಐ) ಹಾಗೂ ಕ್ರೆಡಾಯ್ ಸಂಸ್ಥೆಯ ಸಹಯೋಗದಲ್ಲಿ ಮೇ 29ರವರೆಗೆ 'ಮೈ ರಿಯಾಲಿಟಿ' ಮೆಗಾ ಪ್ರಾಪರ್ಟಿ ಎಕ್ಸ್‌ಪೋ' ಆಯೋಜಿಸಿದ್ದು, ಪ್ಲಾಟಿನಂ 4, ಗೋಲ್ಡ್ 4, ಸಿಲ್ವರ್ ಮಳಿಗೆ 4 ಹಾಗೂ 26 ಸಾಮಾನ್ಯ ಮಳಿಗೆ ತೆರೆಯಲಾಗಿದೆ.

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9 ಗಂಟೆವರೆಗೂ ವೀಕ್ಷಿಸಬಹುದಾಗಿದೆ. ಈ ಎಲ್ಲಾ ಮಳಿಗೆಗಳಲ್ಲಿ ರಿಯಲ್ ಎಸ್ಟೇಟ್, ಅಪಾರ್ಟ್‌ಮೆಂಟ್, ಲೇಔಟ್, ಡೆವಲಪರ್ಸ್, ಅಭಿವೃದ್ಧಿ ಪಡಿಸಿರುವ ವಿವಿಧ ಲೇಔಟ್‌ಗಳು, ಗುಂಪು ಮನೆಗಳು ಹಾಗೂ ವಿಲ್ಲಾಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳು ಹಣಕಾಸಿನ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಇದರಿಂದ ಮೈಸೂರಲ್ಲಿ ಮನೆ ಮಾಡಿಕೊಳ್ಳಲು ಇಚ್ಛಿಸಿರುವವರಿಗೆ ಅಗತ್ಯ ಮಾಹಿತಿ ದೊರೆಯುತ್ತಿದೆ.

ಡಿಸಿಯಿಂದ ಚಾಲನೆ: ಮೈ ರಿಯಾಲಿಟಿ ಶೋಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ರಿಯಲ್ ಎಸ್ಟೇಟ್ ಹಾಗೂ ಡೆವಲಪರ್ಸ್ ಉದ್ಯಮ ಬೆಳೆದರೆ, ನೂರಾರು ಮಂದಿಗೆ ಉದ್ಯೋಗ ಸಿಗುತ್ತದೆ. ಡೆವಲಪರ್‌ಗಳು ಗುಣಮಟ್ಟದ ಸೇವೆಯನ್ನು ಗ್ರಾಹಕರಿಗೆ ನೀಡಬೇಕು. ಹೆಚ್ಚು ಉದ್ಯೋಗ ಸೃಷ್ಟಿಸಲು ಮುಂದಾಗಬೇಕು. ಮೈಸೂರಲ್ಲಿ ರಿಯಾಲಿಟಿ ಶೋ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಕ್ರೆಡಾಯ್ ರಾಜ್ಯಾಧ್ಯಕ್ಷ ಪ್ರದೀಪ್ ಡಿ.ರಾಯ್ಕರ್, ಬಿಎಐ ರಾಷ್ಟ್ರೀಯ ಉಪಾಧ್ಯಕ್ಷ ಎನ್.ಎಸ್.ಮುರುಳಿಧರ್, ಮೈ ರಿಯಾಲಿಟಿ ಅಧ್ಯಕ್ಷ ಉದಯ್ ಎಸ್.ಕುಮಾರ್, ಸಂಸ್ಥೆಯ ಪದಾಧಿಕಾರಿಗಳಾದ ನಾಗರಾಜ್ ಭೈರಿ, ಶ್ರೀಹರಿ, ಮುರಳೀಧರ್, ಕೆಸಿ. ನಂದಕುಮಾರ್, ಎಂ.ಎಸ್. ಬಾಲಾಜಿ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 26- ಮೈಸೂರು ಜಿಲ್ಲಾ ಕುಂಬಾರ ಮಹಿಳಾ ಸಂಘವು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಮೈಸೂರು ಜಿಲ್ಲಾ ಕುಂಬಾರ ಜನಾಂಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಅಂಕಪಟ್ಟಿ, ವಿಳಾಸ, ಮೊಬೈಲ್ ನಂಬರ್‌ಗಳೊಂದಿಗೆ ಸಂಘದ ಕಾರ್ಯದರ್ಶಿ ನಿರ್ಮಲಾ ಅಥವಾ ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದಲ್ಲಿರುವ ಮಹಿಳಾ ಸದಸ್ಯರಿಗೆ ತಲುಪಿಸಲು ಕೋರಲಾಗಿದೆ. ಅರ್ಜಿಗಳನ್ನು ಜೂನ್ 15 ರೊಳಗೆ ತಲುಪಿಸಬೇಕು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಹಿರಿಯ ಸಾಹಿತಿ ಪ್ರೊ. ಭಗವಾನ್, ದಲಿತ ವೆಲ್ಫೇರ್ ಟ್ರಸ್ಟ್ ರಾಜ್ಯಾಧ್ಯಕ್ಷ ಶಾಂತರಾಜು, ಪ್ರೊ. ಮಹೇಶ್, ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಜಯಕುಮಾರ್, ಚಿಕ್ಕಅಂದಾನಿ ಹಾಗೂ ಇತರರು ಪುಸ್ತಕ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಅರ್ಜಿ ಆಹ್ವಾನ

ಮೈಸೂರು, ಮೇ 26- ಮೈಸೂರಿನ ವಾಣಿ ವಿಲಾಸ ರಸ್ತೆಯಲ್ಲಿರುವ ಕೆಎಸ್‌ಎಸ್ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ.

ಅರ್ಜಿಯನ್ನು ಕೆಎಸ್‌ಎಸ್ ವಿದ್ಯಾರ್ಥಿ ನಿಲಯದಲ್ಲಿ ನೇರವಾಗಿ ಅಥವಾ ದೂರವಾಣಿ ಸಂಪರ್ಕಿಸಿ ಇ-ಮೇಲ್ jssmyphostels@gmail.com ಹಾಗೂ ವಾಟ್ಸಾಪ್ ಮೂಲಕವೂ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9620733894, 9353724334 ಸಂಪರ್ಕಿಸಬಹುದು.

ಇಂದು ರಂಗಾಯಣದಲ್ಲಿ ಸಾಂಸ್ಕೃತಿಕ ಕೂಟ

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್



ಮೈಸೂರು, ಮೇ 26(ಪಿಎಂ)- ರಂಗ ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತ ಮತ್ತಿತರ ಎಲ್ಲಾ ಬಹು ಸಾಂಸ್ಕೃತಿಕ ನೆಲೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಮೇ 27ರಂದು ಮೈಸೂರು ರಂಗಾಯಣ ಆವರಣದಲ್ಲಿ 'ರಂಗ ಸಂಸ್ಕೃತಿ ಉಳಿಸೋಣ-ಬೆಳೆಸೋಣ' ಶೀರ್ಷಿಕೆಯಡಿ ಸಾಂಸ್ಕೃತಿಕ ಕೂಟ ಆಯೋಜಿಸಲಾಗಿದೆ ಎಂದು ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಗತಿಪರ ಸಂಘಟನೆಗಳ ಒಕ್ಕೂಟ ಹಾಗೂ ರಂಗಕರ್ಮಿಗಳ ವತಿಯಿಂದ ಅಂದು ಸಂಜೆ 5ಕ್ಕೆ ರಂಗಾಯಣದ ಕಿಂದರ ಜೋಗಿ ಆವರಣದಲ್ಲಿ ಸಾಂಸ್ಕೃತಿಕ ಕೂಟ ಕಾರ್ಯಕ್ರಮ ನಡೆಯಲಿದೆ. ಜನಪದ, ತತ್ವಪದ ಸೇರಿದಂತೆ ಮೊದಲಾದ ಗೀತ ಗಾಯನವನ್ನು ರಾಜ್ಯದ ಪ್ರಖ್ಯಾತ ಗಾಯಕರು ಸಾದರಪಡಿಸಲಿದ್ದಾರೆ. ಇದರ ಉದ್ದೇಶ ಅಲ್ಲಿನ ವಾತಾವರಣ ತಿಳಿಗೊಳಿಸುವುದಾಗಿದೆ. ಈ ಮೊದಲು ಅಲ್ಲಿನ ವಾತಾವರಣ ಬಿಗಿಗೊಳಿಸಲಾಗಿತ್ತು ಎಂದು ದೂರಿದರು.

ಈ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಹುಸಾಂಸ್ಕೃತಿಕ ನೆಲೆಗಳನ್ನು ಸಂಪೂರ್ಣವಾಗಿ ಸಾಮಾನ್ಯ ಜನತೆಯಿಂದ ವಿಮುಖಗೊಳಿಸುವ ಪ್ರಯತ್ನಗಳ ಪರಾಕಾಷ್ಠೆಗೆ ನಾವು ಸಾಕ್ಷಿಯಾಗಿದ್ದೇವೆ. ರಾಜ್ಯ ಸರ್ಕಾರ ಅಧೀನದ ಸ್ವಾಯತ್ತ ಸಂಸ್ಥೆಗಳು ಕೆಟ್ಟ ಹಿಡಿತಕ್ಕೆ ಸಿಲುಕಿದ್ದವು. ಭಾಷೆ, ಸಂಸ್ಕೃತಿ ನಾಶದ ಜೊತೆಗೆ ಮನುಷ್ಯತ್ವದ ನೆಲೆಯನ್ನೇ ನಾಶಗೊಳಿಸುವ ಪ್ರಬಲ ಪ್ರಯತ್ನ ನಡೆಯಿತು. ಭಾಷೆ, ಶಿಕ್ಷಣದಲ್ಲಿ ಜನವಿರೋಧಿ ನೀತಿ ಅಳವಡಿಸಲಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ವಾತಾವರಣವಿತ್ತು. ಆ ಮೂಲಕ ಭಯದ ವಾತಾವರಣ ಸೃಷ್ಟಿ ಮಾಡಲಾಗಿತ್ತು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ಜನತೆ ಸರಿಯಾದ ಫಲಿತಾಂಶ ನೀಡಿದ್ದಾರೆ ಎಂದು ತಿಳಿಸಿದರು.

ಸರ್ವ ಜನಾಂಗದ ಶಾಂತಿಯ ತೋಟವನ್ನು ಸಾಂಸ್ಕೃತಿಕವಾಗಿ ನಿರ್ಮಿಸುವ ಧ್ಯೇಯ ಮತ್ತು ಉದ್ದೇಶದಿಂದ ರಂಗಾಯಣ ಸ್ಥಾಪನೆಯಾಯಿತು. ಎಲ್ಲಾ ನಿರ್ದೇಶಕರು ಕೂಡ ಅದೇ ಆಶಯದಲ್ಲಿ ರಂಗಾಯಣದಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಕಳೆದ ಅವಧಿಯಲ್ಲಿ ಇದ್ದ ನಿರ್ದೇಶಕರು ಎಲ್ಲಾ ಒಳಿತನ್ನು ನಿರಾಕರಿಸಿ, ಅಸಂಸ್ಕೃತಿ ಚಟುವಟಿಕೆ ನಡೆಸಿದರು. ಇದು ರಂಗಾಯಣದ ದೊಡ್ಡ ದುರಂತ. ಪಕ್ಷ ರಾಜಕಾರಣಕ್ಕೂ ರಂಗಾಯಣಕ್ಕೂ ಸಂಬಂಧವೇ ಇಲ್ಲ. ಆದರೆ ಇವರು ರಂಗಾಯಣದಲ್ಲಿ ನಿಂತು ಪಕ್ಷ ರಾಜಕಾರಣ ಮಾತನಾಡಿದ್ದು ಸಾಂಸ್ಕೃತಿಕ ಅಪರಾಧ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ, ಅಡ್ಡಂಡ ಸಿ.ಕಾರ್ಯಪ್ಪ ವಿರುದ್ಧ ಕಿಡಿಕಾರಿದರು.

ತನಿಖೆಗೆ ಒತ್ತಾಯಿಸುತ್ತೇವೆ: ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ಅವಧಿಯಲ್ಲಿ ರಂಗಾಯಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದು ನಿಖರವಾಗಿ ನಮಗೆ ಅನೇಕ ಮೂಲಗಳಿಂದ ತಿಳಿದು ಬಂದಿದೆ. ಹಾಗಾಗಿ ಸರ್ಕಾರ ತನಿಖೆಗೆ ಕ್ರಮ ವಹಿಸಬೇಕು. ನಾಳೆಯ ಕಾರ್ಯಕ್ರಮದಲ್ಲಿ ಒಕ್ಕೊರಲಿನಿಂದ ತನಿಖೆಗೆ ಆಗ್ರಹಿಸಲಾಗುವುದು ಎಂದು ಹೆಚ್.ಜನಾರ್ಧನ್ ಪ್ರತಿಕ್ರಿಯಿಸಿದರು.

ಒಂದು ಪ್ರಯೋಗಕ್ಕೆ ಒಂದು ಕೋಟಿ ವೆಚ್ಚ ಮಾಡಿರುವುದು ರಂಗಭೂಮಿಯ ದುರಂತ. ಅಲ್ಲಿ ನಿಜಕ್ಕೂ ಖರ್ಚಾಗಬೇಕಿರುವುದು ಬುದ್ಧಿ ಮತ್ತು ಕಲಾತ್ಮಕತೆಯೇ ಹೊರತು ಹಣವಲ್ಲ. ಹಾಗಾಗಿ ಇದು ಒಂದು ರೀತಿಯಲ್ಲಿ ಭ್ರಷ್ಟಾಚಾರವೇ. ಕಡಿಮೆ ಹಣದಲ್ಲಿ ಹೆಚ್ಚು ಮೌಲ್ಯಗಳನ್ನು ಕಲಾತ್ಮಕವಾಗಿ ಹೇಳುವುದೇ ನಿಜವಾದ ರಂಗಭೂಮಿ. ಅದರ ಬದಲಿಗೆ ಹೆಚ್ಚು ಹಣ ವ್ಯಯಿಸಿ ಸುಳ್ಳು ಹೇಳುವುದಲ್ಲ ಎಂದು ಕಿಡಿಕಾರಿದರು.

'ಟಿಪ್ಪು ನಿಜ ಕನಸುಗಳು' ಶೀರ್ಷಿಕೆಯ ನಾಟಕದ ಮೂಲಕ ಒಬ್ಬ ಸಾಮ್ರಾಟನನ್ನು ನೀಚನಂತೆ ಬಿಂಬಿಸಿದ್ದು ಜನವಿರೋಧಿ ನೀತಿಯಲ್ಲವೇ? ಆ ತರದ್ದು ಇನ್ನು ರಂಗಾಯಣದಲ್ಲಿ ನಡೆಯಬಾರದು ಎಂಬುದು ಸಾರ್ವಜನಿಕರ ಆಶಯ. ನಾವೂ ಸಾರ್ವಜನಿಕರಲ್ಲಿ ಒಬ್ಬರೇ ಎಂದರು.

ಮೈಸೂರು ರಂಗಾಯಣದ ಮುಂದಿನ ನಿರ್ದೇಶಕರ ಆಯ್ಕೆ ಸಂಬಂಧ ಪ್ರತಿಕ್ರಿಯಿಸಿ, ರಂಗಾಯಣ ಸ್ವಾಯತ್ತ ಸಂಸ್ಥೆ. ಕರ್ನಾಟಕದಲ್ಲಿ ಯಾರ್ಯಾರು ರಂಗಭೂಮಿಗಾಗಿ ನಿಷ್ಠೆಯಿಂದ ಕೆಲಸ ಮಾಡಿದ್ದಾರೆ ಎಂಬುದನ್ನು ಅವಲೋಕಿಸಿ ಮೂವರ ಹೆಸರನ್ನು ರಂಗಸಮಾಜವು ಸರ್ಕಾರಕ್ಕೆ ಕಳುಹಿಸಲಿದೆ. ಈ ಪೈಕಿ ಸರ್ಕಾರ ಒಂದು ಹೆಸರನ್ನು ಆಯ್ಕೆ ಮಾಡಲಿದೆ. ಕೆಟ್ಟ ಉದಾಹರಣೆ ಈಗಾಗಲೇ ನಮ್ಮ ಮುಂದೆ ಇದ್ದು, ಮತ್ತೊಮ್ಮೆ ಕೆಟ್ಟದ್ದು ಆಗದಿರಲಿ ಎಂಬುದು ನಮ್ಮ ಆಶಯ. ಉತ್ತಮವಾದ ವ್ಯಕ್ತಿಗಳು ಸಾವಿರಾರು ಜನರಿದ್ದು, ಆಯ್ಕೆ ಮಾಡಲಿ. ನಾವೆಲ್ಲರೂ ಅವರ ಜೊತೆಯಲ್ಲಿದ್ದು ಕೆಲಸ ಮಾಡುತ್ತೇವೆ ಎಂದು ಹೇಳಿದರು. ಹಿರಿಯ ರಂಗಕರ್ಮಿಗಳಾದ ಕೃಷ್ಣ ಪ್ರಸಾದ್, ಮೈಮ್ ರಮೇಶ್, ಪ್ರಗತಿಪರ ಚಿಂತಕ ಕೆ.ಆರ್. ಗೋಪಾಲಕೃಷ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಕ್ಕರೆ ಅದೇ ಸ್ವರ್ಗ

ಮಾವ : "ಏನೂ ಅಳಿಯಂದ್ರೆ ಗಿಣಿ ಪಂಜರ ಏತಕ್ಕೆ?"

ಅಳಿಯ : "ಮಗಳನ್ನು ಗಿಣಿ ಸಾಕಿದ ಹಾಗೆ ಸಾಕಿದ್ದೇವೆ. ಹುಷಾರಾಗಿ ನೋಡಿಕೋ ಅಂದಿದ್ರಲ್ಲ ಮಾವ?"

ಮೈಸೂರು ಮಿತ್ರ

ಶನಿವಾರ, 27 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಾ ಪೂಜೆ ಪುನಸ್ಕಾರಗಳ ಸಾರಾಂಶ ಪವಿತ್ರವಾಗಿರುವುದು ಮತ್ತು ಇತರರಿಗೆ ಒಳ್ಳೆಯದನ್ನು ಮಾಡುವುದು. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕ್ಕೆ ಗುಣ

ನಿಮ್ಮ ಪತ್ರಗಳು

ಯುಪಿಎಸ್‌ಸಿ ಸಾಧಕರಿಗೆ ಅಭಿನಂದನೆಗಳು

ಮಾನ್ಯರೆ,

ಕೇಂದ್ರ ಲೋಕ ಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡಿದೆ. ನಮ್ಮ ರಾಜ್ಯದ 35ಕ್ಕೂ ಹೆಚ್ಚು ಮಂದಿ ಪಾಸಾಗಿರುವುದು ಸಂತಸದ ಹಾಗೂ ಹೆಮ್ಮೆಯ ಸಂಗತಿ. ಸಾಧಕರಿಗೆ ಅಭಿನಂದನೆಗಳು.

ಪ್ರಸ್ತುತ ಶಿಕ್ಷಣವೆಂಬುದು ವ್ಯಾಪಾರೀಕರಣಕೊಂಡಿದೆ. ಮಕ್ಕಳನ್ನು ದೊಡ್ಡ ದೊಡ್ಡ ಪ್ರತಿಷ್ಠಿತ ಶಾಲೆಯಲ್ಲೇ ಓದಿಸಬೇಕು. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಗೌರವ ಮತ್ತು ನೌಕರಿ ಸಿಗುತ್ತದೆ ಎಂಬ ಪೋಷಕರ ಧೋರಣೆ ಹಾಗೂ ಮಕ್ಕಳು ಕೂಡ ಓದಿದ ತಕ್ಷಣ ಸಾವಿರಾರು ರೂಪಾಯಿಗಳು ಸಿಗಬೇಕು ಎನ್ನುವ ಹಪಾಹಪಿ. ಅದಕ್ಕಾಗಿಯೇ ಸ್ಪರ್ಧೆಗಿಳಿದಂತೆ ಹೋರಾಟ. ಇಲ್ಲಿ ನಿಜವಾದ ಜ್ಞಾನಾರ್ಜನೆ ಗೌಣವಾಗಿ ಬಿಡುತ್ತದೆ. ಕೆಲವೊಮ್ಮೆ ಕೇವಲ ಹಣ ಗಳಿಸಲು ಶಿಕ್ಷಣವೇ? ಅನ್ನಿಸುತ್ತದೆ.

ಆದರೆ, ಕೇಂದ್ರ ಲೋಕ ಸೇವಾ ಆಯೋಗದ ಪರೀಕ್ಷೆಯಲ್ಲಿ ವಿಜೇತರಾದ ಸಾಧಕ ವಿದ್ಯಾರ್ಥಿಗಳ ಪಟ್ಟಿ ನೋಡಿದಾಗ, ನಿಜಕ್ಕೂ ಮಾದರಿ ಆದರ್ಶ ಎನಿಸುತ್ತದೆ. ಹಳ್ಳಿ ಮಕ್ಕಳು, ಬಡ ರೈತನ ಮಗ, ಕೂಲಿ ಕಾರ್ಮಿಕರ ಮಕ್ಕಳು, ಸರ್ಕಾರಿ ಶಾಲೆಯಲ್ಲಿ ಕಲಿತು ಯಾವ ಕೋಚಿಂಗ್ ತರಗತಿಗೂ ಹೋಗದೇ ಉತ್ತೀರ್ಣರಾಗಿ ರಾಂಕ್ ಗಳಿಸಿದ್ದಾರೆ ಎಂದರೆ, ಈ ಸಾಧಕರ ಜಾಣ್ಮೆಗೆ, ತಾಳ್ಮೆಗೆ ಸಾಧಿಸಬೇಕೆಂಬ ಛಲಕ್ಕೆ ಶರಣು. ಇಂಥಹ ಸಾಧಕರು, ನಾಗರಿಕ ಸೇವಾ ಸೌಲಭ್ಯದ ಉನ್ನತ ಅಧಿಕಾರದ ಗದ್ದುಗೆ ಏರಿದಾಗ ಸಮಾಜಕ್ಕೆ ಒಳ್ಳೆಯ ಆಡಳಿತ ಸೇವೆ ಸಲ್ಲಿಸುವರು ಎನ್ನುವ ವಿಶ್ವಾಸವಿದೆ.

–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು

ಸರ್ಕಾರಿ ಕೆಲಸಗಳಲ್ಲಿ ಭ್ರಷ್ಟಾಚಾರ ತೊಲಗಿಸಲು ಸಾರ್ವಜನಿಕರು ಸಹಕರಿಸಿ

ಮಾನ್ಯರೆ,

ಚಾಮರಾಜನಗರ ಜಿಲ್ಲೆಗೆ ಒಳಪಡುವ ಗ್ರಾಮ ಪಂಚಾಯಿತಿಗಳಲ್ಲಿ ಪ್ರಮುಖ ಎನಿಸಿರುವ ಬದನಗುಪ್ಪೆ ಗ್ರಾಮ ಪಂಚಾಯಿತಿಯು ಸಹ ಒಂದಾಗಿದೆ. ಈ ಪಂಚಾಯಿತಿಯ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿಯ ಚುನಾವಣೆಯ ಮೂಲಕ ಸಾರ್ವಜನಿಕ ಏಳಿಗೆಗಾಗಿ ಕರ್ತವ್ಯ ನಿರ್ವಹಿಸುವ ಸಲುವಾಗಿ ಜನರಿಂದ ಆಯ್ಕೆಯಾದ ಗ್ರಾಮ ಪಂಚಾಯಿತಿಯ ಕೆಲವು ಸದಸ್ಯರು ಸರ್ಕಾರದಿಂದ ಉಚಿತವಾಗಿ ನೀಡುವ ಅನೇಕ ಸೌಲಭ್ಯಗಳನ್ನು ತಮ್ಮ ತಮ್ಮ ಗ್ರಾಮಕ್ಕೆ ಒದಗಿಸಲು ಜನರ ಬಳಿ ಹಣದ ಬೇಡಿಕೆ ಇಡುತ್ತಿದ್ದಾರೆ. ಸಾರ್ವಜನಿಕ ಸೇವೆಗೆ ಅಕ್ರಮ ಹಣ ಪಡೆಯುವುದು ಕಾನೂನು ಬಾಹಿರ ಕೃತ್ಯ ಎಂದು ತಿಳಿದಿರುವ ಬದನಗುಪ್ಪೆ ಗ್ರಾಮ ಪಂಚಾಯಿತಿಯ ಕೆಲವು ಸದಸ್ಯರು ಜನರ ಬಳಿ ಹಣ ಕೊಡುವವರಿಗೆ ಮಾತ್ರ ಸೌಲಭ್ಯ ಕಲ್ಪಿಸಲು ಮುಂದಾಗಿದ್ದು, ಉಳಿದವರಿಗೆ ಸರ್ಕಾರದ ಸೌಲಭ್ಯ ನೀಡದಿರುವುದು ಖಂಡನೀಯ. ಇಂತಹ ಭ್ರಷ್ಟಾಚಾರ ಕಂಡು ಬಂದರೆ ಸಾರ್ವಜನಿಕರು ದಯವಿಟ್ಟು ಎದೆಗುಂದದೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಭ್ರಷ್ಟಾಚಾರ ತೊಲಗಿಸಲು ಸಹಕಾರಿಯಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಸಚಿವರು, ಶಾಸಕರಿಗೆ ಕನ್ನಡ ಕಲಿಸಲಿ

ಮಾನ್ಯರೆ,

ಕರ್ನಾಟಕದಲ್ಲಿ ಕನ್ನಡಕ್ಕೇ ಮಣೆ ಹಾಕಬೇಕೆಂಬ ವಿಚಾರ ತಿಳಿದಿದ್ದರೂ ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಚಾಮರಾಜಪೇಟೆಯ ಶಾಸಕ ಹಾಗೂ ಬೀದರ್ ಶಾಸಕರು ಬೇಕೆಂದೇ ಹೀಗೆ ಮಾಡಿದರೆ ಎಂಬ ಅನುಮಾನ ಕಾಡುತ್ತಿದೆ. ಈ ಇಬ್ಬರೂ ಶಾಸಕರುಗಳಿಗೆ ಕನ್ನಡ ಹೇಳಿಕೊಡಲು ಮುಖ್ಯಮಂತ್ರಿಗಳು ವ್ಯವಸ್ಥೆ ಮಾಡಲಿ. ಕನ್ನಡವನ್ನೇ ಕಡ್ಡಾಯವಾಗಿ ಬಳಸಬೇಕಾದ ಈ ಮಹನೀಯರು ಮಾಡಿದ ತಪ್ಪು ಮತ್ತು ಅಕ್ಷಮ್ಯ.

–ಕೊ.ಸು.ನರಸಿಂಹ ಮೂರ್ತಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು.

ಉದ್ಯೋಗ ಭರ್ತಿ ಭರವಸೆ ಸ್ವಾಗತಾರ್ಹ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಹೆಚ್ಚು ಮಾಡುವ ನಿಟ್ಟಿನಲ್ಲಿ ಖಾಲಿ ಇರುವ 2.5 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ನೂತನ ಸಚಿವರಾದ ಪ್ರಿಯಾಂಕ ಖರ್ಗೆ ಹೇಳಿರುವುದು ಸ್ವಾಗತಾರ್ಹ. ಇದರಿಂದ ನಿರುದ್ಯೋಗಿಗಳಿಗೆ ಹೊಸ ಭರವಸೆ ಸಿಕ್ಕಿದೆ.

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಖಾಲಿ ಇರುವ ಉದ್ಯೋಗಗಳನ್ನು ಭರ್ತಿ ಮಾಡುವುದಾಗಿ ಘೋಷಣೆ ಮಾಡಿತ್ತು. ಅದರಂತೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಮುಂದಿನ ದಿನಗಳಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಮುಂದಾಗಿರುವುದು ಸಂತೋಷಕರ ವಿಷಯ.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕಳೆದ 9 ವರ್ಷಗಳ ಹಿಂದೆ ಚುನಾವಣೆ ಸಮಯದಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಭರವಸೆ ನೀಡಿ ಅಧಿಕಾರಕ್ಕೆ ಬಂದಿತು. ಆದರೆ 9 ವರ್ಷ ಕಳೆದರೂ ಉದ್ಯೋಗ ಸೃಷ್ಟಿಗೆ ಮನಸ್ಸು ಮಾಡುತ್ತಿಲ್ಲ. ಇದ್ದ ಹುದ್ದೆಗಳನ್ನು ಕಡಿತ ಮಾಡಿ ಅನೇಕ ಸರ್ಕಾರಿ ನೌಕರರಿಗೆ ಅನ್ಯಾಯ ಮಾಡಿದ್ದಾರೆ. ಇದೇ ಬಿಜೆಪಿ ಸರ್ಕಾರದ ಸಾಧನೆಯಾಗಿದೆ.

–ಎನ್.ಎಂ.ನವೀನ್ ಕುಮಾರ್, ಮೈಸೂರು.

ಟ್ರಾಫಿಕ್ ಪೊಲೀಸರು ಈ ಕಡೆಯೂ ಗಮನಹರಿಸಲಿ

ಮಾನ್ಯರೆ,

ಇತ್ತೀಚೆಗೆ ವಾಹನ ಸವಾರರು ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ ಮಾಡುವುದು ತುಂಬಾ ಜಾಸ್ತಿಯಾಗಿದೆ. ದ್ವಿಚಕ್ರ ಸವಾರರಂತೂ ಒಂದು ಕೈಯ್ಯಲ್ಲಿ ಮೊಬೈಲ್ ಹಿಡಿದುಕೊಂಡು ಮಾತನಾಡುತ್ತಾ ವಾಹನ ಚಲಾಯಿಸುತ್ತಿರುತ್ತಾರೆ. ಇವರ ಗಮನವೆಲ್ಲಾ ರಸ್ತೆಯ ಮೇಲಿರದೇ ಅವರು ಮಾತನಾಡುವ ವಿಷಯಗಳ ಬಗ್ಗೆ ಇರುತ್ತದೆ.ಇದರಿಂದ ಅಪಘಾತಗಳ ಸಂಖ್ಯೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ಅಂತಹ ಮುಖ್ಯವಾದ ಕರೆಯಾದರೆ ವಾಹನ ನಿಲ್ಲಿಸಿ ಮಾತನಾಡಬಹುದಲ್ಲ. ಹೆಲ್ಮೆಟ್ ಹಾಕದವರ ತಪಾಸಣೆಯ ಮಾಡುವ ಟ್ರಾಫಿಕ್ ಪೊಲೀಸರು ಸ್ವಲ್ಪ ಈ ಕಡೆಯೂ ಗಮನಹರಿಸಿ ಇದನ್ನು ನಿಯಂತ್ರಿಸಿ ಆಗುವ ಅನಾಹುತಗಳನ್ನು ತಪ್ಪಿಸಲಿ.

–ರಾಘವೇಂದ್ರ ಜೋಯಿಸ್, ಮೈಸೂರು




ಕಾರ್ಕಳ ಆನಂದ ಭಟ್

ಮೊ : 7676554198

ಕಾರ್ಕಳ – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ಚೀನಾ, ಪಾಕಿಸ್ತಾನಕ್ಕೆ ಭಾರತದ ಎಚ್ಚರಿಕಾ ಸಂದೇಶ



> "ವಿಶೇಷವಾಗಿ ಭಾರತವು, ಚೀನಾ ಹಾಗೂ ಪಾಕಿಸ್ತಾನದಿಂದ ನಿರಂತರವಾಗಿ ಯುದ್ಧ ಬೆದರಿಕೆ ಹಾಗೂ ಆತಂಕವಾದದ ಕಿರುಕುಳ ಎದುರಿಸುತ್ತಿದೆ.

ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ರಕ್ಷಣಾ ಮಂತ್ರಿಗಳ ಸಮಾವೇಶ ಏಪ್ರಿಲ್ 28 ರಂದು ದೆಹಲಿಯಲ್ಲಿ ಯಶಸ್ವಿಯಾಗಿ ನಡೆಯಿತು. ಈ ಸಮಾವೇಶದ ನಂತರ ಮೇ 4 ಮತ್ತು 5 ರಂದು ಗೋವಾದಲ್ಲಿ ಎಸ್‌ಸಿಒದ ವಿದೇಶಾಂಗ ಸಚಿವರ ಸಭೆ ನಡೆಯಿತು. ಪಣಜಿಯಲ್ಲಿ ನಡೆದ ಈ ಸಮಾವೇಶದ ಅಧ್ಯಕ್ಷತೆಯನ್ನು ನಮ್ಮ ದೇಶದ ವಿದೇಶಾಂಗ ಸಚಿವ ಎಸ್. ಜೈಶಂಕರ್ ವಹಿಸಿದ್ದರು. ಈ ಸಮಾವೇಶದಲ್ಲಿ ಎಸ್‌ಸಿಒದ ಮಹಾಪ್ರಧಾನ ಕಾರ್ಯದರ್ಶಿ ಝಾಂಗ್ ಮಿಂಗ್ ಮತ್ತು ಎಸ್‌ಸಿಒ ರಾಟ್ಸ್ ಎಕ್ಸಿಕ್ಯೂಟಿವ್ ಸಮಿತಿಯ ನಿರ್ದೇಶಕರಾದ ರುಸ್ಲಾನ್ ಮಿರಾಯೇವ್ ಭಾಗವಹಿಸಿ ತಮ್ಮ ಸಂದೇಶ ನೀಡಿದ್ದರು.

ಶಾಂಘೈ ಸಹಕಾರ ಸಂಸ್ಥೆ 2001ರಲ್ಲಿ ಸ್ಥಾಪಿತವಾದ ಅಂತರ ಸರಕಾರಿ ಸಂಸ್ಥೆಯಾಗಿದೆ. ಎಸ್‌ಸಿಒದಲ್ಲಿ ಭಾರತ, ರಷ್ಯಾ, ಚೀನಾ, ಪಾಕಿಸ್ತಾನ, ಕಝೂಕಿಸ್ಥಾನ್, ಕಿರ್ಗಿಸ್ಥಾನ್, ತಜಕಿಸ್ಥಾನ್ ಮತ್ತು ಉಜ್ಬೇಕಿಸ್ಥಾನ್ ಸದಸ್ಯತ್ವ ಹೊಂದಿವೆ. ಎಸ್‌ಸಿಒದ ಕೊನೆಯ ಸಭೆಯು ಉಜ್ಬೇಕಿಸ್ಥಾನದ ಸಮರಖಂಡ್‌ನಲ್ಲಿ ನಡೆದಿತ್ತು. ಈ ಶೃಂಗ ಸಭೆಯಲ್ಲಿ ಭಾರತವು ಎಸ್‌ಸಿಒದ ನಿಯಮದಂತೆ ಸರದಿಯ (Rotation) ಅಧ್ಯಕ್ಷ ಸ್ಥಾನ ವಹಿಸಿಕೊಂಡಿದೆ.

ಎಸ್‌ಸಿಒ ಯುರೇಷಿಯನ್ ಪ್ರಾದೇಶಿಕ ಸಂಸ್ಥೆಯಾಗಿದ್ದು, ಸದಸ್ಯ ರಾಷ್ಟ್ರಗಳ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ಉದ್ದೇಶಗಳ ಮೇಲೆ ಕೇಂದ್ರೀಕರಿಸುತ್ತದೆ. ಎಸ್‌ಸಿಒಯ ಗುರಿಗಳು ಮತ್ತು ಉದ್ದೇಶಗಳು ಸದಸ್ಯ ರಾಷ್ಟ್ರಗಳ ನಡುವೆ ಪರಸ್ಪರ ಸಂಬಂಧಗಳನ್ನು ಉತ್ತೇಜಿಸುವುದು ಮತ್ತು ಭದ್ರತಾ ಕಾಳಜಿಗಳನ್ನು ನಿಭಾಯಿಸುವುದು. ಈ ಸಂಘಟನೆಯು 1996 ರಲ್ಲಿ ಶಾಂಘೈ ಫೈವ್ ಆಗಿ ಪ್ರಾರಂಭವಾಯಿತು. ಈ ಸಂಸ್ಥೆಯನ್ನು ರಷ್ಯಾ, ಚೀನಾ, ಕಝೂಕಿಸ್ಥಾನ್, ತಜಕಿಸ್ಥಾನ್ ಮತ್ತು ಕಿರ್ಗಿಸ್ಥಾನ್ ನಾಯಕರು ಸ್ಥಾಪಿಸಿದರು. 2001 ರಲ್ಲಿ ಉಜ್ಬೇಕ್ ಪ್ರವೇಶದೊಂದಿಗೆ ಶಾಂಘೈ ಸಹಕಾರ ಸಂಸ್ಥೆ ಎಂದು 19.09.2003 ರಲ್ಲಿ ಮರು ನಾಮಕರಣ ಮಾಡಲಾಯಿತು. 2017 ರಲ್ಲಿ ಭಾರತ ಹಾಗೂ ಪಾಕಿಸ್ತಾನ ಮತ್ತು 2021 ರಲ್ಲಿ ಇರಾನ್ ಪೂರ್ಣ ಪ್ರಮಾಣದ ಸದಸ್ಯತ್ವ ಪಡೆದವು.

ಎಸ್‌ಸಿಓ ಆತ್ಮದ ಆಧಾರದ ಮೇಲೆ ತತ್ವಗಳನ್ನು ಅನುಸರಿಸುತ್ತದೆ. ಸಂಸ್ಥೆಯ ಆಂತರಿಕ ನೀತಿಯು ಪರಸ್ಪರ ನಂಬಿಕೆ, ಲಾಭ ಸಮಾಲೋಚನೆಗಳನ್ನು ಆಧರಿಸಿದೆ. ಸಮಾನತೆ, ಸಾಂಸ್ಕೃತಿಕ ಗೌರವ, ವೈವಿಧ್ಯತೆ ಮತ್ತು ಎಲ್ಲಾ ಯುರೇಷಿಯನ್ ದೇಶಗಳಿಗೆ ಪ್ರಯೋಜನಕಾರಿಯಾದ ರೀತಿಯಲ್ಲಿ ಎಲ್ಲಾ ರಾಷ್ಟ್ರಗಳ ಅಭಿವೃದ್ಧಿ ಸಾಮಾನ್ಯ ಗುರಿಯಾಗಿದೆ.

ಸಂಸ್ಥೆಯ ಬಾಹ್ಯ ನೀತಿಯು ದೃಢೀಕರಣ ಮತ್ತು ಅಲಿಪ್ತತೆಯ (Non Aligned) ಅನುಸರಿಸುವುದು ಮತ್ತು ಯಾವುದೇ ತೃತೀಯ ದೇಶವನ್ನು ಗುರಿಯಾಗಿಸಿ ಅಥವಾ ಪ್ರತ್ಯೇಕಿಸಿಕೊಳ್ಳದಿರುವುದು ಮತ್ತು ಮುಕ್ತತೆಯನ್ನು ಉತ್ತೇಜಿಸುವುದು.

ಎಸ್‌ಸಿಒ ಉದ್ದೇಶಗಳು

ಶಾಂಘೈ ಸಹಕಾರ ಸಂಸ್ಥೆಯು ಸದಸ್ಯ ರಾಷ್ಟ್ರಗಳ ನಡುವೆ ರಾಜಕೀಯ, ಭದ್ರತೆ ಮತ್ತು ಆರ್ಥಿಕ ಸಹಕಾರ ಬಲಗೊಳಿಸುವ ಮೂಲಕ ಸಂಬಂಧಗಳನ್ನು ಸದೃಢಗೊಳಿಸುವುದು. ಭಯೋತ್ಪಾದನೆ, ಉಗ್ರವಾದ ಮತ್ತು ಪ್ರತ್ಯೇಕತಾವಾದದ ಬೆದರಿಕೆಗಳನ್ನು ಎದುರಿಸಲು ಸದಸ್ಯರ ನಡುವೆ ಸಹಕಾರಕ್ಕಾಗಿ ಶ್ರಮಿಸುವುದು, ಪ್ರಜಾಸತ್ತಾತ್ಮಕ ಮತ್ತು ಸಮಾನವಾದ ಅಂತರ ರಾಷ್ಟ್ರೀಯ ರಾಜಕೀಯ ವ್ಯವಸ್ಥೆಯ ಅಭಿವೃದ್ಧಿ, ಪ್ರದೇಶದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಕಾಪಾಡುವುದು, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಂಶೋಧನೆ ಮತ್ತು ತಂತ್ರಜ್ಞಾನದಲ್ಲಿ ಸಹಕರಿಸುವಿಕೆ ಹಾಗೂ ಪಾಲುದಾರಿಕೆಯನ್ನು ಉತ್ತೇಜಿಸುವುದು. ಎಸ್‌ಸಿಒದ ಉದ್ದೇಶಗಳು, ತತ್ವಗಳು, ಆಶಯಗಳು ಉತ್ತಮವಾಗಿದ್ದರೂ ವಾಸ್ತವಿಕತೆ ಬೇರೆಯೇ ಇದೆ. ಸದಸ್ಯ ರಾಷ್ಟ್ರಗಳ ನಡುವೆ ಅವಿಶ್ವಾಸ, ಅಪನಂಬಿಕೆ ಇದೆ. ಸದಸ್ಯ ರಾಷ್ಟ್ರಗಳು ಪರಸ್ಪರ ಸಂಶಯದಿಂದ ಒಂದನ್ನೊಂದು ನೋಡುತ್ತಿವೆ. ಎಲ್ಲಾ ದೇಶಗಳು ಚೀನಾದ ಆಕ್ರಮಣಕಾರಿ ಮನೋಭಾವದ ಆತಂಕದಲ್ಲಿವೆ. ರಷ್ಯಾದ ಯುದ್ಧೋನ್ಮಾದ, ಪಾಕ್‌ನ ಭಯೋತ್ಪಾದನೆಯ ಮಾನಸಿಕತೆಯಿಂದಾಗಿ ಎಸ್‌ಸಿಒ ನಿರೀಕ್ಷಿತ ರೀತಿಯಲ್ಲಿ ಯಶಸ್ವಿಯಾಗಿಲ್ಲ.

ವಿಶೇಷವಾಗಿ ಭಾರತವು, ಚೀನಾ ಹಾಗೂ ಪಾಕಿಸ್ತಾನದಿಂದ ನಿರಂತರವಾಗಿ ಯುದ್ಧ ಬೆದರಿಕೆ ಹಾಗೂ ಆತಂಕವಾದದ ಕಿರುಕುಳ ಎದುರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಭಾರತವು ಎಸ್‌ಸಿಓದ ಗೋವಾ ಶೃಂಗದಲ್ಲಿ ಚೀನಾ, ಪಾಕಿಸ್ತಾನದ ವಿರುದ್ಧ ಕಠಿಣ ನಿಲುವು ತಾಳಿತು. ಗೋವಾ ಎಸ್‌ಸಿಓ ಶೃಂಗದಲ್ಲಿ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್‌ರವರು "ಪಾಕ್ ಆಕ್ರಮಿಸಿ ಕೊಂಡಿರುವ ಭಾರತದ ಪ್ರದೇಶದಲ್ಲಿ ಚೀನಾವು ಆರ್ಥಿಕ ಕಾರಿಡಾರ್ (ಸಿಪಿಇಸಿ) ನಿರ್ಮಾಣ ಮಾಡುತ್ತಿರುವುದು. ಆ ಪ್ರದೇಶದ ಮೇಲಿನ ಭಾರತದ ಸಾರ್ವಭೌಮತ್ವದ ಉಲ್ಲಂಘನೆ" ಎಂದೂ ಎರಡು ದೇಶಗಳಿಗೆ ಎಚ್ಚರಿಕೆ ನೀಡಿದರು. ದಿಲ್ಲಿ ಶೃಂಗ ಸಭೆಯಲ್ಲಿ ವಾಸ್ತವಿಕ ನಿಯಂತ್ರಣ ರೇಖೆಗೆ(ಎಲ್‌ಎಸಿ) ಸಂಬಂಧಿಸಿದಂತೆ ಚೀನಾ ಏಕಪಕ್ಷೀಯವಾಗಿ ಮಾತುಕತೆ ನಿಲ್ಲಿಸಿದ್ದಕ್ಕಾಗಿ ಚೀನಿ ರಕ್ಷಣಾ ಸಚಿವರನ್ನು ಭಾರತವು ತರಾಟೆಗೆ ತೆಗೆದುಕೊಂಡಿತ್ತು.

ಪಾಕಿಸ್ತಾನದ ಬಗ್ಗೆ ಭಾರತದ ನಿಲುವು

ಪಾಕ್ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಅವರು ಎಸ್‌ಸಿಓ ಸಭೆಯಲ್ಲಿ ಭಾಗವಹಿಸಲು ಗೋವಾಕ್ಕೆ ಆಗಮಿಸಿದ್ದರು. ಭುಟ್ಟೋ ಅವರು 2022 ರಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ 'ಒಸಮಾ ಬಿನ್ ಲಾಡೆನ್ ಸತ್ತಿದ್ದಾನೆ. ಆದರೆ ಗುಜರಾತ್‌ನ ಕಟುಕ ಇನ್ನೂ ಬದುಕಿದ್ದಾನೆ. ಮತ್ತು ಆತ ಭಾರತದ ಪ್ರಧಾನ ಮಂತ್ರಿ' ಎಂದಿದ್ದರು. ಆಗ ಭುಟ್ಟೋರ ಈ ಹೇಳಿಕೆ ವ್ಯಾಪಕ ಖಂಡನೆಗೊಳಗಾಗಿತ್ತು. ಈ ರೀತಿಯ ಕೀಳು ಮಟ್ಟದ ಮಾನಸಿಕತೆಯ ಭುಟ್ಟೋ ಎಸ್‌ಸಿಓ ಸಭೆಯಲ್ಲಿ ಭಾಗವಹಿಸಲು ಬಂದಿದ್ದರು. ಭುಟ್ಟೋ ಆಗಮನದೊಂದಿಗೆ 12 ವರ್ಷಗಳ ನಂತರ ಪಾಕ್ ವಿದೇಶಾಂಗ ಸಚಿವರೊಬ್ಬರು ಭಾರತಕ್ಕೆ ಭೇಟಿ ನೀಡಿದಂತಾಯಿತು. ಈ ಹಿಂದೆ ಕೊನೆಯದಾಗಿ 2011 ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಪಾಕ್ ವಿದೇಶಾಂಗ ಸಚಿವೆ ಹೀನಾ ರಬ್ಬಾನಿ ಖಾನ್ ರವರು ಆಗ ಭಾರತದ ವಿದೇಶಾಂಗ ಸಚಿವರಾಗಿದ್ದ ಎಸ್.ಎಂ. ಕೃಷ್ಣರನ್ನು ಭೇಟಿಯಾಗಿದ್ದರು. ಗೋವಾ ಶೃಂಗದಲ್ಲಿ ಬಿಲಾವಲ್‌ರವರು ಮತ್ತೆ ಕಾಶ್ಮೀರ ವಿಷಯ ಕೆದಕುವುದರೊಂದಿಗೆ ಪಾಕಿಸ್ತಾನ ಕೂಡ ಭಯೋತ್ಪಾದನೆಯ ಬಲಿಪಶು ಎನ್ನುವ ಮೂಲಕ ಗೋವಾದ ಶೃಂಗ ಸಭೆಯ ವಾತಾವರಣ ಹದಗೆಡಿಸಿದರು. ಬಿಲಾವಲ್‌ರ ಈ ಹೇಳಿಕೆಗೆ ಭಾರತವು ಕಟುವಾದ ಶಬ್ದಗಳಲ್ಲಿ 'ಭಯೋತ್ಪಾದನೆಗೆ ಬಲಿಯಾದವರು ಭಯೋತ್ಪಾದನೆಯಲ್ಲಿ ತೊಡಗಿರುವವರೊಂದಿಗೆ ಕೂತು ಭಯೋತ್ಪಾದನೆ ಬಗ್ಗೆ ಚರ್ಚೆ ಮಾಡಲು ಸಾಧ್ಯವಿಲ್ಲ" ಎಂದು ತಿರುಗೇಟು ನೀಡಿತು. ಎಸ್. ಜೈಶಂಕರ್‌ರವರು ಭುಟ್ಟೋರನ್ನು ಉಲ್ಲೇಖಿಸಿ "ಇವರು ಪಾಕ್‌ನ ಭಯೋತ್ಪಾದನೆಯ ಉದ್ಯಮವನ್ನು ಉತ್ತೇಜಿಸುವ, ಸಮರ್ಥಿಸುವ ವಕ್ತಾರರಾಗಿದ್ದಾರೆ" ಎಂದು ಕುಟುವಾಗಿ ಟೀಕಿಸಿದರು. ಈ ಹೇಳಿಕೆಯು ಗಡಿಯಲ್ಲಿ ಭಾರತದ ಐದು ಸೈನಿಕರು ಭಯೋತ್ಪಾದಕ ಕೃತ್ಯಕ್ಕೆ ಬಲಿಯಾದ ಹಿನ್ನೆಲೆಯಲ್ಲಿ ನೀಡಲಾಗಿತ್ತು. ಭಯೋತ್ಪಾದನೆ ವಿರುದ್ಧ ಒಟ್ಟಾಗಿ ಕೂತು ಚರ್ಚಿಸಬೇಕೆಂಬ ಬಿಲಾವಲ್ ಸಲಹೆ ಕೇವಲ ಕಪಟತನವಾಗಿದೆ ಮತ್ತು ಭಾರತ ಈ ಘಟನೆಯಿಂದ ತೀವ್ರ ಆಕ್ರೋಶಗೊಂಡಿದೆಯೆಂದು ಕಿಡಿಕಾರಿದರು.

ಜಿ20 ಶೃಂಗಸಭೆ ಕಾಶ್ಮೀರದಲ್ಲಿ ನಡೆಯುವ ಕುರಿತು ಬಿಲಾವಲ್ ದೂಷಣೆಗೆ ಪ್ರತಿಯಾಗಿ ಎಸ್. ಜೈಶಂಕರ್‌ರವರು ಪಾಕಿಸ್ತಾನವು ಜಿ20 ಸದಸ್ಯ ದೇಶವಾಗಿಲ್ಲದ ಕಾರಣ ಭುಟ್ಟೋ ವಿರೋಧಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಪ್ರತಿಕ್ರಿಯಿಸಿದರು. ಎಸ್‌ಸಿಓ ಶೃಂಗ ಸಭೆಯಲ್ಲಿ ಬಿಲಾವಲ್ ಮಾಡಿದ ಭಾಷಣದಲ್ಲಿ ಭಯೋತ್ಪಾದನೆಯನ್ನು ಭಾರತವು ಸಹಾನುಭೂತಿ, ರಾಜತಾಂತ್ರಿಕ ಮೇಲುಗೈ ಸಾಧಿಸಲು ಉಪಯೋಗಿಸಬಾರದೆಂದು ಭಾರತಕ್ಕೆ ಕುಟುಕಿದ್ದರು. ಈ ಹೇಳಿಕೆಗೆ ಎಸ್.ಜೈಶಂಕರ್ ಅವರು "ನಾವು ರಾಜತಾಂತ್ರಿಕ ಮೇಲುಗೈ ಪಡೆದಿಲ್ಲ. ಆದರೆ ಭಯೋತ್ಪಾದನೆಗೆ ಸಂಬಂಧಪಟ್ಟಂತೆ ಪಾಕಿಸ್ತಾನವನ್ನು ಜಗತ್ತಿನೆದುರು ಬೆತ್ತಲೆಗೊಳಿಸಿದ್ದೇವೆ. ಬಿಲಾವಲ್ ಮಾತುಗಳು ಆ ದೇಶದ ದುರುಳ, ಧೂರ್ತ ಮಾನಸಿಕತೆ ಸೂಚಿಸುತ್ತದೆ" ಎಂದು ಟೀಕಿಸಿದರು. ಭಾರತವು ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದನ್ನು ಬಿಲಾವಲ್ ಟೀಕಿಸಿದರು. ಅದಕ್ಕೆ ಪ್ರತಿಯಾಗಿ ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಇಲ್ಲಿನದು ನಮ್ಮ ಆಂತರಿಕ ವಿಷಯ. ಇದರಲ್ಲಿ ಪಾಕ್‌ಗೇನೂ ಸಮಸ್ಯೆ ಇಲ್ಲ. ಪಾಕಿಸ್ತಾನವು ಭಾರತದೊಂದಿಗೆ ಶಾಂತಿ ಸಹಬಾಳ್ವೆ ಬಯಸುವುದಾದರೆ ಅದಕ್ಕೆ ಬೇಕಾದ ಸುರಕ್ಷಿತ, ಸೌಹಾರ್ದ ವಾತಾವರಣವನ್ನು ಪಾಕಿಸ್ತಾನವೇ ನಿರ್ಮಿಸಬೇಕೆಂದು ಎಸ್. ಜೈಶಂಕರ್‌ರವರು ಸ್ಪಷ್ಟ ಶಬ್ದಗಳಲ್ಲಿ ತಿಳಿಸಿದರು. ಇದಲ್ಲದೇ ಗಡಿಯಾಚೆಗಿನ ಭಯೋತ್ಪಾದನೆ ಒಳಗೊಂಡಂತೆ ಎಲ್ಲಾ ರೂಪಗಳಲ್ಲಿ ಬೆದರಿಕೆಯನ್ನು ನಿಲ್ಲಿಸಬೇಕೆಂದು ಪಾಕ್ ಅನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಜೈಶಂಕರ್ ಅವರು ಎಸ್‌ಸಿಓಗೆ ಕರೆ ನೀಡಿದರು.

ಭಾರತ–ಚೀನಾ ಗಡಿ ಪರಿಸ್ಥಿತಿ

ಚೀನಾ ವಿದೇಶಾಂಗ ಸಚಿವ ಕ್ವಿನ್‌ಗ್ಯಾಂಗ್ ರವರು "ಭಾರತ–ಚೀನಾ ಗಡಿಯಲ್ಲಿನ ಪರಿಸ್ಥಿತಿ ಸ್ಥಿರವಾಗಿದೆ ಮತ್ತು ಗಡಿಯಲ್ಲಿ ಸಂಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಎಸ್. ಜೈಶಂಕರ್‌ರವರು ಗಡಿಯಲ್ಲಿ ಅಸಾಮಾನ್ಯ, ಅತಿರೇಕದ ಪರಿಸ್ಥಿತಿ ಇದೆ. ಉಭಯ ದೇಶಗಳು ಸೇನೆ ಹಿಂತೆಗೆತ ಪ್ರಕ್ರಿಯೆ ಮುಂದುವರಿಸಬೇಕು. ಗಡಿಯಲ್ಲಿನ ವಾತಾವರಣ ಹದಗೆಡಿಸಿದರೆ ಭಾರತ–ಚೀನಾ ಸಂಬಂಧ ಸಹಜವಾಗಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಚೀನಾಕ್ಕೆ ತಿಳಿಸಿದರು. ಇದಲ್ಲದೇ ಸಿಪಿಇಸಿ ಮತ್ತು ಬೆಲ್ಟ್ ಮತ್ತು ರೋಡ್ ಇನಿಷಿಯೇಟಿವ್ ಅನ್ನು ಭಾರತದ ಭೂಮಿಯಲ್ಲಿ ನಿರ್ಮಿಸುವುದನ್ನು ಭಾರತ ವಿರೋಧಿಸುತ್ತದೆ. ಅಭಿವೃದ್ಧಿಗೆ ಸಂಪರ್ಕ ಸಾಧನ ಅತ್ಯಾವಶ್ಯಕ. ಆದರೆ ನಿರ್ಮಾಣಗಳು ಅನ್ಯ ದೇಶಗಳ ಗಡಿ ಸಮಗ್ರತೆ ಹಾಗೂ ಸಾರ್ವಭೌಮತ್ವ ಉಲ್ಲಂಘಿಸಬಾರದು ಎಂದು ಜೈಶಂಕರ್ ಪ್ರತಿಕ್ರಿಯೆ ನೀಡಿದರು.

ಭೂ ರಾಜಕೀಯ ಮತ್ತು ರಾಜತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತ ತೋರಿದ ಕಠಿಣ ನಿಲುವಿನ ಪರಿಣಾಮ ಚೀನಾ ಹಾಗೂ ಪಾಕ್ ಪ್ರತಿನಿಧಿಗಳ ಮುಖಭಾವದಲ್ಲಿ ಕಾಣುತ್ತಿತ್ತು. ಎಸ್‌ಸಿಓ ಪ್ರತಿನಿಧಿಗಳ ಫೋಟೋ ಸೆಷನ್‌ನಲ್ಲಿ ಉಭಯ ದೇಶಗಳ ಪ್ರತಿನಿಧಿಗಳು ಭಾರತದ ಪ್ರತಿನಿಧಿಗಳಿಂದ ಸಾಕಷ್ಟು ದೂರದಲ್ಲಿದ್ದರು.

ಮೈಸೂರಲ್ಲಿ ಯಾವುದೇ ನ್ಯಾಯಯುತ ಚಳವಳಿ ನಡೆದರೂ ಅಲ್ಲಿರುತ್ತಿದ್ದರು ನಮ್ಮ ಜಿ.ಹೆಚ್.ನಾಯಕರು

ಅಕ್ಷರ ನಮನ



ನಮ್ಮನ್ನಗಲಿದ ಜಿ.ಹೆಚ್. ನಾಯಕರೊಂದಿಗೆ ಜೆ.ಬಿ. ರಂಗಸ್ವಾಮಿ(ಜೇಬರ್), ಇತರರು. (ಫೈಲ್ ಚಿತ್ರ)

ಖ್ಯಾತ ವಿಮರ್ಶಕ ಜಿ.ಹೆಚ್.ನಾಯಕರು ಇಲ್ಲವಾಗಿದ್ದಾರೆ. ಅವರೊಡನೆ 52 ವರ್ಷಗಳ ಪರಿಚಯ. ಅಂದಿನಿಂದಲೂ ಪ್ರತಿ ಭೇಟಿಯಲ್ಲೂ ಅವರ ಬಗ್ಗೆ ಗೌರವ, ಅಭಿಮಾನ ಹೆಚ್ಚಾಗುತ್ತಲೇ ಬಂತು. ಅವರೆಂದೂ ಅಳತೆ ಮೀರಿ ಮಾತಾಡಿದವರಲ್ಲ. ಸಮಚಿತ್ತದ ವಿಮರ್ಶಕರು. ಯಾವ ಮಾತನ್ನೇ ಆಗಲಿ ಅಳೆದು ತೂಗಿ ಸರಿ ಎನ್ನಿಸಿದರೆ ಮಾತ್ರ ಹೇಳುವವರು. ತೇಜಸ್ವಿಯವರ ಪರಮ ಸ್ನೇಹಿತರು. ಅವರ ವಿಮರ್ಶೆ ಬಗ್ಗೆ ಮಾತ್ರ ತೇಜಸ್ವಿಗೆ ನಂಬುಗೆ. ಗೋಕಾಕ್ ಚಳವಳಿಯ ವೇಳೆ (1982) ಹೋರಾಟಗಾರರನ್ನೆಲ್ಲಾ ಅಶ್ವಾರೋಹಿ ದಳದ ಆವರಣದಲ್ಲಿ ಕೂಡಿಟ್ಟಿದ್ದವು. ಅಲ್ಲಿ ತೀವ್ರಗಾಮಿ ಚಿಂತನೆಯ ಅಧ್ಯಾಪಕ, ವಿದ್ಯಾರ್ಥಿಗಳೇ ಇದ್ದದ್ದು. ಅವರ ಮೇಲೆ ಬಲಪ್ರಯೋಗ ಯಾವ ಕಾರಣಕ್ಕೂ ಕೂಡದು. ಹಾಗೇನಾದರೂ ಆದರೆ ಹೈಸ್ಕೂಲ್ ಚುಲ್ಟಾರಿಗಳೆಲ್ಲ ಬೀದಿಗಿಳಿಯುತ್ತಾರೆ. ಆನಂತರ ಚಳುವಳಿ ದಿಕ್ಕೆಟ್ಟು ಉಗ್ರ ಸ್ವರೂಪ ತಾಳಿ ಬಿಡುತ್ತದೆ ಎಂಬ ಆತಂಕ ಮೇಲಧಿಕಾರಿಗಳದ್ದು.

ಮಧ್ಯಾಹ್ನ ಬಿಡುಗಡೆ ಮಾಡ್ತೀವಿ. ನಾವೀಗ ಮಾಡಿರೋದು ಮುಂಜಾಗ್ರತಾ ಅರೆಸ್ಟ್, ಅರೆಸ್ಟು ಅಂದರೆ ವಶಕ್ಕೆ ತಗೊಂಡಿದ್ದೀವಿ(secured) ಅಷ್ಟೇ ಅಂತ ಸಮಾಧಾನ ಹೇಳಿಕೊಂಡು ಚಳುವಳಿಗಾರರನ್ನು ನಿಯಂತ್ರಿಸಿಕೊಂಡಿದ್ದೆ. ಜಿ.ಎಚ್.ನಾಯಕರ ಪತ್ನಿ ಶ್ರೀಮತಿ ಮೀರಾ ನಾಯಕ್‌ರೂ ಸೇರಿದಂತೆ ಮಹಿಳಾ ಚಳುವಳಿಗಾರರು ಘೋಷಣೆ ಕೂಗುತ್ತ ಕೂಗುತ್ತಾ ಉಗ್ರಾವತಾರ ತಾಳಿಬಿಟ್ಟರು. ಪುರುಷ ಸಿಂಹಗಳೂ ಘರ್ಜಿಸಿದವು. ಅಲ್ಲೀವರೆಗೆ ಕಾಯ್ದುಕೊಂಡಿದ್ದ ಪೊಲೀಸರ ತಾಳ್ಮೆಯೂ ತಪ್ಪತೊಡಗಿತು. ಪರಸ್ಪರ ಬಿಸಿ ವಾಗ್ವಾದ ಘರ್ಷಣೆಯ ಹಂತಕ್ಕೆ ಬಂತು. ನಡುವೆ ಇದ್ದ ಜಿ.ಎಚ್.ನಾಯಕರನ್ನು ವಿನಂತಿಸಿದೆ. "ಸ್ವಲ್ಪ ತಾವೇ ಹೇಳಿ ಸಾರ್. ಡಿ.ಸಿ. ಆಫೀಸ್ ಮೀಟಿಂಗ್ ಮುಗಿಯೋದಿಕ್ಕೆ ಬಂದಿದೆ. ಇನ್ನೇನು ಬಿಟ್ಟು ಬಿಡ್ತೀವಿ." ಎಂದೆ. ಆ ಉದ್ರಿಕ್ತ ಗುಂಪಿನಲ್ಲಿ ಸಮಾಧಾನವಾಗಿದ್ದವರು ಅವರೊಬ್ಬರೇ. ಚಳುವಳಿಯ ಮುಂದಾಳಾಗಿರುವವರೇ, ಚಳುವಳಿಗಾರರಿಗೆ ಶಾಂತಿಬೋಧೆ ಮಾಡಿದರೆ ಕೇಳಬಲ್ಲರೇ? ಅವರ ಮೇಲೇ ಕೆಲವರು ಕಿಡಿಕಾರಿದರು. "ಯಾವುದೇ ಕಾರಣಕ್ಕೂ ನಾವು ತಾಳ್ಮೆ ಕಳೆದು ಕೊಳ್ಳುವುದು ಬೇಡ. ಹಿರಿಯರಾದ ಹಾ.ಮಾ.ನಾಯಕರು , ಎಸ್.ಎಲ್.ಭೈರಪ್ಪನವರು ನಮ್ಮ ಚಳವಳಿಯ ಮುಂದಿನ ಹೆಜ್ಜೆ ಏನಿರಬೇಕು ಅಂತ ಡಿ.ಸಿ.ಆಫೀಸಿನಲ್ಲಿ ಈಗ ಚರ್ಚೆ ಮಾಡ್ತಿದ್ದಾರೆ. ಅದು ಮುಗಿಯಲಿ. ನಾವೀಗ ತಾಳ್ಮೆ ಕಳೆದುಕೊಂಡರೆ ತಪ್ಪಾಗುತ್ತೆ. ಚರ್ಚೆಯಲ್ಲಿ ಅವರೇನು ತೀರ್ಮಾನ ತಗೊಳ್ತಾರೆ ಕಾದು ನೋಡೋಣ" ಎಂದು ಎಲ್ಲರನ್ನೂ ಸಮಾಧಾನಪಡಿಸಿದರು ನಾಯಕರು. ಅವರ ವ್ಯಕ್ತಿತ್ವಕ್ಕಿದ್ದ ಶಕ್ತಿ ಮತ್ತು ಹೇಳುವಿಕೆಯಲ್ಲಿದ್ದ ನಂಬಿಕಾರ್ಹತೆ ಹಾಗಿತ್ತು.

ಅವರು ಏನೇ ಮಾತಾಡಲಿ ಅಳೆದು ತೂಗಿ ಯೋಗ್ಯವಾದುದ್ದನ್ನೇ ಮಾತಾಡುತ್ತಾರೆಂಬ ನಂಬಿಕೆ. ಚಳುವಳಿಗಾರರು ತಣ್ಣಗಾದರು. ಸಂಜೆಯ ತನಕ ಅದೂ ಇದೂ ಮಾತಾಡಿಕೊಂಡು, ಹಾಡು ಹೇಳಿಸುತ್ತಾ ಕಾಲ ಕಳೆದದ್ದಾಯ್ತು. ಏನಾದರೂ ತಾಳ್ಮೆ ಕಳೆದುಕೊಂಡು ನಾಯಕರೂ ಮಾತಾಡಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು. ಮೈಸೂರಿನಲ್ಲಿ ಯಾವುದೇ ನ್ಯಾಯಯುತ ಪ್ರತಿಭಟನೆ ನಡೆದರೆ, ಸಾರ್ವಜನಿಕರನ್ನು ಜಾಗೃತಿಗೊಳಿಸುವ ಕಾರ್ಯಕ್ರಮ ನಡೆದರೆ ನಾಯಕರು ಅಲ್ಲಿರುತ್ತಿದ್ದರು. ಅವರ ತಾಳ್ಮೆ ಮತ್ತು ಸಹನೆ ಅಪಾರ. ಅವರಿದ್ದಲ್ಲಿ ಪೊಲೀಸ್ ಮತ್ತು ಚಳುವಳಿಗಾರರ ಘರ್ಷಣೆಗೆ ಅವಕಾಶವಿರುತ್ತಿರಲಿಲ್ಲ. ಅವರ ವಿಮರ್ಶೆಗಳಾದರೂ ಅಷ್ಟೇ. ಅದೇ ಫೈನಲ್! ಅಂತಹ ಸಾಹಿತ್ಯಿಕ ಜಡ್ಜ್‌ಮೆಂಟ್ ಅವರದು. ಅವರೊಬ್ಬ ನೈಜ ಬುದ್ಧಿಜೀವಿ. ತಮ್ಮ ಹೋರಾಟಗಳನ್ನು ಸ್ವಂತಕ್ಕಾಗಿ ಎಂದೂ ದುರ್ಬಳಕೆ ಮಾಡಿಕೊಳ್ಳಲಿಲ್ಲ. ಯಾರೊಡನೆಯೂ ಸ್ನೇಹ ವಿಶ್ವಾಸವನ್ನು ಕಳೆದುಕೊಳ್ಳದ ನಡವಳಿಕೆ ಅವರದು. ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ ಸ್ನೇಹ ವಿಶ್ವಾಸಕ್ಕೆ ಚ್ಯುತಿ ಬರದಂತೆ ನಡೆದುಕೊಂಡವರು.

ಡಾ. ರಾಜ್‌ರ ಶಕ್ತಿಧಾಮದ ಆರಂಭಿಕ ದಿನಗಳಲ್ಲಿ ಒಂದು ಸ್ಪಷ್ಟ ರೂಪ ಕೊಡಲು ಶ್ರಮಿಸಿದ್ದವರು ಅವರು. ಅದರ ನಿವೇಶನ ಇತ್ಯಾದಿಗಳನ್ನು ಪಡೆಯುವಲ್ಲೂ ಅವರ ಯೋಗದಾನ ಹಿರಿದಾದದ್ದು.

ವಿನಯವಂತಿಕೆ ಸಜ್ಜನಿಕೆಗಳ ಓರ್ವ ನಿಸ್ಪೃಹರು ನಮ್ಮಿಂದ ದೂರಾಗಿದ್ದಾರೆ. ನಮನಗಳು.

–ಜೇಬರ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಮನೆ ಮಾರಾಟಕ್ಕಿದೆ
20x30- 3rd Floor Duplex East Face - 3BHK 50/M Arvindanagar 2nd Stage Near Naidustore Railway Workshop Mysore
9945615736

ಸೈಟುಗಳು ಮಾರಾಟಕ್ಕೆ ಇದೆ
ಮೈಸೂರು ಜೆ.ಪಿ. ನಗರದ ಔಟರ್ ರಿಂಗ್ ರೋಡ್‌ನ 200 ಮೀಟರ್ ಸಮೀಪದಲ್ಲಿರುವ ಶಂಖರಲಿಂಗೇಗೌಡರ ಹೊಸ ಬಡಾವಣೆಯ 30x40 ಅಳತೆಯುಳ್ಳ ಎರಡು ಸೈಟುಗಳು (11B ಖಾತೆ) ಮಾರಾಟಕ್ಕಿದೆ. ಸಂಪರ್ಕಿಸಿ:
9535724422, 9964179877

ತೋಟ ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್ ನಿಂದ 2 KM, ಬಿ.ಎಂ. ರಸ್ತೆ ಕುಶಾಲನಗರ ಹೆದ್ದಾರಿಯಲ್ಲಿ 10 ಎಕರೆ ಅಡಿಕೆ ತೆಂಗು ಸೇರಿದಂತೆ ಖಾಲಿ ಜಾಗ ತಕ್ಷಣವೇ ಮಾರಾಟಕ್ಕಿದೆ ಆಸಕ್ತರು ತಕ್ಷಣವೇ ಸಂಪರ್ಕಿಸುವುದು
9448165451

ವಧು ಬೇಕಾಗಿದ್ದಾರೆ
ಹೆಬ್ಬಾರ್ ಅಯ್ಯಂಗಾರ್ ಜಾತಿಗೆ ಸೇರಿದ, ಶ್ರೀವತ್ಸ ಗೋತ್ರ, ಉತ್ತರಾಭಾದ್ರ ನಕ್ಷತ್ರ, 32 ವರ್ಷದ, Berger Paints ನಲ್ಲಿ ಸೀನಿಯರ್ ಸೇಲ್ಸ್ ಮ್ಯಾನೇಜರ್ ಆಗಿ ಮೈಸೂರಿನಲ್ಲಿ ವಾಸಿಸುತ್ತಿರುವ ಹುಡುಗನಿಗೆ, ಕೆಲಸದಲ್ಲಿರುವ ಶ್ರೀಮಂತಸ್ಥ ಜಾತಿಯ ವಧು ಬೇಕಾಗಿದ್ದಾರೆ.
8310855274, 9845735896

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು



9448207634
9036742526

Are you looking for extra Income?
Only for COLLEGE STUDENTS and DROP OUTS
Contact: 6361879848

ಶ್ರೀ ಬಾಲಾಜಿ ಟೂರಿಸ್ಟ್
16–7–23: 13 ದಿನ ಮನಾಲಿ, 9 ಶಕ್ತಿಪೀಠ, ವೈಷ್ಣೋದೇವಿ, ಮಾನಸ, ಕಾಳಿಕಾ, ಚಿತ್‌ಪೂರ್ಣಿ, ನೆಯನಾ, ಚಾಮುಂಡಾ, ಕಾಂಗಡ ಭದ್ರಕಾಳಿ, ಜ್ವಾಲಾ, ಅಮೃತ್‌ಸರ್, ಹರಿದ್ವಾರ್, ಕಾಶೀ
5–8–23: 14 ದಿನ ಮಹಾಕಾಳೇಶ್ವರ್, ಓಂಕಾರ್, ಸೋಮನಾಥ್, ನಾಗೇಶ್ವರ್, ಪಟೇಲರ ಸ್ಟ್ಯಾಚು, ನಿಷ್ಕಳಂಕ್ ಮಹದೇವ್, ಮಾತೃಗಯಾ, ದ್ವಾರಕ, ಅಂಬಾಜಿ, ಪುಷ್ಕರ್, ಸನ್‌ಟೆಂಪಲ್, ಜೈಪುರ್, ರೈಲು/ವಿಮಾನ/2+2 A/C ಬಸ್, ಊಟ–ವಸತಿ
9945770486

HOUSE FOR SALE
38X25, 2BHK Ground & 2BHK First Floor Independent N/F door 14 Sqr. House with full vetrified floor & Solar, # 5/1, 4th Main, Jayanagar, (Rs.65 Lakhs)
9632321157

ಬೇಕಾಗಿದ್ದಾರೆ
ಹುದ್ದೆ: ಲೇಡಿ ಆಡಿಟರ್ ಅಸಿಸ್ಟೆಂಟ್
ವಿದ್ಯಾರ್ಹತೆ : ಬಿ.ಕಾಂ, ಎಂ.ಕಾಂ,
ಅನುಭವ: ಟ್ಯಾಲಿ
(ಸೂಚನೆ: ಹೆಬ್ಬಾಳ್, ವಿಜಯನಗರ, ಕುಂಬಾರಕೊಪ್ಪಲು, ಮೇಟಗಳ್ಳಿ, ಅಭ್ಯರ್ಥಿಗಳಿಗೆ ಮೊದಲ ಆದ್ಯತೆ)
9742168396

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 91085 66022

PREMIUM RESIDENTAIL LAYOUT 'VINYAS NANDAGOKULA'
DTCP Approved Ready for Registration Attached to NH 275, Near Varuna, T.N.Pura Road, Mysore
30x40 - Odd Sites
9964441122
9071902562

2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
ಲಿಂಗಾಯತ Age: 42/5.4/BA Govt SDA Salary 50,000
ಒಕ್ಕಲಿಗ Age: 41/5.5/BE Govt Engineer Salary 65000/-
SC Age : 48/5.6/MA, LLM Advocate income 1.5 Lakh
ಯಾವುದೇ ಜಾತಿಯ ಅಭ್ಯಂತರ ವಿಲ್ಲದೆ ವಿಧವೆ/ ವಿಚ್ಛೇದಿತೆ/ ನೌಕರಸ್ಥೆ ವಧು ಬೇಕಾಗಿದ್ದಾರೆ.
ಬೆಂಗಳೂರು: 9480385742
ಮೈಸೂರು: 9742458242

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

WANTED
We require ITI Turner, Fitter, Electricians and Diploma in Mechanical, Preferably Female.
0821-2582668
7204445679
Mystech Machines
Q113, 4th Cross, 8th Main, Hebbal Industrial Estate, Mysore-570016

ಪಾರ್ಟ್ ಟೈಮ್ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಡೇಟಾ ಎಂಟ್ರಿ ಫಾರಂ ಫಿಲ್ಲಿಂಗ್ ಕನ್ನಡ ಇಂಗ್ಲೀಷ್ ರೈಟಿಂಗ್ ಹಾಗೂ ಟೆಲಿ ಕಾಲಿಂಗ್ ಕೆಲಸಗಳು ಗಳಿಸಿ ತಿಂಗಳಿಗೆ 12000/– ದಿಂದ 18000/–
7090237943,6362470664

SITE FOR SALE
Vijayanagar 2nd Stage, 20x30 East Face, Next to Corner Site, Next to Chandel Park, Near KD Circle.
9902851017

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 13,448+ESI+PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ
8453408502,9108100117

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

St. Mary's GIRLS PU COLLEGE
Chamundipuram, Mysore
* Admission Open
* Arts & Commerce
* Affordable Fee
9972389020
9844144232
above 85%, Free Admission

DIRECT II PUC ARTS & COMMERCE
ಜೂನ್ 1 ರಿಂದ ತರಗತಿಗಳು ಆರಂಭ
I PUC ಯಾವುದೇ ವಿಭಾಗದಲ್ಲಿ ಅನುತ್ತೀರ್ಣರಾದ ಹಾಗೂ SSLC ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜು ಮಾದರಿಯಲ್ಲಿ
REGULAR CLASSES 9.30 am to 3.30 pm
ಹೊರ ಜಿಲ್ಲೆಯ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ
CHANAKYA COACHING CENTRE(R)
Virajpet, Kodagu.
Mob : 8277496007, 948008554

HOUSE FOR SALE
3 BHK
Near Abhishek Circle, hebbal with Car Parking
8073562425
7483463551

ಜಮೀನು ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು ಹುಣಸನಾಳು ಗ್ರಾಮದ ಹತ್ತಿರ 1 ಎಕರೆ ಜಮೀನು ಮಾರಾಟಕ್ಕಿದೆ. ರಾಷ್ಟ್ರೀಯ ಹೆದ್ದಾರಿ ನಂಜನಗೂಡು–ಗುಂಡ್ಲುಪೇಟೆ ಮುಖ್ಯರಸ್ತೆಯಿಂದ ಕೇವಲ 3 ಕಿಲೋಮೀಟರ್ ಅಂತರ ಇದೆ.
ಕುಮಾರ್:
9902314234

ರೈಸ್ ಕಂಪನಿಗಾಗಿ ಈ ಕೆಳಕಂಡ ಕೆಲಸಗಳಿಗಾಗಿ ಕೆಲಸಗಾರರು ಬೇಕಾಗಿದ್ದಾರೆ.
ಪ್ಯಾಕಿಂಗ್ ಸ್ಟಾಫ್–ಮಹಿಳೆಯರು
ಅಕೌಂಟೆಂಟ್ – ಮಹಿಳೆಯರು
ಫೀಲ್ಡ್ ಸ್ಟಾಫ್ (2 ವೀಲರ್) – ಮಹಿಳೆಯರು ಹಾಗೂ ಗಂಡಸರು
ಡ್ರೈವರ್ – ಗಂಡಸರು
9164160000,7736991215

ಬೇಕಾಗಿದ್ದಾರೆ
ಮೈಸೂರಿನ ವೆಜ್ ಹೋಟೆಲ್‌ಗೆ ವೇಯಿಟರ್ಸ್ ಬೇಕಾಗಿದ್ದಾರೆ (Wanted Waiters for Veg Restaurant)
8073162978
9900765507

100% TEAK WOOD FACTORY FINISH DOORS @ DEPOT RATES



10 YEARS WARRANTY
www.ssbuildmart.com
9901291267
9845426862

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

WANTED TEACHERS
SCIENCE, MATHS, ENGLISH
QUALIFICATION: B.Sc B.Ed/BA B.Ed
ANNAPOORNESWARI HIGHER PRIMERY SCHOOL
HD KOTE ROAD, JAYAPURA, MYSORE
9739162162
8660909202,9886664566

ಬೇಕಾಗಿದ್ದಾರೆ
ಅರಮನೆ ನಗರಿ ಮೈಸೂರಿನ ಜನತೆಗೆ ಇದೊಂದು ಸಂತಸದ ಸುದ್ದಿ ಪ್ರತಿಷ್ಠಿತ ಕಂಪನಿ ತನ್ನ ಶಾಖೆಯನ್ನು ಮೈಸೂರಿನಲ್ಲಿ ಪ್ರಾರಂಭಿಸುತ್ತಿದ್ದು, ನಿರೀಕ್ಷೆಗೂ ಮೀರಿ ಗಳಿಸಬಹುದು. ರಿಯಲ್ ಎಸ್ಟೇಟ್ ಏಜೆಂಟ್ಸ್, ಇನ್ಸೂರೆನ್ಸ್ ಏಜೆಂಟ್, ನಿವೃತ್ತಿ ಹೊಂದಿರುವವರು, ಗೃಹಿಣಿಯರು ಚಿಟ್ಸ್ ಏಜೆಂಟ್‌ಗಳು
ಹೆಚ್ಚಿನ ಮಾಹಿತಿಗಾಗಿ ಕಿರಣ್ ಎಂ.
9343097970

SITE FOR SALE
30X40 S/E Corner Yesh Farma - II Bogadi Main Road Near Jatti Hundi
9611881632
9480326698

ಮನೆ ಬಾಡಿಗೆಗೆ ಇದೆ
ಮೈಸೂರು ಸಿಟಿ ಕುವೆಂಪುನಗರ (M) ಬ್ಲಾಕ್ ನಲ್ಲಿರುವ 20x30 ರ ನಿವೇಶನ ದಲ್ಲಿರುವ 2 ಬೆಡ್ ರೂಂ AEH ಸೌಲಭ್ಯ ವಿರುವ ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇರುತ್ತದೆ. ಸಂಪರ್ಕಿಸಿ:
ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
9449703452

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಅಪೋಲೋ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC. ಸಂಬಳ: Rs. 19,000. ವಯೋಮಿತಿ: 50 ವರ್ಷದ ಒಳಗೆ. ESI ಮತ್ತು PF, ಊತ, ತಿಂಡಿ ಸೌಲಭ್ಯ ಇರುತ್ತದೆ.
ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819, 9880727819

COMMERCIAL
(100x30) 80 Feet Road @ Brahmin's Layout MUDA Approved (Near Srirampura Ring Road). 60 Lakhs.
9538839926

Sudarshan Saur SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರು ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ ಇರಬೇಕು ವಿದ್ಯಾಭ್ಯಾಸ 10ನೇ ಪಾಸಾಗಿರಬೇಕು ಪಿಎಫ್ ಹಾಗೂ ಈಎಸ್ಐ ಸೌಲಭ್ಯ ಇರುತ್ತದೆ ಹಾಗೂ ವಸತಿ ಸೌಲಭ್ಯ ಇರುತ್ತದೆ
6361765969,8792815411

ಬೇಕಾಗಿದ್ದಾರೆ
Accountant ಬೇಕಾಗಿದ್ದಾರೆ 1 ರಿಂದ 2 ವರ್ಷದ ಅನುಭವ ಇರಬೇಕು We Required Accountant to Office work 1 to 2 year Experience Required
Shekhar: 9945911118
ARTHOR SERVICES PVT, LTD
L-89, 2nd Floor, M Block, Opp. Karuna Hospital, Kuvempunagar, Mysore

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಸೈಟು ಮಾರಾಟಕ್ಕೆ ಇದೆ
ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಇಲವಾಲದ ಕರಕನ ಹಳ್ಳಿಯ ಸಮೃದ್ಧಿ ಬಡಾವಣೆಯಲ್ಲಿ ಸೈಟ್ ನಂ. 70, ದಕ್ಷಿಣಾಭಿಮುಖದ 2314 ಅಡಿ ಅಳತೆಯ ನಿವೇಶನ ಮಾರಾಟಕ್ಕಿದೆ.
ಸಂಪರ್ಕಿಸಿ:
9449886407, 9449679859

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಉತ್ಪಾದನ ಕಾರ್ಖಾನೆಗೆ ನುರಿತ ಕೆಲಸಗಾರರು ಬೇಕಾಗಿದ್ದಾರೆ.
ಸಂದರ್ಶನ:29th & 30th May 2023
@ Factory Premises From 10 am to 1Pm
Looking for Machine Operators/ Carpenters Min Qualification : Diploma/ITI
HSR Interior (Furniture Manufacturer)
No.30, JCK Industrial Park, Belagola Industrial Area Metagalli, Post, Near Preethi Granite, Hebbal, 1st Stage, Mysore
Ph: 7795295476/9845235388
email: deepak@hsrfurn.com

BOYS & GIRLS
ಅಗ್ರಹಾರ ಹತ್ತಿರ Door Showroom ನಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ.
9886640503

ಉದ್ಯೋಗ ಅವಕಾಶ ತರಬೇತಿ ಶಿಬಿರ
ವಿಶ್ವಾಸಾರ್ಹ ಬ್ಯಾಂಕ್ ಸಂಸ್ಥೆಯಲ್ಲಿ ಉದ್ಯೋಗ ಅವಕಾಶದ ತರಬೇತಿಯ ಶಿಬಿರವನ್ನು ಏರ್ಪಡಿಸಲಾಗಿದೆ. ನಿವೃತ್ತ ಕೇಂದ್ರ/ರಾಜ್ಯ ಸಾರ್ವಜನಿಕ ಸಂಸ್ಥೆಯ ನೌಕರರು ಹಾಜರಾಗಬಹುದು. ವಿದ್ಯಾರ್ಹತೆ SSLC, Above Any Degree, ವಯಸ್ಸು 40 ವರ್ಷ ಮೇಲ್ಪಟ್ಟು. ದಾಖಲಾತಿಗಳು: ಫೋಟೋ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ವಿದ್ಯಾರ್ಹತೆ ದಾಖಲೆ, ಬ್ಯಾಂಕ್ ಪಾಸ್ ಬುಕ್ (1st Page) ಸಂಪರ್ಕಿಸಿ. ತರಬೇತಿಯ ಶಿಬಿರ ನಡೆಯುವ ದಿನಾಂಕ 29–05–2023 ಸಮಯ 10.30ರಿಂದ 3.30, 5 ದಿವಸಗಳು ನಡೆಯುತ್ತದೆ. followed by Lunch ಸ್ಥಳ: ದೊಡ್ಡ ಗಡಿಯಾರದ ಹತ್ತಿರ ಮೈಸೂರು
9449068132,9480055885

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

INVEST IN MYSORE
30X40 & 40X60
Mahalaxmi Layout
Old Kesare
Contact
9448447035

Teachers Required
* B.A., B.Ed. (English, Hindi, Social Science)
* B.Sc., B.Ed. (Computer Science)
* Montessori Trainer OR Any Degree holder.
* Spoken English trainer.
Email: kalbharathi1991@gmail.com
9535333467, 8150964055

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

WANTED
PE, Social science, Art and Craft, English and Computer Teaching staff for reputed Institution. Send your resume through WhatsApp / Message. Contact :
8971577685,9980631121

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳು ಬೇಕಾಗಿದೆ
9538412881

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9353895908, 9620591666

EAST FACING
30X40 ಸೈಟ್ಸ್ ಎಂಐಟಿ ಇಂಜಿನಿಯರಿಂಗ್ ಕಾಲೇಜು ಹತ್ತಿರ ಮೈಸೂರು, 3ಕಿಮೀ ರಿಂಗ್ ರಸ್ತೆ, 9ಕಿಮೀ ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್, ಸಂಪರ್ಕಿಸಿ
90355-65773

30X40 ಡಿಟಿಸಿಪಿ
'ಎ' ಖಾತೆಯುಳ್ಳ ಸೈಟು ಮಾರಾಟಕ್ಕಿದೆ 11 ಲಕ್ಷದ 50 ಸಾವಿರಗಳು ನಿರ್ಮಾಣ್ ಲೇಔಟ್, ತಳೂರು ಸರ್ಕಲ್, ಹತ್ತಿರ, ಮೈಸೂರು
9742198093. 9742198093

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗಿಯರು/ ಮಹಿಳೆಯರು ಬೇಕಾಗಿದ್ದಾರೆ. ಸಂಬಲ: 8000 ದಿಂದ 11000ದವರೆಗೆ (ಅನುಭವದ ಆಧಾರದ ಮೇಲೆ). ಸಮಯ: ಬೆ: 09.30 ಯಿಂದ ರಾತ್ರಿ 9 ರವರೆಗೆ, ಸ್ಥಳ: ಅಗ್ರಹಾರ, ಹೆಬ್ಬಾಳ, ಮೈಸೂರು. ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:
9986311444, 9986322444

ಮೈಸೂರು ಮ್ಯಾರೇಜ್ ಬ್ಯೂರೋ
ವಧು–ವರರನ್ನು ಹುಡುಕಲು ಸಹಾಯಬೇಕೆ? ನಮಗೆ ಕರೆ ಮಾಡಿ
ಡಾ|| ಗುರೂಜಿ
9448229184
7899625268

SITE FOR SALE
EAST FACING SITE NO-52
EAST TO WEST 17.80/2 METER
NORTH TO SOUTH 9 METER
KANDAYANAGAR 1ST STAGE
SRI RAMPURA, MYSORE
CONTACT 9945192300

ಮನೆ ಬಾಡಿಗೆಗಿದೆ
ಗ್ರೌಂಡ್ ಫ್ಲೋರ್ 30x40 ಅಳತೆ ಪೂರ್ವಕ್ಕೆ ಬಾಗಿಲು 2BHK ನೀರು, ಸೋಲಾರ್, ವಾಡ್ರೂಬ್ ವ್ಯವಸ್ಥೆ ಇದೆ. ನಂ.40, ಶಿಕ್ಷಕರ ಬಡಾವಣೆ ಡಾ|| ರಾಧಾಕೃಷ್ಣನಗರ, ಮೈಸೂರು ಸಸ್ಯಾಹಾರಿಗಳಿಗೆ ಮಾತ್ರ
9035085532
9480711080

Ready To Registration Sites
ಮೈಸೂರಿನ ಸುತ್ತಮುತ್ತ MUDA & DTCP Approved ಸೈಟುಗಳು ಕೇವಲ ರೂ.10 ಲಕ್ಷಕ್ಕೆ ದೊರೆಯುತ್ತದೆ ಹಾಗೂ ಬ್ಯಾಂಕ್ ಲೋನ್ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6363082326

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ – ಪುರುಷ/ಮಹಿಳೆಯರು 10th/PUC (Age-30 Yrs to 50 Yrs)
2) ಹೌಸ್ ಕೀಪಿಂಗ್ – ಹುಡುಗರು/ ಮಹಿಳೆಯರು. ESI, PF ಮತ್ತು ಊಟದ ಸೌಲಭ್ಯವಿರುತ್ತದೆ.
ಸಂಪರ್ಕಿಸಿ: 9739166772
9880419847

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿ 3BHK, 20x30, S/F ಡ್ಯೂಪ್ಲೆಕ್ಸ್ ಪೂರ್ವಕ್ಕೆ ಬಾಗಿಲು, ವಾಸ್ತು All Teak ಇಟಾಲಿಯನ್ ಕಿಚನ್ & ವಾಡ್ರೋಬ್ & ಅಟ್ಯಾಚ್ ಬಾತ್ ರೂಂಗಳು ಆರ್ಕಿಟೆಕ್ ಡಿಸೈನ್
9886311559
8073397451

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 9148733213

ಬೇಕಾಗಿದ್ದಾರೆ
ಕುವೆಂಪು ನಗರ ಹಾಗೂ ಮೈಸೂರು ಸಿಟಿ ಮತ್ತು ಹೆಬ್ಬಾಳ್ ಹಾಗು ಹೂಟಗಳ್ಳಿ ಏರಿಯಾಗಳಲ್ಲಿ ಅನುಭವ ಹೊಂದಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9035050656
9035050653

ಮನೆ ಮಾರಾಟಕ್ಕಿದೆ
ವಸಂತ ನಗರ, ವಿದ್ಯಾವಿಕಾಸ ಕಾಲೇಜು ಹಿಂಭಾಗ ಅಳತೆ 20x30 W/N, Ground Floor, Mysuru
9019396670

ಮನೆ ಖರೀದಿಗೆ ಬೇಕಾಗಿದೆ
20x30 ಡ್ಯೂಪ್ಲೆಕ್ಸ್ ಹೊಸ ನಿರ್ಮಾಣ ದಟ್ಟಗಳ್ಳಿಯಿಂದ ಜೆ.ಪಿ.ನಗರದ ರಿಂಗ್ ರೋಡ್ ಒಳಗೆ / ಹತ್ತಿರ
9945282367

ಉನ್ನತ ಕಂಪನಿ ಹಾಗೂ ಕಾರ್ಖಾನೆಗಳಲ್ಲಿ (ಕೂರ್ಗಳ್ಳಿ, ಹೆಬ್ಬಾಳು, ಮೇಟಗಳ್ಳಿ, ಮೈಸೂರು)ಇಲ್ಲಿ ಕೆಲಸ ಮಾಡಲು (7th, 10th, PUC, Any Degree, Any ITI Qualification Deploma) ವಿದ್ಯಾಭ್ಯಾಸವುಳ್ಳ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ (ವಿದ್ಯಾಭ್ಯಾಸ ಇಲ್ಲದೆ ಇರುವವರು ಸಹ ಬೇಕಾಗಿದ್ದಾರೆ. ವೇತನ:12000 ರಿಂದ 18000 ರವರೆಗೆ, (ESI, PF) ಹಾಗೂ ಕ್ಯಾಂಟೀನ್ ಸೌಲಭ್ಯವಿದೆ. (Stee wards, Helpers, House Keeping, Machine Operatore, Security) ರೆಸಾರ್ಟ್‌ಗಳಲ್ಲಿ ಕೆಲಸ ಮಾಡಲು ಮಹಿಳೆಯರು & ಪುರುಷರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಸೌಲಭ್ಯವಿದೆ.
9036461347,
9606226036,8296280922

WANTED
Montessori Certified / NTT Teachers needed in Emerging School In Bogadi.
9611776677

SITE FOR SALE
Kenchalagudu Near Brahmin Layout
20X30 W/F
9886481265
8310972636

HOUSE FOR SALE
Lalbahadur Sastrinagar 20x30 S/E Single Floor
9886481265
8310972636

WANTED
Female Graduates for Montessori Pre School In Bogadi.
6364227636

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 23.06.23, ಕೇರಳ ಪ್ರವಾಸ 7 ದಿನಗಳು 24.06.23, ಮಧ್ಯಪ್ರದೇಶ 4 ದಿನಗಳು 28.06.23, ಶಿರಡಿ ಪ್ರವಾಸ 3 ದಿನಗಳು 07.07.23, ಪುರಿ ಜಗನ್ನಾಥ ಪ್ರವಾಸ 4 ದಿನಗಳು 12.07.23
9008381022
9019462508

JNANAJYOTHI VIDYALAYA
HPS BEERIHUNDI. (English Medium).
NST/Montessori-2.
English teacher-2
Mathematics, science-2
8884754393
8197057626

HEALTH INSURANCE
* For Individuals, Family & Senior Citizens
* Get Tax benefits
For Details Contact
9110861343

SITE FOR SALE
Sri Sai Chamundeshwari Layout near Chikkalli Mysore T.Narasipura Main Road 30x40 S/F
6364501692

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ, ತೆಲಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಮೈಸೂರು ಸಂಬಳ: 8000/–
8150005111

ಮನೆ ಬಾಡಿಗೆಗೆ ಇದೆ
314/ಡಿ, ಮೊದಲನೇ ಮಹಡಿ, 2ನೇ ಹಂತ, 2ನೇ ಮೇನ್, ಪೂರ್ವ ದಿಕ್ಕು, ಪಾರ್ಕ್ ಎದುರು, ಎಂ.ಬ್ಲಾಕ್, ಕುವೆಂಪುನಗರ, ಮೈಸೂರು–23
8825961290

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಸಾರ್ವಜನಿಕರಿಂದ ಹಣ ಪಡೆಯದೇ ಚಿಕಿತ್ಸೆ ನೀಡಿ

ಸರ್ಕಾರಿ ವೈದ್ಯರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೂಚನೆ



ಪಾಂಡವಪುರ, ಮೇ 26– ಸರ್ಕಾರಿ ಆಸ್ಪತ್ರೆಗೆ ಹೆಚ್ಚಾಗಿ ಬಡವರೇ ಬರುವುದರಿಂದ ಅವರಿಂದ ಹಣ ಪಡೆಯದೇ ಚಿಕಿತ್ಸೆ ನೀಡಿ ಎಂದು ವೈದ್ಯರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ವೈದ್ಯಾಧಿಕಾರಿ ಡಾ.ಹೆಚ್.ಕುಮಾರ್ ಅವರೊಂದಿಗೆ ಚರ್ಚೆ ನಡೆಸಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ 50ಕ್ಕೂ ಹೆಚ್ಚು ಉದ್ಯೋಗ ಖಾಲಿ ಇದೆ. ಭರ್ತಿ ಮಾಡಿದರೆ ಮತ್ತಷ್ಟು ಸೇವೆ ಹೆಚ್ಚಾಗುತ್ತದೆ. ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳಬಹುದು ಎಂದು ವೈದ್ಯರು ತಿಳಿಸಿದ್ದಾರೆ. ಈ ಬಗ್ಗೆ ಕ್ರಮವಹಿಸಲಾ ಗುವುದು ಎಂದರು. ಇಲ್ಲಿನ ಸಾರ್ವಜನಿಕ ಆಸ್ಪತ್ರೆ ಕಟ್ಟಡ ನವೀಕರಣ ಮಾಡ ಬೇಕಾ ಗಿದೆ. ಸರ್ಕಾರಿ ಆಸ್ಪತ್ರೆಗೆ ಬಂದವರು ಖಾಸಗಿ ಆಸ್ಪತ್ರೆಗೆ ಏಕೆ ಹೋಗಬೇಕು ಅಥವಾ ಇಲ್ಲಿಯ ವೈದ್ಯರು ಏಕೆ ಕಳುಹಿಸಬೇಕು ಎಂಬ ಬಗ್ಗೆ ವೈದ್ಯರೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿದ್ದೇನೆ. ಸರ್ಕಾರಿ ಆಸ್ಪತ್ರೆ ಯಲ್ಲಿ ವೈದ್ಯರು ರೋಗಿಗಳಿಂದ ಹಣ ವಸೂಲಿ ಮಾಡುವಂತಿಲ್ಲ. ನಿಮಗೆ ಇಷ್ಟ ಇದ್ದರೆ ಕೆಲಸ ಮಾಡಿ, ಕಷ್ಟ ಆದರೆ ಬೇರೆಡೆ ಹೋಗಿ ಎಂದರು.

ಶಾಸಕನಾಗಿ ನಾನು ಮೂಲ ಸೌಕರ್ಯಕ್ಕೆ ಹೆಚ್ಚು ಆದ್ಯತೆ ನೀಡುತ್ತೇನೆ. ಜೊತೆಗೆ ಉದ್ಯೋಗ ಸೃಷ್ಟಿಸಿ ಅವಶ್ಯಕತೆ ಇರುವಷ್ಟು ಅಭಿವೃದ್ಧಿ ಕೆಲಸಕ್ಕೆ ರಾಜ್ಯ ಸರ್ಕಾರದಿಂದ ಅನುದಾನ ತರುತ್ತೇನೆ ಎಂದರು.

ಇದೇ ವೇಳೆ ಸರ್ಕಾರಿ ಆಸ್ಪತ್ರೆಯ ಎಲ್ಲಾ ಕೊಠಡಿಗಳನ್ನು ವೀಕ್ಷಿಸಿ, ಹೊರ ಹಾಗೂ ಒಳ ರೋಗಿಗಳ ಆರೋಗ್ಯದ ಮಾಹಿತಿ ಮತ್ತು ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಬಗ್ಗೆ ವಿಚಾರಿಸಿದರು.

ಈ ಸಂದರ್ಭ ಸರ್ವೋದಯ ಕರ್ನಾಟಕ ರೈತ ಸಂಘದ ತಾಲೂಕು ಅಧ್ಯಕ್ಷ ಕೆ.ಎಸ್.ದಯಾನಂದ್, ಪುರಸಭೆ ಸದಸ್ಯರಾದ ಪಾರ್ಥ, ಉಮಾಶಂಕರ್, ದೀಪು, ಮಹೇಶ್ ಸೇರಿದಂತೆ ಅನೇಕರಿದ್ದರು.

ಎಟಿಬಿಇ ಸ್ವಯಂ ಉದ್ಯೋಗ ಸಂಸ್ಥೆ ಉದ್ಘಾಟನೆ



ಕೆ.ಆರ್.ಪೇಟೆ, ಮೇ 26– ಪ್ರಧಾನ ಮಂತ್ರಿ ಶಹರಿ ರೋಜ್‌ಗಾರ್ ಯೋಜನೆಯಡಿ ತಾಲೂಕಿನ ನಾರಾಯಣಪುರದಲ್ಲಿ ಆರಂಭಿಸಿರುವ ಎಟಿಬಿಇ ಸ್ವಯಂ ಉದ್ಯೋಗ ಸಂಸ್ಥೆಯನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶಾಸಕ ಹೆಚ್.ಟಿ. ಮಂಜು, ಸಿವಿಲ್ ಇಂಜಿನಿಯರಿಂಗ್ ಪದವೀಧರರಾದ ಅರವಿಂದ್ ಅವರು ಈಗಾಗಲೇ ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಹುಟ್ಟೂರು ಮರೆಯದೇ ತಮ್ಮ ಸ್ವಗ್ರಾಮದಲ್ಲಿ ಮೇಕೆ ಮತ್ತು ಹಸು ಸಾಕಾಣಿಕೆ, ರೇಷ್ಮೆ, ಕೃಷಿ ಸೇರಿದಂತೆ ಸಮಗ್ರ ಕೃಷಿ ಕೈಗೊಂಡು ಉತ್ತಮ ರೈತರಾಗಿ ಗುರುತಿಸಿಕೊಂಡು ಯಶಸ್ವಿಯಾಗಿದ್ದಾರೆ. ಇದೀಗ ನಾರಾಯಣಪುರದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಎಟಿಬಿಇ ಕನ್‌ಸ್ಟ್ರಕ್ಷನ್ ಪ್ರೈ. ಲಿಮಿಟೆಡ್ ಉದ್ಯಮ ಆರಂಭಿಸುತ್ತಿರುವುದು ಸ್ಥಳೀಯವಾಗಿ ನೂರಾರು ಮಂದಿಗೆ ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ ಎಂದರು.

ಯುವಕರು ಸರ್ಕಾರಿ ಉದ್ಯೋಗಕ್ಕಾಗಿ ಕಾಯದೇ ತಮ್ಮಲ್ಲಿರುವ ವೃತ್ತಿ ಕೌಶಲ್ಯವನ್ನು ಸದ್ಬಳಕೆ ಮಾಡಿಕೊಂಡು ಸ್ವಂತ ಉದ್ಯಮ ಆರಂಭಿಸುವ ಮೂಲಕ ಸ್ವಾಭಿಮಾನಿಗಳಾಗಿ ಸಮೃದ್ಧ ಜೀವನ ನಡೆಸಬೇಕು ಎಂದು ಮನವಿ ಮಾಡಿದರು.

ನಾವು ಆರಂಭಿಸುವ ಉದ್ಯಮ ಚಿಕ್ಕದಿರಲಿ ಅಥವಾ ದೊಡ್ಡದಾಗಿರಲಿ ನಾನು ಸಾಧನೆ ಮಾಡುತ್ತೇನೆ. ಲಾಭ ನಷ್ಟಗಳನ್ನು ಸರಿದೂಗಿಸಿಕೊಂಡು ಯಶಸ್ವಿ ಉದ್ಯಮಿಯಾಗುತ್ತೇನೆ ಎಂಬ ಛಲ ಮೈಗೂಡಿಸಿಕೊಂಡು ಯುವಕರು ತಮ್ಮನ್ನು ಸಂಪೂರ್ಣವಾಗಿ ಉದ್ಯಮದಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ನಾವು ಆರಂಭಿಸುವ ಯಾವುದೇ ಉದ್ಯಮದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ, ಜಿಪಂ ಮಾಜಿ ಸದಸ್ಯ ಮಂಜುನಾಥ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎ.ಎಸ್.ಶ್ರೀಧರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್. ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷರಾದ ಕೃಷ್ಣಸಿಂಗ್, ಲೋಕೇಶ್, ಎನ್.ಎಸ್. ಮಂಜೇಗೌಡ, ಆಶಾ, ಗ್ರಾಪಂ ಮಾಜಿ ಸದಸ್ಯರಾದ ಭಾರತಿ, ತಮ್ಮಣ್ಣ ನಾಯಕ, ಪದ್ಮ, ವೆಂಕಟೇಶ್, ತಮ್ಮಣ್ಣ, ದಯಾನಂದ್, ಪರಮೇಶ್ ಸೇರಿದಂತೆ ಇತರರಿದ್ದರು.

ಆರೋಗ್ಯ ಕೇಂದ್ರಕ್ಕೆ ಶಾಸಕ ಗಣಿಗ ರವಿ ದಿಢೀರ್ ಭೇಟಿ



ಮಂಡ್ಯ, ಮೇ 26– ತಾಲೂಕಿನ ಬಿ.ಹೊಸೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶುಕ್ರವಾರ ದಿಢೀರ್ ಭೇಟಿ ನೀಡಿದ ಶಾಸಕ ಗಣಿಗ ರವಿಕುಮಾರ್ ರೋಗಿಗಳಿಂದ ಅಹವಾಲು ಸ್ವೀಕರಿಸಿದರು. ಬಳಿಕ ವಾರ್ಡ್‌ಗಳನ್ನು ವೀಕ್ಷಿಸಿದ ಶಾಸಕರು, ರೋಗಿಗಳಿಗೆ ತೊಂದರೆಯಾಗದಂತೆ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಖಡಕ್ ಸೂಚನೆ ನೀಡಿದರು.

ಇಂದು ಬೆಳಗ್ಗೆ ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಿದ ಶಾಸಕ ಗಣಿಗ ರವಿಕುಮಾರ್ ಮಂಡ್ಯ ನಗರದ ಪೇಟೆಬೀದಿ ಬಳಿಯ ರೈಲ್ವೆ ಗೇಟ್‌ಗೆ ನಿರ್ಮಿಸಲು ಉದ್ದೇಶಿಸಿರುವ ಕೆಳಸೇತುವೆ ಬಗ್ಗೆ ಜಿಲ್ಲಾಧಿಕಾರಿ ಗೋಪಾಲಕೃಷ್ಣ ಹಾಗೂ ನಗರಸಭೆ ಆಯುಕ್ತ ಮಂಜುನಾಥ್ ಜೊತೆ ಸ್ಥಳ ಪರಿಶೀಲನೆ ನಡೆಸಿದರು. ಬಳಿಕ ಮಂಡ್ಯದ ಪ್ರವಾಸಿ ಮಂದಿರದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕ್ಷೇತ್ರದ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸಿದರು. ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಮುಂದಿನ ದಿನಗಳಲ್ಲಿ ಮತ್ತಷ್ಟು ಆರೋಗ್ಯ ಕೇಂದ್ರಗಳು, ಗ್ರಾಪಂ ಸೇರಿದಂತೆ ವಿವಿಧ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಲಾಗುವುದು. ಜನಸಾಮಾನ್ಯರಿಗೆ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.



ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ

ಮಂಡ್ಯ, ಮೇ 26– ಪಿಯುಸಿಯಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ವಿಭಾಗ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ 17 ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ತಮ್ಮ ಕಚೇರಿಯಲ್ಲಿ ಅಭಿನಂದಿಸಿ, ವೈಯಕ್ತಿಕ ಪ್ರೋತ್ಸಾಹ ಧನ ನೀಡಿದರು. ನಂತರ ಮಾತನಾಡಿದ ಅವರು ಮಕ್ಕಳು ವಿದ್ಯಾಭ್ಯಾಸ ಮತ್ತು ಜ್ಞಾನ ಗಳಿಸುವ ಹಾದಿಯಲ್ಲಿ ಸಾಗಿ ಜಿಲ್ಲೆ ಹಾಗೂ ದೇಶಕ್ಕೆ ಉತ್ತಮ ಪ್ರಜೆಗಳಾಗುವಂತೆ ಶುಭ ಹಾರೈಸಿದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ಭಾರತೀನಗರ, ಮೇ 26– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗೇಟ್ ಬಳಿ ಶುಕ್ರವಾರ ಮುಂಜಾನೆ ನಡೆದಿದೆ.



ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿ ಗ್ರಾಮದ ಬಸವಶೆಟ್ಟಿ ಅವರ ಪುತ್ರ ಬಸವರಾಜು(60) ಮೃತಪಟ್ಟವರು. ಈತ ಮದ್ದೂರಿನಿಂದ ಕೊಳ್ಳೇಗಾಲಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಕೆ.ಎಂ.ದೊಡ್ಡಿಯಿಂದ ಆಗಮಿಸಿದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ ಪರಿಣಾಮ ತೀವ್ರಗಾಯಗೊಂಡ ಬಸವರಾಜು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಚಿಕ್ಕರಸಿನಕೆರೆ ಗೇಟ್‌ನಲ್ಲಿ ಮದ್ದೂರಿನ ಜಿಟಿಟಿಸಿ ಕಾಲೇಜಿಗೆ ಹೋಗಲು ನಿಂತಿದ್ದ ವಿದ್ಯಾರ್ಥಿ ಬಿ.ಎಸ್.ಯಶ್ವಂತ್‌ಗೆ ಅಪ್ಪಳಿಸಿದೆ. ಇದರಿಂದ ಯಶ್ವಂತ್ ಗಂಭೀರವಾಗಿ ಗಾಯಗೊಂಡು ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಬಸವರಾಜು ಬಿಎಂಟಿಸಿ ನಿವೃತ್ತ ನೌಕರರಾಗಿದ್ದು, ಬೌದ್ಧ ವಿಹಾರಕ್ಕೆ ಸೇರಿ ಬಂತೆಬೋಧಿ ಪುಣ್ಯಾನಂದ ಎಂದು ಹೆಸರು ಬದಲಾವಣೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಎಂ. ದೊಡ್ಡಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಜಿಲ್ಲಾಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.



ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿಯಲ್ಲಿ ರಾಜ್ಯದ ನೂತನ ಪೊಲೀಸ್ ಮಹಾ ನಿರ್ದೇಶಕ ಡಾ.ಅಲೋಕ್ ಮೋಹನ್ ಅವರನ್ನು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಭೇಟಿ ಮಾಡಿ ಶುಭ ಕೋರಿದರು.

ವಲಸೆ ಕುರಿಗಾರರಿಂದ ಅರ್ಜಿ ಆಹ್ವಾನ

ಮಂಡ್ಯ, ಮೇ 26– ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಮಂಜೂರಾದ ವಲಸೆ ಕುರಿಗಾರರಿಗೆ ಟೆಂಟ್, ಬಲೆ ಮತ್ತು ಇನ್ನಿತರ ಪರಿಕರಗಳನ್ನು ನೀಡುವ ಯೋಜನೆಯಡಿ ಸಾಮಾನ್ಯ–7, ಪರಿಶಿಷ್ಟ ಜಾತಿ–2 ಮತ್ತು ಪರಿಶಿಷ್ಟ ಪಂಗಡದ–1 ಫಲಾನುಭವಿಗಳಿಗೆ ಯೋಜನೆ ಅನುಷ್ಠಾನಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಅಥವಾ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಜೂ.6 ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯ ಮಿತ, ಮಂಡ್ಯ ಅವರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗೆ ದೂ: 08232–221590 ಅನ್ನು ಸಂಪರ್ಕಿಸಬಹುದು.

ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮಂಡ್ಯ, ಮೇ 26– ಪ್ರಸಕ್ತ ಸಾಲಿನ ಕೈ ಮಗ್ಗ ಮತ್ತು ಜವಳಿ ತಂತ್ರಜ್ಞಾನ ಡಿಪ್ಲೋಮಾ ಕೋರ್ಸ್‌ಗಾಗಿ 44 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವ್ಯಾಸಂಗದ ವೇಳೆ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 2,500 ರೂ. ಶಿಷ್ಯವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಫಾರಂಗಳಿಗಾಗಿ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ, ಗದಗ–ಬೆಟಗೇರಿ ದೂ: 08372–297221 ಮೊ. 9448644074 ಅನ್ನು ಸಂಪರ್ಕಿಸಬಹುದು. ಅರ್ಜಿಗಳನ್ನು http://khtigadag.ac.in/AdmissionForm.pdf ನಲ್ಲಿ ಡೌನ್‌ಲೌಡ್ ಮಾಡಿಕೊಂಡು ಅಗತ್ಯ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ, ಗದಗ–ಬೆಟಗೇರಿ ಇವರಿಗೆ ಮೇ 31 ರೊಳಗೆ ಸಲ್ಲಿಸುವುದು ಎಂದು ಕೈ ಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆ ತಿಳಿಸಿದೆ.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಮೇ 26– ಪಾಂಡವಪುರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಫಿಟ್ಟರ್, ಕಂಪ್ಯೂಟರ್, ವೆಲ್ಡರ್ ವೃತ್ತಿಗಳ ತರಬೇತಿಗಾಗಿ ಎಸ್‌ಎಸ್‌ಎಲ್‌ಸಿ ಪಾಸ್/ಫೆಲ್ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜೂ.6 ರೊಳಗಾಗಿ https://cite.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ: 08236–295060 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗಿಲ್ ಶತಕ, ಮೋಹಿತ್ ಮ್ಯಾಜಿಕ್; ಮುಂಬೈ ಮಣಿಸಿ ಗುಜರಾತ್ ಫೈನಲ್‌ಗೆ ಲಗ್ಗೆ

ಮೇ 28ಕ್ಕೆ ಗುಜರಾತ್–ಚೆನ್ನೈ ನಡುವೆ ಪ್ರಶಸ್ತಿಗೆ ಹೈವೋಲ್ಟೇಜ್ ಕಾಳಗ



ಅಹಮದಾಬಾದ್,ಮೇ 26(ಸಿಎನ್)– ಶುಭಮನ್ ಗಿಲ್ ಸಿಡಿಲಬ್ಬರದ ಶತಕ ಹಾಗೂ ಮೋಹಿತ್‌ಶರ್ಮಾ 5 ವಿಕೆಟ್ ಪಡೆದ ಪರಿಣಾಮ ಮುಂಬೈ ವಿರುದ್ಧ 62 ರನ್ ಭರ್ಜರಿ ಜಯ ಸಾಧಿಸಿದ ಗುಜರಾತ್ ಫೈನಲ್‌ಗೆ ಲಗ್ಗೆ ಹಾಕಿತು.

ಮುಂಬೈ ಇಂಡಿಯನ್ಸ್ ವಿರುದ್ಧ ಅಧಿಕಾರಯುತ ಜಯ ಸಾಧಿಸಿದ ಹಾಲಿ ಚಾಂಪಿಯನ್ ಗುಜರಾತ್ ಫೈನಲ್‌ಗೆ ಲಗ್ಗೆ ಇಟ್ಟು, ಮೇ 28 ರಂದು ಚೆನ್ನೈ ವಿರುದ್ಧ ಸೆಣೆಸಾಡಲಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪ್ಲೇಆಫ್‌ನ ಮೂರನೇ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ ಕೇವಲ 3 ವಿಕೆಟ್ ನಷ್ಟಕ್ಕೆ 233 ರನ್‌ಗಳ ದಾಖಲೆಯ ಮೊತ್ತ ಕಲೆಹಾಕಿತು.

224 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಿದ ಮುಂಬೈ ಆರಂಭಿಕ ಆಘಾತ ಅನುಭವಿಸಿತು. ನೇಹಾಲ್‌ವಧೇರಾ, ನಾಯಕ ರೋಹಿತ್ ಶರ್ಮಾ ಬಹುಬೇಗನೇ ವಿಕೆಟ್ ಒಪ್ಪಿಸಿದರು. ತಿಲಕ್‌ವರ್ಮಾ 14 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 5 ಬೌಂಡರಿ ಒಳಗೊಂಡ 43 ರನ್ ಗಳಿಸಿದರೆ, ಕ್ಯಾಮರೂನ್ ಗ್ರೀನ್ 30 ರನ್ ಕಲೆ ಹಾಕಿದರು. ಸೂರ್ಯಕುಮಾರ್ ಯಾದವ್ 38 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 7 ಬೌಂಡರಿ ಒಳಗೊಂಡ 61 ರನ್ ಗಳಿಸಿದರು. ಆದರೆ ಯಾವ ಬ್ಯಾಟ್ಸ್‌ಮನ್ ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಅಂತಿಮವಾಗಿ 18.2 ಓವರ್‌ನಲ್ಲಿ 171 ರನ್‌ಗಳಿಗೆ ಮುಂಬೈ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. 62 ರನ್‌ಗಳಿಂದ ಗುಜರಾತ್‌ಗೆ ಮಂಡಿಯೂರಿತು. ಗುಜರಾತ್ ಪರ ಮೋಹಿತ್ ಶರ್ಮಾ 5 ವಿಕೆಟ್ ಪಡೆದು ಮಿಂಚಿದರೆ, ಮೊಹಮ್ಮದ್ ಶಮಿ, ರಶೀದ್ ಖಾನ್ ತಲಾ ಎರಡು ವಿಕೆಟ್ ಹಾಗೂ ಲಿಟಲ್ ಒಂದು ವಿಕೆಟ್ ಪಡೆದರು. ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ ಕೇವಲ 3 ವಿಕೆಟ್ ನಷ್ಟಕ್ಕೆ 233 ರನ್ ಭರ್ಜರಿ ಮೊತ್ತ ಮೊತ್ತ ಕಲೆಹಾಕಿತು.

ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ ಶುಭಮನ್ ಗಿಲ್ ಮುಂಬೈ ಬೌಲರ್‌ಗಳನ್ನು ಚೆಂಡಾಡಿದರು. 60 ಎಸೆತಗಳಲ್ಲಿ ಆಕರ್ಷಕ 10 ಸಿಕ್ಸರ್ 7 ಬೌಂಡರಿ ಒಳಗೊಂಡ 129 ರನ್ ಗಳಿಸುವ ಮೂಲಕ ದಾಖಲೆಯ ಶತಕ ಸಿಡಿಸಿದರು. ಸಾಯಿ ಸುದರ್ಶನ್ 43, ನಾಯಕ ಹಾರ್ದಿಕ್‌ಪಾಂಡ್ಯ 13 ಎಸೆತಗಳಲ್ಲಿ 2 ಸಿಕ್ಸರ್ 2 ಬೌಂಡರಿ ಒಳಗೊಂಡ ಅಜೇಯ 28 ರನ್ ಸಿಡಿಸಿ ತಂಡದ ಮೊತ್ತ 200ರ ಗಡಿ ದಾಟಿಸಿದರು.

ಶುಭಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಫೈನಲ್ ಪಂದ್ಯ ಚೆನ್ನೈ ಹಾಗೂ ಗುಜರಾತ್ ನಡುವೆ ಮೇ 28ರ ರಾತ್ರಿ 7–30ಕ್ಕೆ ನಡೆಯಲಿದೆ.

ಮೇ 29ರಂದು ಇಸ್ರೋದಿಂದ NVS–01 ನ್ಯಾವಿಗೇಷನ್ ಉಪಗ್ರಹ ಉಡಾವಣೆ



ಬೆಂಗಳೂರು, ಮೇ 26– ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇದೇ ಮೇ 29ರಂದು ಎನ್‌ವಿಎಸ್–01 ಉಪಗ್ರಹವನ್ನು ಹೊತ್ತೊಯ್ಯುವ ಜಿಯೋಸಿಂಕ್ರೊನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಮಿಷನ್ ಅನ್ನು ಉಡಾವಣೆ ಮಾಡಲಿದೆ. NVS–01 ಉಪಗ್ರಹವು NVS ಸರಣಿಯ ಉಪಗ್ರಹಗಳ ಭಾಗವಾಗಿ ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್ಸ್ಟೆಲೇಷನ್ ಸೇವೆಗಳ ಅಡಿಯಲ್ಲಿ ಉಡಾವಣೆಯಾಗುವ ಮೊದಲ ಉಪಗ್ರಹವಾಗಿದೆ. ಭಾರತೀಯ ಪ್ರಾದೇಶಿಕ ನೌಕಾಯಾನಶಾಸ್ತ್ರ ಉಪಗ್ರಹ ವ್ಯವಸ್ಥೆ ಎಂದೂ ಕರೆಯಲ್ಪಡುವ NavIC, ನಿಖರವಾದ ಸಮಯದ ಸ್ಥಾನೀಕರಣ ಮತ್ತು ಸಮಯದ ಮಾಹಿತಿಯನ್ನು ಒದಗಿಸಲು ಸಹಾಯ ಮಾಡುತ್ತದೆ. ನಾಗರಿಕ ಮತ್ತು ಮಿಲಿಟರಿ ಉದ್ದೇಶಗಳಿಗಾಗಿ ದೇಶಾದ್ಯಂತ ನೈಜ–ಸಮಯದ ಪ್ರಾದೇಶಿಕ ಸಂಚರಣೆಯಲ್ಲಿ ಸಹಾಯ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ.

NVS ಸರಣಿಯ ಉಪಗ್ರಹಗಳು NavIC ನಿಂದ ಉಡಾವಣೆಗೊಳ್ಳುವ ಎರಡನೇ ಸರಣಿಯಾಗಿದೆ. ಮೊದಲ ಸರಣಿ, IRNSS ಉಪಗ್ರಹಗಳನ್ನು ಜುಲೈ 2013 ಮತ್ತು ಏಪ್ರಿಲ್ 2018ರ ನಡುವೆ ಉಡಾವಣೆ ಮಾಡಲಾಯಿತು. ಮೊದಲ ಸರಣಿಯು IRNSS–1Aನಿಂದ IRNSS-1I ವರೆಗಿನ ಒಂಬತ್ತು ಉಪಗ್ರಹಗಳನ್ನು ಒಳಗೊಂಡಿತ್ತು. NVS ಸರಣಿಯು ಉಪಗ್ರಹಗಳ ಮೊದಲ ಸರಣಿಯನ್ನು ಪೂರಕ ಗೊಳಿಸಲು ಮತ್ತು ವರ್ಧಿಸಲು ಉದ್ದೇಶಿಸಲಾಗಿದೆ, ಇದರಲ್ಲಿ ಕೆಲವು ಈಗಾಗಲೇ ಅಸ್ತಿತ್ವದಲ್ಲಿರುವ ಉಪಗ್ರಹಗಳನ್ನು ಅವುಗಳ ಕಾರ್ಯನಿರ್ವಹಣೆಯಲ್ಲಿ ಬದಲಾಯಿಸುತ್ತವೆ.

NVS ಸರಣಿಯ ಅಡಿಯಲ್ಲಿ ಒಟ್ಟು ಏಳು ಯೋಜಿತ NVS ಉಪಗ್ರಹಗಳಿವೆ, ಇದು ಎರಡನೇ ತಲೆಮಾರಿನ ಸಾಮರ್ಥ್ಯಗಳನ್ನು ಹೊಂದಿರುತ್ತದೆ. NVS–01 ಅನ್ನು ಮೇ 29ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲು ನಿರ್ಧರಿಸಲಾಗಿದೆ. ISRO ಪ್ರಕಾರ, GSLV–ಈ12 2,232kg ಉಪಗ್ರಹವನ್ನು ಜಿಯೋಸಿಂಕ್ರೊನಸ್ ಟ್ರಾನ್ಸ್‌ಫರ್ ಕಕ್ಷೆಗೆ ನಿಯೋಜಿಸುತ್ತದೆ, ಅದರ ನಂತರ ಅದನ್ನು ತನ್ನ ಉದ್ದೇಶಿತ ಕಕ್ಷೆಗೆ ಕೊಂಡೊಯ್ಯುವುದನ್ನು ಖಚಿತಪಡಿಸಿಕೊಳ್ಳಲು ಹೆಚ್ಚಿನ ತಂತ್ರಗಳನ್ನು ಬಳಸಿಕೊಳ್ಳಲಾಗುತ್ತದೆ.

ಕೋವಿಡ್ ಮಾರ್ಗಸೂಚಿ ಉಲ್ಲಂಘನೆ: 8 ಪ್ರಕರಣಗಳ ರದ್ದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ ಡಿ.ಕೆ.ಶಿವಕುಮಾರ್

ಬೆಂಗಳೂರು, ಮೇ 26– ಮೇಕೆದಾಟು ಪಾದಯಾತ್ರೆಯ ವೇಳೆ ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಮತ್ತು ಸರ್ಕಾರದ ಆದೇಶಗಳನ್ನು ಧಿಕ್ಕರಿಸಿದ್ದಕ್ಕಾಗಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ರದ್ದುಗೊಳಿಸುವಂತೆ ಕೋರಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ಈ ಸಂಬಂಧ ದಾಖಲಾಗಿರುವ ಎಂಟು ಪ್ರಕರಣಗಳಿಗೆ ಸಂಬಂಧಿಸಿದ ಪ್ರತ್ಯೇಕ ಅರ್ಜಿಗಳನ್ನು ಶುಕ್ರವಾರ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ವಿಚಾರಣೆಯನ್ನು ಒಂದು ವಾರಕ್ಕೆ ಮುಂದೂಡಿತು. ಪ್ರಕರಣಗಳ ಆಕ್ಷೇಪಣೆಗಳನ್ನು ಸರಿಪಡಿಸಲು ಕಾಲಾವಕಾಶ ನೀಡುವಂತೆ ಅರ್ಜಿದಾರ ಡಿಕೆ ಶಿವಕುಮಾರ್ ಅವರ ಪರ ವಕೀಲರು ನ್ಯಾಯಾಲಯದ ಮುಂದೆ ಮನವಿ ಮಾಡಿದರು ಮತ್ತು ಪೀಠವು ಸಮ್ಮತಿಸಿ ಸಮಯಕ್ಕೆ ಸರಿಯಾಗಿ ತಿದ್ದುಪಡಿಗಳನ್ನು ಮಾಡುವಂತೆ ವಕೀಲರಿಗೆ ತಿಳಿಸಿತು.

ಕೋವಿಡ್ ಸಾಂಕ್ರಾಮಿಕದ ವೇಳೆ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ 2022ರ ಜನವರಿ 9ರಿಂದ ಶಿವಕುಮಾರ್ ನೇತೃತ್ವದಲ್ಲಿ 10 ದಿನಗಳ ಪಾದಯಾತ್ರೆಯನ್ನು ಕಾಂಗ್ರೆಸ್ ಆರಂಭಿಸಿತ್ತು. ಈ ಬಗ್ಗೆ ರಾಮನಗರ ತಹಸೀಲ್ದಾರ್ ಹಾಗೂ ಇತರೆ ಸರ್ಕಾರಿ ಅಧಿಕಾರಿಗಳು ರಾಮನಗರ ಗ್ರಾಮಾಂತರ ಹಾಗೂ ಇತರೆ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಈ ವರ್ಷದ ಫೆಬ್ರವರಿ 9 ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಶಿವಕುಮಾರ್ ಹೈಕೋರ್ಟ್‌ನಲ್ಲಿರುವ ಪ್ರಕರಣಗಳನ್ನು ರದ್ದುಗೊಳಿಸುವಂತೆ ಕೋರಿದ್ದರು. ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆಯ 5(3)ಎ, 143, 290, 336 ಮತ್ತು 141ರ ನಿಬಂಧನೆಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಭಾರತದ ಪ್ರಜಾಪ್ರಭುತ್ವ ಸಂಪತ್ತು ಈ ಸಂಸತ್ ಭವನ

ಸ್ಪೀಕರ್ ಪೀಠದ ಬಳಿ ರಾಜದಂಡ!



ಭಾನುವಾರ ಉದ್ಘಾಟನೆಯಾಗಲಿರುವ ನೂತನ ಸಂಸತ್ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯ ಸ್ಪೀಕರ್ ಆಸನದ ಸಮೀಪದಲ್ಲಿ ಐತಿಹಾಸಿಕ ಚಿನ್ನದ ರಾಜದಂಡವನ್ನು (ಸೆಂಗೋಲ್) ಅಳವಡಿಸಲಿದ್ದಾರೆ. ಬ್ರಿಟಿಷರು ಅಧಿಕಾರ ಹಸ್ತಾಂತರದ ಸಂಕೇತವಾಗಿ ನೀಡಿದ್ದ ಸೆಂಗೋಲ್ ಅನ್ನು ಭಾರತದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಸ್ವೀಕರಿಸಿದ್ದರು. ಅವರು ಐತಿಹಾಸಿಕ ಭಾಷಣ ಮಾಡುವುದಕ್ಕೂ 15 ನಿಮಿಷಗಳ ಮುನ್ನ ಇದನ್ನು ಸ್ವೀಕರಿಸಿದ್ದರು. ಆದರೆ ಅದು ಅನೌಪಚಾರಿಕ ಕಾರ್ಯಕ್ರಮವಾಗಿದ್ದರಿಂದ ಅಧಿಕೃತ ದಾಖಲೆಗಳಲ್ಲಿ ಇದು ಸೇರ್ಪಡೆಯಾಗಿರಲಿಲ್ಲ. ಅಲಹಾಬಾದ್‌ನ ಮ್ಯೂಸಿಯಂನಲ್ಲಿ ಈ ಐತಿಹಾಸಿಕ ಸೆಂಗೋಲ್ ಅನ್ನು ಇರಿಸಲಾಗಿತ್ತು. ಈ ರಾಜದಂಡಕ್ಕೆ ಅದರದ್ದೇ ಆದ ವಿಶೇಷ ಇತಿಹಾಸವಿದೆ.

ಅಧಿಕಾರ ಹಸ್ತಾಂತರದ ಸಂಕೇತವಾಗಿ ಏನನ್ನು ನೀಡಬಹುದು ಎಂಬ ಬಗ್ಗೆ ವೈಸ್‌ರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರು ಜವಾಹರಲಾಲ್ ನೆಹರೂ ಅವರನ್ನು ಕೇಳಿದ್ದರು. ಆಗ ಸಿ.ರಾಜಗೋಪಾಲಾಚಾರಿ ಅವರನ್ನು ನೆಹರೂ ಸಂಪರ್ಕಿಸಿದ್ದರು. ದಾಖಲೆಗಳನ್ನು ಹುಡುಕಾಡಿದ ರಾಜಗೋಪಾಲಾಚಾರಿ, ಚೋಳರ ಅರಸ ಮನೆತನದಲ್ಲಿ ಒಬ್ಬ ರಾಜನಿಂದ ಮತ್ತೊಬ್ಬ ರಾಜನಿಗೆ ಅಧಿಕಾರ ವರ್ಗಾವಣೆ ಮಾಡುವ, ರಾಜ ಪುರೋಹಿತರ ಆಶೀರ್ವಾದ ಹೊಂದಿರುವ ಅತ್ಯಂತ ಪವಿತ್ರ ರಾಜದಂಡದ ಬಗ್ಗೆ ಸಂಶೋಧನೆಯಿಂದ ತಿಳಿದುಕೊಂಡರು. ಬಳಿಕ ರಾಜಾಜಿ ಅವರು ತಮಿಳುನಾಡಿನ ತಂಜಾವೂರು ಜಿಲ್ಲೆಯ ಬ್ರಾಹ್ಮಣೇತರ ಸನ್ಯಾಸಿಗಳ ಪ್ರಮುಖ ಮಠ ತಿರುವಾವಡುದುರೈ ಅಧೀನಂ ಅನ್ನು ಸಂಪರ್ಕ ಮಾಡಿದ್ದರು. ಚೋಳರ ಕಾಲದ ರಾಜದಂಡವನ್ನು ಹೋಲುವ ಸೆಂಗೋಲ್ ಬಗ್ಗೆ ಮಾಹಿತಿ ಪಡೆದರು. ತಮಿಳು ಸಾಮ್ರಾಟರು ಸಾಮಾನ್ಯವಾಗಿ ತಮ್ಮ ಕೈಯಲ್ಲಿ ರಾಜದಂಡ ಹಿಡಿದಿರುತ್ತಿದ್ದರು. ಹೊಸ ರಾಜನ ಕಿರೀಟಧಾರಣೆ ಬಳಿಕ ಅವರ ಪೂರ್ವಾಧಿಕಾರಿ ಅಥವಾ ರಾಜಗುರು ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಜದಂಡವನ್ನು ಹಸ್ತಾಂತರ ಮಾಡುತ್ತಿದ್ದರು. ಇದೇ ಮಾದರಿಯಲ್ಲಿ 1947ರಲ್ಲಿ ಚಿನ್ನದ ರಾಜದಂಡವನ್ನು ದಿಲ್ಲಿಗೆ ಕಳುಹಿಸಲಾಗಿತ್ತು. ಆಡಳಿತದ ಔಪಚಾರಿಕ ಹಸ್ತಾಂತರದ ಸಂಕೇತವಾಗಿ ಅದನ್ನು ಜವಾಹರಲಾಲ್ ನೆಹರೂ ಅವರಿಗೆ ಮೌಂಟ್ ಬ್ಯಾಟನ್ ನೀಡಿದ್ದರು. "ಸೆಂಗೋಲ್" ಎಂದು ಕರೆಯಲಾಗುವ ರಾಜದಂಡವು ತಮಿಳಿನ 'ಸೆಮ್ಮಾಯಿ' ಎಂಬ ಪದದಿಂದ ಬಂದಿದೆ. ಇದರ ಅರ್ಥ 'ಸದಾಚಾರ' ಎಂದು. ಸೆಂಗೋಲ್‌ನ ತುದಿಯಲ್ಲಿ ನಂದಿಯ ರಚನೆಯಿದೆ. ಇದು ನ್ಯಾಯದ ಸಂಕೇತ. ಮಠದ ಸೂಚನೆಯಂತೆ ಐದು ಅಡಿ ಎತ್ತರದ ಚಿನ್ನದ ರಾಜದಂಡವನ್ನು ಚೆನ್ನೈನಲ್ಲಿನ ವುಮ್ಮಿಡಿ ಬಂಗಾರು ಚೆಟ್ಟಿ ಜ್ಯುವೆಲರ್ಸ್ ಇದನ್ನು ತಯಾರಿಸಿತ್ತು ಎಂದು ಹೇಳಲಾಗಿದೆ. ಈ ಬಗ್ಗೆ ಕುಟುಂಬದ ಸದಸ್ಯರಾದ ವುಮ್ಮಿಡಿ ಎಥಿರಾಜುಲು (96) ಹಾಗೂ ವುಮ್ಮಿಡಿ ಸುಧಾಕರ್ (88) ಮಾಹಿತಿಯನ್ನು ಹಂಚಿಕೊಂಡಿದ್ದರು.

ನಾಳೆ ಉದ್ಘಾಟನೆಗೊಳ್ಳಲಿರುವ ಭವ್ಯ ಭವನದಲ್ಲಿ ಹತ್ತು ಹಲವು ವಿಶೇಷತೆ



ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿರುವ ಭಾರತದಲ್ಲಿ ಬೃಹತ್ ಸಂಸತ್ ಭವನದ ಲೋಕಾರ್ಪಣೆಗೆ ಮುಹೂರ್ತ ನಿಗದಿಯಾಗಿದೆ. ಇದೇ ಭಾನುವಾರ ಮೇ 28ಕ್ಕೆ ಸೆಂಟ್ರಲ್ ವಿಸ್ಟಾ ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ತ್ರಿಭುಜಾಕಾರದ ಸಂಸತ್ ಭವನವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶಕ್ಕೆ ಸಮರ್ಪಿಸಲಿದ್ದಾರೆ. 150 ವರ್ಷಗಳ ಜೀವಿತಾವಧಿ ಹೊಂದಿರುವ ಈ ಕಟ್ಟಡ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ, ದೇಶವನ್ನು ಮುನ್ನಡೆಸುವ ಕಟ್ಟಡ ಎಂದೇ ಬಿಂಬಿತವಾಗಿದೆ. ನೂತನ ಸಂಸತ್ ಭವನದಲ್ಲಿ ಹತ್ತು ಹಲವು ಅತ್ಯಾಧುನಿಕ ಸೌಲಭ್ಯಗಳಿವೆ. ಲೋಕಸಭೆ ಹಾಗೂ ರಾಜ್ಯಸಭೆ ಹಾಲ್‌ಗಳು ವೈಭವೋಪೇತವಾಗಿವೆ. ಭವಿಷ್ಯದಲ್ಲಿ ಸಂಸದರ ಸಂಖ್ಯೆ ದುಪ್ಪಟ್ಟಾದರೂ ಸಮಸ್ಯೆ ಇಲ್ಲ. ಎಲ್ಲರಿಗೂ ಕುಳಿತುಕೊಳ್ಳಲು ಅವಕಾಶವಿದೆ. ಇಷ್ಟೆಲ್ಲ ವಿಶೇಷಗಳಿದ್ದರೂ ವಿವಾದ ಕೂಡ ಅಷ್ಟೇ ಇದೆ. ಸಂವಿಧಾನದ ಆತ್ಮ ಎಂಬಂತಿರುವ ಈ ಭವನವನ್ನು ನರೇಂದ್ರ ಮೋದಿ ಉದ್ಘಾಟಿಸಬಾರದು, ರಾಷ್ಟ್ರಪತಿ ಉದ್ಘಾಟಿಸಬೇಕು ಎಂದು ಪ್ರತಿಪಕ್ಷಗಳು ಪಟ್ಟುಹಿಡಿದಿವೆ. ಮಾತ್ರವಲ್ಲ ಉದ್ಘಾಟನೆ ಸಮಾರಂಭವನ್ನೇ ಬಹಿಷ್ಕರಿಸುವ ಬೆದರಿಕೆ ಹಾಕಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ತುಂಬಿರೋ ಈ ಸಮಯದಲ್ಲಿ ಹೊಸ ಸಂಸತ್ ಭವನ ಕಟ್ಟಡ ನಿರ್ಮಾಣವಾಗಿದೆ. ರಾಜಕೀಯ ಅಪಸವ್ಯಗಳ ನಡುವೆಯೇ ಉದ್ಘಾಟನೆಯಾಗುತ್ತಿರುವ ನೂತನ ಸಂಸತ್ ಭವನದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ ಬನ್ನಿ.

ನೂತನ ಭವನದ ನಿರ್ಮಾಣ ಮಾಡಿದ್ದೇಕೆ?

ಈಗಿರುವ ಸಂಸತ್ ಭವನದ ಆಯಸ್ಸು ಬರೋಬ್ಬರಿ 96 ವರ್ಷ ಆಗಿದೆ. 1927ರಲ್ಲಿ ನಿರ್ಮಾಣ ಮಾಡಲಾಗಿದ್ದ ಈ ಕಟ್ಟಡ ಚಿಕ್ಕದಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಅಷ್ಟೂ ಜನ ಸಂಸದರನ್ನು ಕೂಡಿಸೋಕೆ ಕಷ್ಟವಾಗಿತ್ತು. ಅಧಿಕಾರಿಗಳು, ಸಿಬ್ಬಂದಿ ವರ್ಗಕ್ಕೆ ಕೂಡ ಜಾಗ ಇರಲಿಲ್ಲ. 2026ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಆಗುವ ಸಾಧ್ಯತೆ ಇದೆ. ಆಗ ಸಂಸದರ ಸಂಖ್ಯೆ 800ರ ಗಡಿ ದಾಟಲಿದೆ. 2010ರಿಂದಲೇ ನೂತನ ಕಟ್ಟಡ ರಚನೆಗೆ ಆಗ್ರಹಗಳು ಕೇಳಿಬಂದಿತ್ತು. 2012ರಲ್ಲಿ ಅಂದಿನ ಸ್ಪೀಕರ್ ಮೀರಾ ಕುಮಾರ್ ಇದಕ್ಕಾಗಿ ಸಮಿತಿ ರಚಿಸಿದ್ದರು. ಸಮಿತಿ ಕೂಡ ನೂತನ ಭವನ ನಿರ್ಮಾಣಕ್ಕೆ ಶಿಫಾರಸು ಮಾಡಿತ್ತು. ಆದರೆ ಇದು ಕಾಗದದ ಮೇಲೆಯೇ ಉಳಿಯಿತು. ಯೋಜನೆಗೆ ಹಸಿರು ನಿಶಾನೆ ಸಿಗಲಿಲ್ಲ. ಪ್ರಧಾನಿ ಮೋದಿ ಸರ್ಕಾರ, 2019ರಲ್ಲಿ ಈ ಯೋಜನೆ ಕೈಗೆತ್ತಿಕೊಂಡಿತ್ತು. ಕೋರ್ಟ್‌ನಲ್ಲಿ ಕೇಸ್‌ಗಳೆಲ್ಲವೂ ಬಗೆಹರಿದ ಬಳಿಕ 2020 ಡಿ.10 ರಂದು ಪ್ರಧಾನಿ ಮೋದಿ ಅವರು ನೂತನ ಸಂಸತ್ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಈಗ 2023ರಲ್ಲಿ ಉದ್ಘಾಟನೆಗೆ ಸಿದ್ಧವಾಗಿದೆ ಸಂಸತ್ ಭವನ. 2020ರಲ್ಲಿ ಟಾಟಾ ಪ್ರಾಜೆಕ್ಟ್ಸ್‌ಗೆ ನೂತನ ಸಂಸತ್ ಭವನ ನಿರ್ಮಾಣದ ಹೊಣೆ ವಹಿಸಲಾಗಿತ್ತು. ಆ ಸಂದರ್ಭದಲ್ಲಿ 971 ಕೋಟಿ ವೆಚ್ಚಕ್ಕೆ ಅನುಮೋದನೆ ದೊರಕಿತ್ತು. ನಂತರ ಅದರ ಕಚ್ಚಾ ಸಾಮಾಗ್ರಿ ದರ ಹೆಚ್ಚಳದಿಂದಾಗಿ ಯೋಜನಾ ವೆಚ್ಚ ಅಂದಾಜು 1,200 ಕೋಟಿಗೆ ಏರಿಸಲಾಗಿತ್ತು.

ಭವನಕ್ಕೆ ಹೊಸ ಹೆಸರು ಸಾಧ್ಯತೆ: ಸಂಸತ್ ಭವನ ಕಟ್ಟಡಕ್ಕೆ ಬೇರೆಯದೇ ಆದ ವಿಶಿಷ್ಟ ಹೆಸರನ್ನು ಇಡುವ ಸಾಧ್ಯತೆಗಳಿವೆ. ಈಗಾಗಲೇ ರಾಜಪಥವನ್ನು 'ಕರ್ತವ್ಯ ಪಥ' ಎಂದು ಹೆಸರು ಬದಲಾವಣೆ ಮಾಡಲಾಗಿದೆ. ಇದೇ ರೀತಿ 'ವಸಾಹತುಶಾಹಿ ಮನಸ್ಥಿತಿ'ಯನ್ನು ತೊಡೆದು ಹಾಕುವ ಹೆಸರನ್ನು ನೂತನ ಸಂಸತ್ ಭವನ ಕಟ್ಟಡಕ್ಕೆ ಇಡುವ ಸಾಧ್ಯತೆಗಳಿವೆ.



ಹಳೆಯ ಸಂಸತ್ ಭವನ ಯಾವಾಗ ನಿರ್ಮಾಣವಾಯಿತು?

ಒಂದು ಕಡೆ ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಶುರುವಾಗಿತ್ತು. ಇನ್ನೊಂದು ಕಡೆ ಬ್ರಿಟಿಷ್ ಸರ್ಕಾರ ದೆಹಲಿಯಲ್ಲಿ ಸಂಸತ್ ಭವನವನ್ನು ನಿರ್ಮಿಸಲು ಮುಂದಾಯಿತು. ಬ್ರಿಟಿಷರು ದೆಹಲಿಯನ್ನು ರಾಜಧಾನಿ ಮಾಡುವ ಉದ್ದೇಶದಿಂದ ಆಡಳಿತ ರಚನೆಯ ಕಾರ್ಯಾಚರಣೆಗಾಗಿ ಇದನ್ನು ನಿರ್ಮಿಸಲು ಪ್ರಾರಂಭಿಸಿದರು. ಡ್ಯೂಕ್ ಆಫ್ ಕನಾಟ್ 1921ರ ಫೆಬ್ರವರಿ 12 ರಂದು ಈ ಕಟ್ಟಡದ ಅಡಿಪಾಯವನ್ನು ಹಾಕಿದರು. ಇದು ದೆಹಲಿಯ ಹೃದಯಭಾಗದಲ್ಲಿ ಇಂಡಿಯಾ ಗೇಟ್ ಮತ್ತು ರಾಷ್ಟ್ರಪತಿ ಭವನದಿಂದ ಸುಮಾರು 750 ಮೀಟರ್ ದೂರದಲ್ಲಿದೆ. ಸಂಪೂರ್ಣ ಕಟ್ಟಡವನ್ನು ನಿರ್ಮಿಸಲು ಸುಮಾರು 6 ವರ್ಷಗಳನ್ನು ತೆಗೆದುಕೊಂಡಿತು ಮತ್ತು ಅದರ ನಿರ್ಮಾಣದ ವೆಚ್ಚ 83 ಲಕ್ಷ ರೂ. ಇದನ್ನು ಪ್ರಸಿದ್ಧ ಬ್ರಿಟಿಷ್ ವಾಸ್ತುಶಿಲ್ಪಿಗಳಾದ ಎಡ್ವಿನ್ ಕೆ ಲುಟ್ಯೆನ್ಸ್ ಮತ್ತು ಹರ್ಬರ್ಟ್ ಬೇಕರ್ ವಿನ್ಯಾಸಗೊಳಿಸಿದ್ದಾರೆ. ವೃತ್ತಾಕಾರದ ಕಟ್ಟಡವು ಮಧ್ಯಪ್ರದೇಶದ ಮೊರೆನಾದಲ್ಲಿರುವ ಚೌಸತ್ ಯೋಗಿನಿ ದೇವಾಲಯದಿಂದ ಪ್ರೇರಿತವಾಗಿದೆ ಎಂದು ಹೇಳಲಾಗಿದೆ.

ಯಾವಾಗ, ಯಾರಿಂದ ಉದ್ಘಾಟನೆಯಾಯಿತು?: ಈ ಕಟ್ಟಡವು ವಿಶ್ವದ ಅತ್ಯುತ್ತಮ ವಾಸ್ತುಶಿಲ್ಪದ ಮಾದರಿಯಾಗಿದೆ. 12 ಬಾಗಿಲುಗಳನ್ನು ಹೊಂದಿದೆ. ಹೌಸ್ ಆಫ್ ಪಾರ್ಲಿಮೆಂಟ್ ಅಂದರೆ ಪಾರ್ಲಿಮೆಂಟ್ ಹೌಸ್ ಅನ್ನು 18 ಜನವರಿ 1927 ರಂದು ಲಾರ್ಡ್ ಇರ್ವಿನ್ ಉದ್ಘಾಟಿಸಿದರು.

ಹಳೆ ಸಂಸತ್ ಭವನ ವಿವರ

■ 1921, ಫೆಬ್ರವರಿ 12ರಂದು ನಿರ್ಮಾಣ ಕಾಮಗಾರಿ ಆರಂಭ ಆರು ವರ್ಷ ನಡೆದ ಕಾಮಗಾರಿ ■ ಒಟ್ಟು ವೆಚ್ಚ: 83 ಲಕ್ಷ ರೂಪಾಯಿ ಒಟ್ಟು ವಿಸ್ತೀರ್ಣ: 5.66 ಎಕರೆ ■ ವೃತ್ತಾಕಾರದ ಕಟ್ಟಡ 21 ಮೀಟರ್ ಎತ್ತರ (70 ಅಡಿ), 170 ಮೀಟರ್ (560 ಅಡಿ) ವ್ಯಾಸ (ಡಯಾಮೀಟರ್) 144 ಸಾಲುಗಂಬ, ಎತ್ತರ 27 ಅಡಿ ■ ಪ್ರೇರಕರು: ಅಡ್ಮಿರಲ್ ಲ್ಯಾಟಿಯನ್ಸ್ (ವೃತ್ತಾಕಾರದಲ್ಲಿ ಮಾಡಲು ಪಟ್ಟು ಹಿಡಿದರು) ವಾಸ್ತು ಶಿಲ್ಪಿ ಹರ್ಬರ್ಟ್ ಬೇಕರ್ (ತ್ರಿಭುಜಾಕಾರ ವಿನ್ಯಾಸ ಮಾಡುವ ಯೋಜನೆ ಹಾಕಿಕೊಂಡಿದ್ದರು) ಸ್ಪೀಕರ್ ಕುರ್ಚಿ ಮೇಲೆ ಸಂಸ್ಕೃತದಲ್ಲಿ "ಧರ್ಮ ಚಕ್ರ ಪ್ರವರ್ಥನಾಯ" ಎಂದು ಬರೆಯಲಾಗಿದೆ.

ಹೊಸ ಸಂಸತ್ ಭವನ ಜಾತಕ

2020 ಡಿಸೆಂಬರ್‌ನಲ್ಲಿ ಹೊಸ ಸಂಸತ್ ಭವನ ನಿರ್ಮಾಣಕ್ಕೆ ಪ್ರಧಾನಿ ಮೋದಿ ಶಂಕುಸ್ಥಾಪನೆ. ■ 2021 ಜನವರಿಯಲ್ಲಿ ನಿರ್ಮಾಣ ಕಾರ್ಯ ಆರಂಭ ■ ಒಟ್ಟು ವೆಚ್ಚ: 970 ಕೋಟಿ ರೂ. (1200 ಕೋಟಿ ರೂ.ವರೆಗೂ ಹೆಚ್ಚಳವಾಗುವ ನಿರೀಕ್ಷೆ) ■ 64,500 ಚದರ ಮೀಟರ್ ವಿಸ್ತೀರ್ಣ, ನಾಲ್ಕು ಅಂತಸ್ತಿನ ಕಟ್ಟಡ ■ 1224 ಸಂಸದರು ಆಸೀನರಾಗುವ ವ್ಯವಸ್ಥೆ 1100 ಕಾರು ಪಾರ್ಕಿಂಗ್‌ಗೆ ಸ್ಥಳಾವಕಾಶ

ಎಲ್ಲಾ ಓಕೆ. ವಿರೋಧ ಏಕೆ?

ಸಂವಿಧಾನ ಮತ್ತು ಸಂಸತ್ತು ನಮ್ಮ ಪ್ರಜಾಪ್ರಭುತ್ವದ ಆತ್ಮ. ಈ ಸಂಸತ್ತನ್ನು ಅಹಂಕಾರದ ಇಟ್ಟಿಗೆಯಿಂದ ಅಲ್ಲ, ಮೌಲ್ಯಗಳಿಂದ ಕಟ್ಟಲಾಗಿದೆ ಎನ್ನುತ್ತಾರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ. ನಮ್ಮ ದೇಶದಲ್ಲಿ ರಾಷ್ಟ್ರಪತಿ ಹುದ್ದೆ ಎಂಬುದು ಪ್ರಜಾಪ್ರಭುತ್ವದ ಅತೀ ದೊಡ್ಡ ಹುದ್ದೆ. ಇವರೇ ಸಂಸತ್‌ನ ಅವಿಭಾಜ್ಯ ಅಂಗ. ಹೀಗಿರುವಾಗ ನೂತನ ಸಂಸತ್ ಭವನವನ್ನು ರಾಷ್ಟ್ರಪತಿಗಳು ಏಕೆ ಉದ್ಘಾಟನೆ ಮಾಡಬಾರದು ಎಂಬುದು ವಿರೋಧ ಪಕ್ಷಗಳ ಪ್ರಶ್ನೆ. ರಾಷ್ಟ್ರಪತಿಗಳು ಉದ್ಘಾಟನೆ ಮಾಡುವುದಿರಲಿ, ಅವರನ್ನ ಈ ಕಾರ್ಯಕ್ರಮಕ್ಕೇ ಆಹ್ವಾನ ನೀಡಿಲ್ಲ ಏಕೆ ಎಂದು ಪ್ರಶ್ನೆ ಮಾಡುತ್ತಿವೆ ವಿಪಕ್ಷಗಳು. ಎಲ್ಲಕ್ಕಿಂತ ಹೆಚ್ಚಾಗಿ ಪ್ರಧಾನಿ ಮೋದಿ ಅವರು ಸಂಸತ್ ಭವನದ ಉದ್ಘಾಟನೆ ಮಾಡುತ್ತಿರುವುದಕ್ಕೆ ವಿರೋಧ ಪಕ್ಷಗಳು ತಕರಾರು ತೆಗೆದಿವೆ. ಈ ಕಾರ್ಯಕ್ರಮಕ್ಕೆ ನಾವು ಬಹಿಷ್ಕಾರ ಹಾಕುವುದಾಗಿ ಕಾಂಗ್ರೆಸ್ ಸೇರಿದಂತೆ ಒಟ್ಟು 19 ವಿರೋಧ ಪಕ್ಷಗಳು ನಿರ್ಧಾರ ಮಾಡಿವೆ. ಕೇಂದ್ರ ಸರ್ಕಾರ, ಮನವೊಲಿಕೆ ಮಾಡೋಕೆ ಪ್ರಯತ್ನ ಮಾಡುತ್ತಿದೆ.

ಲೋಕಸಭೆ, ರಾಜ್ಯಸಭೆ ಡಿಸೈನ್ ಸೂಪರ್!





ಹಳೆಯ ಸಂಸತ್ ಭವನ ವೃತ್ತಾಕಾರದಲ್ಲಿದೆ. ಇದೀಗ ಹೊಸದಾಗಿ ನಿರ್ಮಿಸಿರುವ ಸಂಸತ್ ಭವನ ತ್ರಿಭುಜಾಕಾರದಲ್ಲಿ ಇದೆ. ಹಳೆಯ ಸಂಸತ್ ಭವನದ ಸಮೀಪದಲ್ಲಿಯೇ ಹೊಸ ಸಂಸತ್ ಭವನವನ್ನು ನಿರ್ಮಾಣ ಮಾಡಲಾಗಿದೆ. ಈ ಹೊಸ ಕಟ್ಟಡದ ಜೀವಿತಾವಧಿ 150 ವರ್ಷಗಳು ಎಂದು ತಜ್ಞರು ಅಂದಾಜಿಸಿದ್ದಾರೆ. ಭೂಕಂಪಕ್ಕೂ ಆ ಭವನ ಬಗ್ಗಲ್ಲ. ಈ ರೀತಿ ಕಟ್ಟಡ ವಿನ್ಯಾಸ ಮಾಡಲಾಗಿದೆ. ಲೋಕಸಭೆಯಲ್ಲಿ 888 ಸದಸ್ಯರು ಕುಳಿತುಕೊಳ್ಳಬಹುದು ರಾಜ್ಯಸಭೆಯಲ್ಲಿ 384 ಸದಸ್ಯರಿಗೆ ಅವಕಾಶವಿದೆ. ಅಂದರೆ ಭವಿಷ್ಯದಲ್ಲಿ ಸಂಸದರ ಸಂಖ್ಯೆ ಹೆಚ್ಚಾದರೂ ಕೂಡಾ ಇಲ್ಲಿ ಸ್ಥಳಾವಕಾಶದ ಕೊರತೆ ಎದುರಾಗುವುದಿಲ್ಲ. ಹೊಸ ಭವನದಲ್ಲಿ ಸೆಂಟ್ರಲ್ ಹಾಲ್ ಇರುವುದಿಲ್ಲ. ಒಂದು ವೇಳೆ ಜಂಟಿ ಅಧಿವೇಶನ ನಡೆಸಬೇಕು ಅಂದ್ರೆ ಲೋಕಸಭೆಯಲ್ಲೇ 1,250ಕ್ಕೂ ಹೆಚ್ಚು ಸದಸ್ಯರು ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಒಟ್ಟು 4 ಅಂತಸ್ತಿನ ಈ ಕಟ್ಟಡದಲ್ಲಿ ಸಚಿವರು, ಹಲವು ಸಮಿತಿಗಳಿಗೂ ಪ್ರತ್ಯೇಕ ಕೋಣೆಗಳ ವ್ಯವಸ್ಥೆ ಮಾಡಲಾಗಿದೆ. ಸಂವಿಧಾನ ಭವನ ಕೊಠಡಿಯೂ ಇದೆ. ಇಲ್ಲಿ ಸಂವಿಧಾನದ ಪ್ರತಿ ಇರಿಸುವ ಸಾಧ್ಯತೆಯಿದೆ. ಮಹಾತ್ಮ ಗಾಂಧಿ, ಜವಾಹರ ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಅಲ್ಲದೆ ಮಾಜಿ ಪ್ರಧಾನಿಗಳ ಬೃಹತ್ ಚಿತ್ರಗಳನ್ನೂ ಅಳವಡಿಸಲಾಗಿದೆ.

ಲೋಕಸಭೆ ರಾಜ್ಯಸಭೆ ಡಿಸೈನ್ ಸೂಪರ್!: ನವಿಲು ನಮ್ಮ ದೇಶದ ರಾಷ್ಟ್ರೀಯ ಪಕ್ಷಿ. ಲೋಕಸಭೆ ಹಾಲ್ ಅನ್ನು ನವಿಲಿನ ವಿನ್ಯಾಸದಲ್ಲಿ ರೂಪಿಸಲಾಗಿದೆ. ಗಾಳಿ, ಬೆಳಕಿಗೆ ಕೊರತೆ ಇರದಂತೆ ಎಚ್ಚರ ವಹಿಸಲಾಗಿದೆ. ಇನ್ನು ರಾಜ್ಯಸಭೆಯ ವಿನ್ಯಾಸ ಇರುವುದು ಕಮಲದ ಆಕಾರದಲ್ಲಿ. ಕಮಲದ ಹೂವಿಗೆ ನಮ್ಮ ಪುರಾಣಗಳಲ್ಲಿ ವಿಶೇಷ ಪ್ರಾಧಾನ್ಯತೆ ಇದೆ. ಅದು ನಮ್ಮ ರಾಷ್ಟ್ರೀಯ ಪುಷ್ಪ. ಕಮಲ ಬಿಜೆಪಿಯ ಚಿಹ್ನೆ ಕೂಡ. ಇದು ಕೂಡ ಚರ್ಚೆಗೆ ಗ್ರಾಸವಾಗಿದೆ. ಈ ಹೂವಿನ ವಿನ್ಯಾಸದಲ್ಲಿ ಇರೋ ರಾಜ್ಯಸಭೆ ಅತ್ಯದ್ಭುತವಾಗಿ ಕಂಗೊಳಿಸುತ್ತಿದೆ. ಕಚೇರಿಗಳಂತೂ ವಿಶಾಲವಾಗಿ ಹಾಗೂ ಅತ್ಯಾಧುನಿಕ ವಿನ್ಯಾಸದಿಂದ ಕೂಡಿವೆ. ಮೀಟಿಂಗ್ ನಡೆಯುವ ರೂಂಗಳಲ್ಲಿ ಆಡಿಯೋ ಹಾಗೂ ವಿಡಿಯೋ ವ್ಯವಸ್ಥೆ ಇದೆ. ಅತಿ ದೊಡ್ಡ ಲೈಬ್ರರಿ ಕೂಡಾ ನೂತನ ಸಂಸತ್ ಭವನದಲ್ಲಿ ಇದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಬಳಕೆಯನ್ನು ನೂತನ ಕಟ್ಟಡ ಹಲವು ವಿಭಾಗಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಯಾವುದೇ ರಾಜ್ಯದ ಸಂಸದ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಿದರೂ, ಅನುವಾದ ವ್ಯವಸ್ಥೆ ಇದೆ.

ಮೂರು ದ್ವಾರ: ಸಂಸದರು ಪ್ರವೇಶಿಸುವ ದ್ವಾರಕ್ಕೆ "ಜ್ಞಾನ ದ್ವಾರ" ಗಣ್ಯರು ಪ್ರವೇಶಿಸುವ ದ್ವಾರಕ್ಕೆ "ಶಕ್ತಿ ದ್ವಾರ" ಹಾಗೂ ಅಧಿಕಾರಿ ವರ್ಗ ಪ್ರವೇಶಿಸುವ ದ್ವಾರಕ್ಕೆ "ಕರ್ಮದ್ವಾರ" ಎಂದು ಹೆಸರಿಡಲಾಗಿದೆ.

ಡಿಸೈನ್ ಮಾಡಿದ್ದು ಇವರೇ, ಕಟ್ಟಿದ್ದು ಟಾಟಾದವರು: ನೂತನ ಭವನದ ವಿನ್ಯಾಸವನ್ನು ಗುಜರಾತಿನ ಅಹಮದಾಬಾದ್‌ನ ಎಚ್‌ಸಿಪಿ ಡಿಸೈನ್ ಪ್ಲ್ಯಾನಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ಸಿದ್ಧಪಡಿಸಿದೆ. ಇದರ ವಾಸ್ತುಶಿಲ್ಪಿ ಬಿಮಲ್ ಪಟೇಲ್. ಕಟ್ಟಡ ನಿರ್ಮಾಣ ಪ್ರಾಜೆಕ್ಟ್ ದೊರೆತಿರುವುದು ಟಾಟಾ ಪ್ರಾಜೆಕ್ಟ್ ಸಂಸ್ಥೆಗೆ.



ಭವನದ ಮೇಲೆ ರಾಷ್ಟ್ರೀಯ ಲಾಂಛನ

ಪ್ರಧಾನಮಂತ್ರಿ ನರೇಂದ್ರ ಮೋದಿ ಕಳೆದ ಜುಲೈ 11ರಂದು ನೂತನ ಸಂಸತ್ ಭವನದ ಮೇಲೆ ರಾಷ್ಟ್ರೀಯ ಲಾಂಛನ ಅನಾವರಣಗೊಳಿಸಿದರು. ಕಂಚಿನಿಂದ ತಯಾರಿಸಿರುವ ರಾಷ್ಟ್ರೀಯ ಲಾಂಛನವು ಒಟ್ಟು 9,500 ಕೆಜಿ ತೂಕ ಮತ್ತು 6.5 ಮೀಟರ್ ಎತ್ತರವಿದೆ. ಹೊಸ ಸಂಸತ್ ಭವನ ಕಟ್ಟಡದ ಕೇಂದ್ರದಲ್ಲಿ ನಿರ್ಮಾಣವಾಗಿರುವ ವಿರಾಮ ಕೊಠಡಿ (ಪ್ರೇಕ್ಷಕರ ಗ್ಯಾಲರಿ)ಯ ಮೇಲ್ಭಾಗದಲ್ಲಿ ರಾಷ್ಟ್ರೀಯ ಲಾಂಛನವನ್ನು ಸ್ಥಾಪಿಸಲಾಗಿದೆ. ಕಟ್ಟಡದ ಮೇಲೆ ಲಾಂಛನವನ್ನು ಸದೃಢವಾಗಿ ನಿಲ್ಲಿಸಲು ಸುಮಾರು 6,500 ಕೆ.ಜಿ ತೂಕದ ಉಕ್ಕಿನ ಪೋಷಕ ಸಂರಚನೆ ಬಳಸಲಾಗಿದೆ.

ನೂತನ ಸಂಸತ್ ಭವನ ಉದ್ಘಾಟನೆ ಸ್ಮರಣಾರ್ಥ 75 ರೂ. ಮುಖಬೆಲೆಯ ನಾಣ್ಯ ಬಿಡುಗಡೆ



ಮೇ 28ರಂದು ಹೊಸ ಸಂಸತ್ ಭವನದ ಉದ್ಘಾಟನೆಯ ಸ್ಮರಣಾರ್ಥವಾಗಿ ಹಣಕಾಸು ಸಚಿವಾಲಯವು ವಿಶೇಷವಾಗಿ 75 ರೂಪಾಯಿ ಮುಖಬೆಲೆಯ ನಾಣ್ಯವನ್ನು ಬಿಡುಗಡೆ ಮಾಡಲಿದೆ. ಈ ನಾಣ್ಯವು ದೇಶ 75 ವರ್ಷಗಳ ಸ್ವಾತಂತ್ರ್ಯೋತ್ಸವ ಆಚರಿಸುತ್ತಿರುವುದಕ್ಕೆ ಗೌರವ ಸೂಚಕವಾಗಿದೆ.

ವಿಶೇಷತೆ: ನಾಣ್ಯದ ಒಂದು ಬದಿಯು ಅಶೋಕ ಸ್ತಂಭದ ಸಿಂಹದ ರಾಜಧಾನಿಯನ್ನು ಹೊಂದಿರುತ್ತದೆ. ಅದರ ಕೆಳಗೆ "ಸತ್ಯಮೇವ ಜಯತೆ" ಎಂದು ಬರೆಯಲಾಗಿದೆ. ಎಡಭಾಗದಲ್ಲಿ "ಭಾರತ್" ಎಂಬ ಪದವನ್ನು ದೇವನಾಗರಿ ಲಿಪಿಯಲ್ಲಿ ಮತ್ತು ಬಲಭಾಗದಲ್ಲಿ "ಇಂಡಿಯಾ" ಎಂಬ ಪದವನ್ನು ಇಂಗ್ಲಿಷ್‌ನಲ್ಲಿ ಬರೆಯಲಾಗುತ್ತದೆ. ಹಣಕಾಸು ಸಚಿವಾಲಯ ಹೊರಡಿಸಿದ ಅಧಿಸೂಚನೆಯ ಪ್ರಕಾರ, 35 ಗ್ರಾಂ ನಾಣ್ಯವು 44 ಎಂಎಂ ಅಳತೆಯ ವೃತ್ತಾಕಾರದಲ್ಲಿರುತ್ತದೆ. ಇದು ರೂಪಾಯಿಯ ಚಿಹ್ನೆ ಮತ್ತು ಅಂತಾರಾಷ್ಟ್ರೀಯ ಅಂಕಿಗಳಲ್ಲಿ ಬರೆಯಲಾದ 75 ಅನ್ನು ಸಹ ಒಳಗೊಂಡಿರುತ್ತದೆ. ನಾಣ್ಯದ ಹಿಂಭಾಗದಲ್ಲಿ ಸಂಸತ್ತಿನ ಸಂಕೀರ್ಣದ ಚಿತ್ರವಿರುತ್ತದೆ. ನಾಣ್ಯದ ಮೇಲಿನ ಪರಿಧಿಯಲ್ಲಿ ಸಂಸದ್ ಸಂಕುಲ್ ಎಂದು ಬರೆಯಲಾಗಿದ್ದರೆ ಕೆಳಗಿನ ಪರಿಧಿಯಲ್ಲಿ ಸಂಸತ್ತಿನ ಸಂಕೀರ್ಣ ಎಂದು ಬರೆಯಲಾಗುತ್ತದೆ. ಸಂಸದ್ ಸಂಕುಲದ ಕೆಳಗೆ, '2023' ವರ್ಷವನ್ನು ಅಂತಾರಾಷ್ಟ್ರೀಯ ಅಂಕಿಗಳಲ್ಲಿ ಕೆತ್ತಲಾಗಿರುತ್ತದೆ.



ಮಡಿಕೇರಿಯಲ್ಲಿ ಸ್ವಾದಿಷ್ಟ ಮಾವು, ಹಲಸಿನ ಮೇಳಕ್ಕೆ ಚಾಲನೆ

ಬೆಳೆಗಾರರು–ಗ್ರಾಹಕರಿಗೆ ನೇರ ಸಂಪರ್ಕ ಕಲ್ಪಿಸುವ ಮೇಳ ಅಪರೂಪದ್ದು: ಎ.ಎಸ್. ಪೊನ್ನಣ್ಣ

ಮಡಿಕೇರಿ, ಮೇ 26– ನಾಡಿನ ವಿವಿಧೆಡೆಗಳಲ್ಲಿ ಬೆಳೆಯುವ ಅಪರೂಪದ ಮತ್ತು ಸ್ವಾದಿಷ್ಟವಾದ ಮಾವು, ಹಲಸಿನ ಮೇಳಕ್ಕೆ ನಗರದ ಹಾಪ್ ಕಾಮ್ಸ್‌ನಲ್ಲಿ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಚಾಲನೆ ನೀಡಿದರು.

ಜಿಲ್ಲಾಡಳಿತ, ತೋಟಗಾರಿಕಾ ಇಲಾಖೆ, ಜಿಲ್ಲಾ ಪಂಚಾಯತ್ ಮತ್ತು ಹಾಪ್ ಕಾಮ್ಸ್ ವತಿಯಿಂದ ಏರ್ಪಡಿಸಲಾಗಿರುವ ದ್ವಿತೀಯ ವರ್ಷದ ಮೇಳ ಉದ್ಘಾಟಿಸಿದ ಶಾಸಕರು, ಮಧ್ಯವರ್ತಿಗಳನ್ನು ಹೊರಗಿಟ್ಟು ಬೆಳೆಗಾರರು ಮತ್ತು ಗ್ರಾಹಕರಿಗೆ ನೇರ ಸಂಪರ್ಕ ಕಲ್ಪಿಸುವ ಮೇಳ ನಿಜಕ್ಕೂ ಅಪರೂಪದ್ದೆಂದು ಮೆಚ್ಚುಗೆ ವ್ಯಕಪಡಿಸಿದರು.

ಬೆಳೆಗಾರರಿಗೆ ಮೇಳ ಸಹಕಾರಿ: ಬೆಳೆಗಾರ ತಾನು ಬೆಳೆಯುವ ಹಣ್ಣು, ಹಂಪಲನ್ನು ಮಧ್ಯವರ್ತಿಗಳ ಮೂಲಕ ಮಾರಾಟ ಮಾಡಬೇಕಾದ ಪರಿಸ್ಥಿತಿ ಇದೆ. ಇದನ್ನು ತಪ್ಪಿಸಿ, ಬೆಳೆಗಾರನ ಉತ್ಪನ್ನಕ್ಕೆ ಯೋಗ್ಯ ಮಾರುಕಟ್ಟೆಯೊಂದಿಗೆ ಉತ್ತಮ ಧಾರಣೆ ಒದಗಿಸುವಲ್ಲಿ ಇಂತಹ ಮೇಳ ಸಹಕಾರಿಯಾಗಿದೆ. ಇಂತಹ ಮೇಳಗಳ ಮೂಲಕ ವಿವಿಧ ತಳಿಯ ಮಾವಿನ ಹಣ್ಣುಗಳನ್ನು ಸವಿಯುವ ಅವಕಾಶವೂ ಸಾರ್ವಜನಿಕರಿಗೆ ದೊರಕಲಿದೆ. ಜಿಲ್ಲೆಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಇವರುಗಳು ಮೇಳದ ಪ್ರಯೋಜನವನ್ನು ಪಡೆದುಕೊಳ್ಳಬಹುದೆಂದು ಅನಿಸಿಕೆ ವ್ಯಕ್ತಪಡಿಸಿದರು.



ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಮಾವು ಮತ್ತು ಹಲಸಿನ ಮೇಳದಲ್ಲಿ ನೈಸರ್ಗಿಕವಾಗಿ ಮತ್ತು ವೈಜ್ಞಾನಿಕವಾಗಿ ಮಾಗಿಸಿದ ಹಣ್ಣುಗಳು ಲಭ್ಯವಿದೆ. ಇದು ಆರೋಗ್ಯಕ್ಕೂ ಪೂರಕವಾಗಿದೆ. ಮೇಳದಲ್ಲಿ ವಿವಿಧೆಡೆಗಳಿಂದ ಆಗಮಿಸಿರುವ ಬೆಳೆಗಾರರ 25 ಮಳಿಗೆಗಳನ್ನು ತೆರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭ ಎಂಎಲ್‌ಸಿ ಸುಜಾ ಕುಶಾಲಪ್ಪ, ಮಡಿಕೇರಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಹಾಪ್ ಕಾಮ್ಸ್ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ, ತೋಟಗಾರಿಕಾ ಇಲಾಖಾ ಉಪ ನಿರ್ದೇಶಕ ಹೆಚ್.ಆರ್.ನಾಯಕ್ ಸೇರಿದಂತೆ ಹಲ ಪ್ರಮುಖರು ಪಾಲ್ಗೊಂಡಿದ್ದರು.

ಹಲಸಿನ ಹಣ್ಣಿನ ಸ್ವಾದ: ಈ ಬಾರಿ ವಿಶೇಷ ವಾಗಿ ಹಲಸಿನ ಹಣ್ಣನ್ನು ಮೇಳದಲ್ಲಿ ಸೇರ್ಪಡೆ ಮಾಡಲಾಗಿದೆ. ಮಾಗಡಿಯ ಸಿದ್ದರಾಜು ಅವರ ಮಳಿಗೆಯಲ್ಲಿ ಸ್ವಾದಿಷ್ಟ ಹಲಸು ಪ್ರತಿ ಕೆ.ಜಿ.ಗೆ 25 ರೂ.ಗಳಂತೆ ಲಭ್ಯವಿದ್ದು, ಚಂದ್ರ ಬೊಕ್ಕೆ ಸೇರಿದಂತೆ ಒಂದೆರಡು ತಳಿಯ ಹಲಸುಗಳನ್ನು ಮಾರಾಟಕ್ಕಿಡಲಾಗಿದೆ

ಬಂಟ್ವಾಳದ ಪಿಂಗಾರ ತೋಟಗಾರಿಕಾ ರೈತ ಉತ್ಪಾದಕರ ಕಂಪನಿಯ ಮಳಿಗೆಯಲ್ಲಿ ಹಲಸು ಮತ್ತು ಅಡಿಕೆಯ ವಿವಿಧ ಉತ್ಪನ್ನಗಳನ್ನು ಮಾರಾಟಕ್ಕಿಡಲಾಗಿದೆ. ಯಾವುದೇ ಕೃಷಿ ಉತ್ಪಾದನೆಗಳಿಂದ ತಯಾರಿಸಿದ ವಿವಿಧ ಉತ್ಪನ್ನಗಳು ಬೆಳೆಗಾರನಿಗೆ ಹೇಗೆ ಹೆಚ್ಚಿನ ಆರ್ಥಿಕ ಚೈತನ್ಯ ನೀಡಬಲ್ಲುದು ಎಂಬುದಕ್ಕೆ ಈ ಮಳಿಗೆ ಉದಾಹರಣೆಯಾಗಿ ಕಂಡು ಬರುತಿತ್ತು.

ಹಲಸಿನ ಕಸಿ ಗಿಡಗಳು: ದಕ್ಷಿಣ ಕನ್ನಡದ ನವನೀತ ನರ್ಸರಿಯ ಮಳಿಗೆಯಲ್ಲಿ ಕಸಿ ಗಟ್ಟಿದ ವಿವಿಧ ಹಲಸಿನ ಗಿಡಗಳನ್ನು ಮಾರಾಟಕ್ಕೆ ಇಡಲಾಗಿದೆ. ಗಮ್ ಲೆಸ್ ಹಲಸು, ಚೆಂಪಡ್ಕ, ಸಿಂಗಾಪುರ ಬ್ಲಾಕ್, ಡಯಾಂಗ್ ಸೂರ್ಯ ಮೊದಲಾದ ತಳಿಗಳ ಗಿಡಗಳು 100 ರೂ.ಗಳಿಂದ 250 ರೂ.ದರಗಳಲ್ಲಿ ಆಸಕ್ತರಿಗೆ ಲಭ್ಯವಿದೆ.

ತರಾವರಿ ಮಾವು

ರಾಮನಗರ, ಮಂಡ್ಯ ವಿಭಾಗಗಳಿಂದ ಆಗಮಿಸಿದ ಬೆಳೆಗಾರರು ತಾವು ಬೆಳೆದ ರಸಪೂರಿ, ಬಾದಾಮಿ, ಬಾಗಿನಪಲ್ಲಿ, ಮಲಗೋವ ಸೇರಿದಂತೆ ಸುಮಾರು ಹದಿನೈದು ತಳಿಯ ಮಾವಿನ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮಾಡುತ್ತಿದ್ದಾರೆ. ಸಕ್ಕರೆ ಗುತ್ತಿ ಎನ್ನುವ ಸಣ್ಣ ಮಾವು, ಸುಮಾರು 1 ಕೆ.ಜಿ.ಗೂ ಹೆಚ್ಚಿನ ತೂಕದ 'ವಾಲಜ' ಹೆಸರಿನ ಭಾರೀ ಗಾತ್ರದ ಮಾವು ಗ್ರಾಹಕರ ಗಮನ ಸೆಳೆಯುತ್ತಿದೆ. ಮಾವಿನ ಹಣ್ಣಿನ ದರ ಪ್ರತಿ ಕೆ.ಜಿ.ಗೆ 100 ರೂ.ಗಳಿಂದ 120 ರೂ.ಗಳ ಆಸುಪಾಸಿನಲ್ಲಿ ಕೈಗೆಟಕುವ ದರದಲ್ಲಿರುವುದು ವಿಶೇಷ.

ರಾಜ್ಯಮಟ್ಟದ ಸೆವೆನ್ ಎ ಸೈಡ್ ಅಂತರ ಕಾಲೇಜು ಹಾಕಿ ಪಂದ್ಯಾವಳಿ

ಬೆಂಗಳೂರು ಸೇಂಟ್‌ಜೋಸೆಫ್ ಕಾಲೇಜು ತಂಡ ಚಾಂಪಿಯನ್

ಗೋಣಿಕೊಪ್ಪ ಕಾವೇರಿ ಕಾಲೇಜು (ಬ್ಲೂ) ರನ್ನರ್ ಅಪ್



ಗೋಣಿಕೊಪ್ಪ, ಮೇ 26– ಕಾವೇರಿ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸೆವೆನ್ ಎ ಸೈಡ್ ಅಂತರ ಕಾಲೇಜು ಹಾಕಿ ಪಂದ್ಯಾವಳಿಯಲ್ಲಿ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜು ಚಾಂಪಿಯನ್ ತಂಡವಾಗಿ ಹೊರ ಹೊಮ್ಮಿದ್ದು, ಅತಿಥೇಯ ಗೋಣಿಕೊಪ್ಪ ಕಾವೇರಿ ಕಾಲೇಜು (ಬ್ಲೂ) ತಂಡ ರನ್ನರ್ ಅಪ್ ಸ್ಥಾನ ಅಲಂಕರಿಸಿತು.

ಶುಕ್ರವಾರ ನಡೆದ ಅಂತಿಮ ಪಂದ್ಯದಲ್ಲಿ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜು, ಕಾವೇರಿ ಕಾಲೇಜು ತಂಡದ ವಿರುದ್ಧ 3–1 ಗೋಲುಗಳ ಅಂತರದ ಜಯ ಸಾಧಿಸಿತು. ಬೆಂಗಳೂರು ತಂಡದ ನೇಹಲ್ ತಿಮ್ಮಯ್ಯ, ಪ್ರತೀಕ್ ಪೂವಣ್ಣ ಮತ್ತು ನರೇನ್ ಕಾರ್ಯಪ್ಪ ತಲಾ ಒಂದೊಂದು ಗೋಲು ಗಳಿಸಿ ಮಿಂಚಿದರು. ಕಾವೇರಿ ಕಾಲೇಜು ತಂಡದ ವಿನೀತ್ ನಾಣಯ್ಯ ಏಕೈಕ ಗೋಲು ಗಳಿಸಿ ಸೋಲಿನ ಅಂತರ ತಗ್ಗಿಸಿದರು.

ಸೆಮಿಫೈನಲ್ ಪಂದ್ಯದಲ್ಲಿ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜು, ಮಡಿಕೇರಿ ಎಫ್ ಎಂ ಕೆ ಎಂ ಸಿ ಕಾಲೇಜು ವಿರುದ್ಧ 1–0 ಗೋಲಿನಿಂದ ಜಯಿಸಿತು. 2 ನೇ ಸೆಮಿಫೈನಲ್‌ನಲ್ಲಿ ಗೋಣಿಕೊಪ್ಪಲು ಕಾವೇರಿ ಕಾಲೇಜು (ಬ್ಲೂ) ತಂಡವು ಗೋಣಿಕೊಪ್ಪ ಕಾವೇರಿ ಕಾಲೇಜು (ವೈಟ್) ತಂಡದ ವಿರುದ್ಧ 3–1 ಗೋಲುಗಳಿಂದ ಭರ್ಜರಿ ಗೋಲುದಾಖಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತು. ಮಡಿಕೇರಿ ಎಫ್ ಎಂಕೆಎಂಸಿ ಕಾಲೇಜ ತಂಡವು ತೃತೀಯ ಸ್ಥಾನ ಪಡೆದುಕೊಂಡಿತು. ಗೋಣಿಕೊಪ್ಪ ಕಾವೇರಿ ಕಾಲೇಜು (ವೈಟ್) ವಿರುದ್ಧ 5–0 ಗೋಲು ದಾಖಲಿಸಿ ಸಾಧನೆ ಮಾಡಿತು. ಗೋಣಿಕೊಪ್ಪ ಕಾವೇರಿ ಕಾಲೇಜು (ವೈಟ್) 4 ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಫೇರ್ ಪ್ಲೇ ಟ್ರೋಫಿಯನ್ನು ಗೋಣಿಕೊಪ್ಪ ಕಾವೇರಿ ಕಾಲೇಜು ಹಳೆ ವಿದ್ಯಾರ್ಥಿಗಳ ತಂಡ ಪಡೆದುಕೊಂಡಿತು. ಬೆಸ್ಟ್ ಗೋಲ್ ಕೀಪರ್ ಆಗಿ ಬೆಂಗಳೂರು ಸೇಂಟ್ ಜೋಸೆಫ್ ತಂಡದ ಧರ್ಮೇಂದ್ರ, ಬೆಸ್ಟ್ ಡಿಫೆಂಡರ್ ಆಗಿ ಗೋಣಿಕೊಪ್ಪ ಕಾವೇರಿ ಕಾಲೇಜು (ಬ್ಲೂ) ತಂಡದ ವಿನೀತ್ ನಾಣಯ್ಯ, ಹೆಚ್ಚು ಗೋಲು ಸರದಾರರಾಗಿ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜು ತಂಡದ ಚಸ್ವಿನ್ ಮುತ್ತಪ್ಪ ಹೊರಹೊಮ್ಮಿದರು

ವೀರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ಶಿಕ್ಷಣಕ್ಕೆ ಮಹತ್ವ ಹೆಚ್ಚಿದೆ. ಯುವ ಜನತೆ ಶಿಕ್ಷಣದ ಜತೆಗೆ ಕ್ರೀಡೆ ಹಾಗೂ ಇನ್ನಿತರ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಂಡು ಸರ್ವತೋಮುಖ ಬೆಳವಣಿಗೆಯನ್ನು ವೃದ್ಧಿಗೊಳಿಸಿಕೊಳ್ಳಬೇಕು. ಕಠಿಣ ಪರಿಶ್ರಮದ ಮೂಲಕ ಸಾಧನೆ ಮಾಡಿ ಸಮಾಜದಲ್ಲಿ ಸತ್ಪ್ರಜೆ ಗಳಾಗಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ಈ ಸಂದರ್ಭ ಕಾವೇರಿ ಎಜುಕೇಷನ್ ಸೊಸೈಟಿ ಅಧ್ಯಕ್ಷ ಇಟ್ಟೀರ ಕೆ.ಬಿದ್ದಪ್ಪ, ಕೊಡವ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಚಿರಿಯಪಂಡ ರಾಕೇಶ್ ಪೂವಯ್ಯ, ದಾನಿಗಳಾದ ಬಯವಂಡ ಮಹಾಬಲ, ಎನ್.ಗಿರೀಶ್, ಪ್ರಾಂಶುಪಾಲ ಡಾ. ಮಾಳೇಟಿರ ಬಿ.ಕಾವೇರಪ್ಪ, ಉಪ ಪ್ರಾಂಶುಪಾಲೆ ಡಾ.ಎ.ಎಸ್.ಪೂವಮ್ಮ, ಐಕ್ಯೂಎಸಿ ಸಂಚಾಲಕಿ .ಎಂ.ಎಸ್. ಭಾರತಿ, ಪಂದ್ಯಾವಳಿ ಸಂಚಾಲಕ ಮಿನ್ನಂಡ ಜೋಯಪ್ಪ, ದೈಹಿಕ ಶಿಕ್ಷಣ ನಿರ್ದೇಶಕ ಮಲ್ಲಮಾಡ ಸಂತೋಷ್ ಇದ್ದರು.

ಮೇ 29 ರಂದು ಉದ್ಯೋಗ ಮೇಳ

ಮಡಿಕೇರಿ, ಮೇ.26– ಕೊಡಗು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮೇ 29 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಉದ್ಯೋಗ ಮೇಳ ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಕ್ಲಬ್ ಮಹೀಂದ್ರ ರೆಸಾರ್ಟ್, ಮಡಿಕೇರಿ, ಹಿಮತ್ಸಂಗ ಲೈನ್ಸ್, ಹಾಸನ, ಹ್ಯೂಂಡಾಯ್ ಕಾರ್ ಶೋರೂಮ್, ಮಡಿಕೇರಿ, ಕಲ್ಯಾಣಿ ಮೋಟಾರ್ಸ್, ಮಡಿಕೇರಿ ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮ, ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು ಹಾಗೂ ಸ್ವ–ವಿವರಗಳ ಪ್ರತಿಗಳೊಂದಿಗೆ ಉದ್ಯೋಗ ಮೇಳದಲ್ಲಿ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ. 8296020826 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಅವರು ತಿಳಿಸಿದ್ದಾರೆ.

ಅತಿಯಾದ ಆತ್ಮವಿಶ್ವಾಸದಿಂದ ಬಿಜೆಪಿಗೆ ಸೋಲು: ಮಾಜಿ ಶಾಸಕ ಕೆ.ಜಿ. ಬೋಪಯ್ಯ

ನಾಪೋಕ್ಲು, ಮೇ 26– ರಾಜ್ಯ ಬಿಜೆಪಿ ಸರ್ಕಾರದ ಸಾಧನೆ ಮತ್ತು ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ವಿಫಲರಾಗಿರುವುದರಿಂದ ಈ ಚುನಾವಣೆಯಲ್ಲಿ ಅನಿರೀಕ್ಷಿತ ಸೋಲು ಅನುಭವಿಸುವಂತಾಯಿತು ಎಂದು ಮಾಜಿ ಶಾಸಕ ಕೆ.ಜಿ ಬೋಪಯ್ಯ ತಿಳಿಸಿದ್ದಾರೆ.

ಪೆರಾಜೆ ಶ್ರೀ ಅನ್ನಪೂರ್ಣೇಶ್ವರಿ ಕಲಾಮಂದಿರದಲ್ಲಿ ಭಾರತೀಯ ಜನತಾ ಪಾರ್ಟಿಯ ಶಕ್ತಿ ಕೇಂದ್ರದ ವತಿಯಿಂದ ಬಿಜೆಪಿ ಕಾರ್ಯಕರ್ತರಿಗೆ ಮತ್ತು ಮತದಾರರಿಗೆ ಕೃತಜ್ಞತಾ ಸಭೆ ಹಾಗೂ ತಮಗೆ ಏರ್ಪಡಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕ್ಷೇತ್ರದ ಅಭಿವೃದ್ಧಿ ಹಾಗೂ ಜನಸೇವೆಯನ್ನು ಮತದಾರರು ಮರೆತಿದ್ದಾರೆ. ರಾಜ್ಯದಲ್ಲಿ 150ಕ್ಕೂ ಅಧಿಕ ಸೀಟುಗಳನ್ನು ಪಡೆಯುವ ನಿರೀಕ್ಷೆಯಿತ್ತು. ಅತಿಯಾದ ಆತ್ಮ ವಿಶ್ವಾಸ ಪಕ್ಷಕ್ಕೆ ಮುಳುವಾಗಿದೆ. ಆಡಳಿತ ವಿರೋಧಿ ಅಲೆ, ಪ್ರಣಾಳಿಕೆಯಲ್ಲಿನ ಲೋಪ, ಅಂತಿಮ ಹಂತದಲ್ಲಿ ಅಭ್ಯರ್ಥಿಯ ಆಯ್ಕೆ, ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡುಗಳ ಆಮಿಷ, ಜಾತಿ ರಾಜಕೀಯದಿಂದ ಸೋಲು ಉಂಟಾಗಿದೆ ಎಂದರು.



ಸೋಲನ್ನು ಸವಾಲಾಗಿ ಸ್ವೀಕರಿಸಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯನ್ನು ಮತ್ತೊಮ್ಮೆ ಗೆಲ್ಲಿಸುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗಿದೆ. ಸೋತರೂ ನಾನು ಸದಾ ನಿಮ್ಮೊಂದಿಗೆ ಇರುತ್ತೇನೆ ಎಂದರು. ಕೊಡಗು ಜಿಲ್ಲಾ ಬಿಜೆಪಿ ರೈತ ಮೋರ್ಚಾದ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ ಮಾತನಾಡಿ ಕಾರ್ಯಕರ್ತರು ಜಾಗೃತರಾಗಿರಬೇಕು. ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ಮುಟ್ಟಿಸುವ ಮೂಲಕ ಪಕ್ಷದ ಸಂಘಟನೆಯನ್ನು ಅಭಿವೃದ್ಧಿಪಡಿಸಿ ಮುಂದಿನ ಜಿಪಂ, ತಾಪಂ ಚುನಾವಣೆಯಲ್ಲಿ ನಮ್ಮ ಪಕ್ಷ ಅತ್ಯಧಿಕ ಮತಗಳಿಂದ ವಿಜೇತರಾಗಬೇಕು ಎಂದರು. ಸ್ಥಳೀಯ ಮುಖಂಡರಾದ ಸೀತಾರಾಮ ಪೆರಾಜೆ, ಸುಭಾಷ್ ಚಂದ್ರ ಬಂಗಾರಕೋಡಿ, ಉದಯ ಚಂದ್ರ ಕುಂಬಳಚೇರಿ, ಎ.ಸಿ. ಹೊನ್ನಪ್ಪ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಚಂದ್ರಕಲಾ ಬಾಲಚಂದ್ರ, ಬಿಜೆಪಿ ಶಕ್ತಿ ಕೇಂದ್ರದ ಕಾರ್ಯದರ್ಶಿ ಧನಂಜಯ ಕೋಡಿ ಉಪಸ್ಥಿತರಿದ್ದರು. ಪೆರಾಜೆ ಶಕ್ತಿ ಕೇಂದ್ರದ ಸಂಚಾಲಕ ನಂಜಪ್ಪ ನಿಡ್ಯಮಲೆ ಸ್ವಾಗತಿಸಿದರು. ಮಡಿಕೇರಿ ಗ್ರಾಮಾಂತರ ಮಂಡಲ ಕಾರ್ಯದರ್ಶಿ ಪ್ರಸನ್ನ ನೆಕ್ಕಿಲ ವಂದಿಸಿದರು.

ಇಂದು ಹೊಂಗನೂರು ಭಾಗದ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 26– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 27 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹೊಂಗನೂರು, ಇರಸವಾಡಿ, ಮಸಣಾಪುರ, ಚಾಟಿಪುರ, ಗಂಗವಾಡಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಗೂಳಿಪುರ, ಹೊಮ್ಮ, ರೇಚಂಬಳ್ಳಿ, ಹೆಚ್. ಮೂಕಳ್ಳಿ, ಕುರುಬರ ಹುಂಡಿ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನಾಳೆ ಕೊಳ್ಳೇಗಾಲ ತಾಲೂಕಿನ ಕೆಲವೆಡೆ ವಿದ್ಯುತ್ ವ್ಯತ್ಯಯ

ಕೊಳ್ಳೇಗಾಲ, ಮೇ 26– ಕುಂತೂರು ಫೀಡರ್‌ನಲ್ಲಿ ನಿರ್ವಹಣೆ ಕಾರ್ಯದ ಹಿನ್ನೆಲೆ 27ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಆಲಹಳ್ಳಿ, ಟಗರಪುರ, ಮೆಲ್ಲಳ್ಳಿಮಾಳ, ತೇರಂಬಳ್ಳಿ, ಗೊಬ್ಬಳಿಪುರ, ಹೊಸಮಾಲಂಗಿ, ಕೆಸ್ತೂರು, ಕಜ್ಜಿಹುಂಡಿ, ಕಿನಕಹಳ್ಳಿ, ಕಟ್ನವಾಡಿ, ಕೆ. ಹೊಸೂರು ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅಪರಿಚಿತ ಶವ ಪತ್ತೆ

ಚಾಮರಾಜನಗರ, ಮೇ 26– ತಾಲೂಕಿನ ತಗಡೂರು ರಾಮಚಂದ್ರ ರಾವ್ ನಾಲೆ ಹಾದು ಹೋಗಿರುವ ಸೇತುವೆ ಕೆಳಭಾಗದಲ್ಲಿ 35 ರಿಂದ 40 ವರ್ಷ ವಯಸ್ಸಿನ ಅಪರಿಚಿತ ಪುರುಷ ಶವವೊಂದು ಪತ್ತೆಯಾಗಿದೆ, 5.6 ಅಡಿ ಎತ್ತರ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು ಇದ್ದು, ಹಸಿರು ಬಣ್ಣದ ಅಂಡರ್‌ವೇರ್ ಇರುತ್ತದೆ. ವಾರಸುದಾರರು ಕುದೇರು ಪೊಲೀಸ್ ಠಾಣೆ ದೂಸಂ 08226–234439, ಪೊಲೀಸ್ ಇನ್ಸ್‌ಪೆಕ್ಟರ್ 9480804647 ಅಥವಾ ಚಾಮರಾಜನಗರದ ಕಂಟ್ರೋಲ್ ರೂಂ ದೂ.ಸಂ 08226–222083 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕುದೇರು ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ಕೋರಿದ್ದಾರೆ.



ರೋಮಾಂಚನಗೊಳಿಸಿದ ಪ್ರಥಮ ಜಲಸಾಹಸ ಕ್ರೀಡೆ

ಉತ್ಸಾಹದಿಂದ ಪಾಲ್ಗೊಂಡ ನೂರಾರು ಯುವಕ–ಯುವತಿಯರು, ಮಕ್ಕಳು



ಚಾಮರಾಜನಗರ, ಮೇ 26– ತಾಲೂಕಿನ ಅಟ್ಟುಗೊಳಿಪುರ ಗ್ರಾಮದ ಬಳಿ ಇರುವ ಸುವರ್ಣಾವತಿ ಜಲಾಶಯದಲ್ಲಿ ಶುಕ್ರವಾರ ನಡೆದ ಜಿಲ್ಲಾಮಟ್ಟದ ಜಲ ಸಾಹಸ ಕ್ರೀಡೆ ರೋಮಾಂಚನಗೊಳಿಸುವುದರೊಂದಿಗೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಜಲ ಸಾಹಸ ಕ್ರೀಡೆಯಲ್ಲಿ ನೂರಾರು ಯುವಕರು, ಯುವತಿಯರು, ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಜಲ ಸಾಹಸ ಕ್ರೀಡೆ ಏರ್ಪಡಿಸಲಾಗಿತ್ತು.

ಸ್ಪೀಡ್‌ಬೋಟ್, ವಾಟರ್ ಸ್ಕೂಟರ್ ರೈಡ್ ಸೇರಿದಂತೆ ಇತರೆ ಪ್ರದರ್ಶನಗಳು ನೆರೆದವರನ್ನು ರೋಮಾಂಚನಗೊಳಿಸಿತು. ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ನೂರಾರು ಜನರು ರಕ್ಷಣೆಯ ಜಾಕೆಟ್ ಧರಿಸಿಗೊಂಡು ವಿಭಿನ್ನ ಅನುಭವ ಪಡೆದುಕೊಂಡರು. ಯುವಕರು, ಯುವತಿಯರು ಬೋಟ್‌ನಲ್ಲಿ ಸಂಚಾರಿಸುವಾಗ ಫೋಟೋ ಕ್ಲಿಕ್ಕಿಸಿಕೊಂಡು ಖುಷಿಪಟ್ಟರು. ಮಕ್ಕಳು ನೀರಿನಲ್ಲಿ ಕೈ ಆಡಿಸುತ್ತಾ ಸಂತಸಗೊಂಡರು.

ಜಿಲ್ಲೆಯಲ್ಲಿ ಇದೇ ಪ್ರಥಮ ಬಾರಿಗೆ ಜಲ ಸಾಹಸ ಕ್ರೀಡೆ ಆಯೋಜಿಸಿದ್ದರಿಂದ ಪಾಲ್ಗೊಳ್ಳಲು ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಸಂಬಂಧಪಟ್ಟವರಿಂದ ಟೋಕನ್ ಪಡೆದವರು ಸರತಿ ಸಾಲಿನಲ್ಲಿ ನಿಂತು ತಮಗೆ ಇಷ್ಟವಾದ ಬೋಟ್‌ನಲ್ಲಿ ಕುಳಿತು ಕ್ರೀಡೆಯಲ್ಲಿ ಪಾಲ್ಗೊಂಡು ಸಂತಸಪಟ್ಟರು. ಟೋಕನ್ ಪಡೆದು, ಜಾಕೆಟ್ ಧರಿಸಿದ್ದವರಿಗೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಇದರಿಂದ ಟೋಕನ್ ಹಾಗೂ ಜಾಕೆಟ್ ಪಡೆಯಲು ಜನರು ಮುಗಿಬಿದ್ದರು. ಬೆಳಗ್ಗೆಯಿಂದ ಸಂಜೆವರೆಗೂ ನಡೆದ ಈ ಜಲಸಾಹಸ ಕ್ರೀಡೆಯಲ್ಲಿ ನೂರಾರು ಜನರು ಭಾಗವಹಿಸುವ ಮೂಲಕ ಸಂಭ್ರಮಿಸಿದರು.

ಮುಂದುವರಿಸಲು ಒತ್ತಾಯ: ಚಾಮರಾಜನಗರ ತಾಲೂಕಿನ ಬೆಂಡರವಾಡಿ ಕೆರೆ, ಮರೆಯಾಲದ ಬಳಿ ಇರುವ ಮಾಲಗೆರೆ, ಅಟ್ಟುಗೊಳಿಪುರದ ಬಳಿ ಇರುವ ಸುವರ್ಣಾವತಿ ಹಾಗೂ ಚಿಕ್ಕಹೊಳೆ, ಕೊಡಿಮೋಳೆ ಗ್ರಾಮದ ಬಳಿ ಇರುವ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಅವಕಾಶ ಇದೆ. ಈ ಕೆರೆಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದರೆ ಪ್ರವಾಸಿಗರು ಭೇಟಿ ನೀಡಿ ಅದರ ಸೊಬಗನ್ನು ಸವಿಯಲಿದ್ದಾರೆ.

ಇದಲ್ಲದೇ ಈ ಸ್ಥಳಗಳಲ್ಲಿ ಬೋಟಿಂಗ್ ವ್ಯವಸ್ಥೆ ಕಲ್ಪಿಸಲು ಅವಕಾಶಗಳಿದೆ. ಇದರಿಂದ ಜಿಲ್ಲೆಯ ಜನತೆಗೆ ಹಾಗೂ ಜಿಲ್ಲೆಯಿಂದ ಹಾದು ಹೋಗುವ ಪ್ರವಾಸಿಗರಿಗೆ ಉಲ್ಲಾಸ ದೊರೆಯಲಿದೆ. ಕೆಲವರಿಗೆ ಉದ್ಯೋಗಾವಕಾಶ ದೊರೆಯುವುದರ ಜೊತೆಗೆ ಜಿಲ್ಲೆಯ ಅಭಿವೃದ್ಧಿಗೆ ಅನುಕೂಲ ಆಗಲಿದೆ ಎಂಬ ಮಾತುಗಳು ಕೇಳಿ ಬಂತು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಏನೂ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

"ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಜಲ ಸಾಹಸ ಕ್ರೀಡೆ ಆಯೋಜಿಸಲಾಗಿದೆ. ಮನರಂಜನೆ ಜೊತೆಗೆ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಇದನ್ನು ಆಯೋಜಿಸಲಾಗಿದೆ. ಕ್ರೀಡಾ ಇಲಾಖೆಯಲ್ಲಿ ಇಂತಹದೊಂದು ಯೋಜನೆ ಇದೆ ಎಂಬುದು ಗೊತ್ತಾಗಲಿ ಎಂಬ ಉದ್ದೇಶದಿಂದ ಪ್ರತಿಯೊಬ್ಬರು ಪಾಲ್ಗೊಳ್ಳಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಶಿಬಿರ ಆಯೋಜಿಸಿ ಯುವಕ–ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಅವರನ್ನು ಆರ್ಥಿಕ ಸ್ವಾವಲಂಬನೆ ಮಾಡುವುದು ಇಲಾಖೆಯ ಉದ್ದೇಶವಾಗಿದೆ. ಇಂದಿನ ಕ್ರೀಡೆಗೆ ಉತ್ತಮ ರೀತಿಯಲ್ಲಿ ಸ್ಪಂದನೆ ದೊರೆತಿದ್ದು, ಇದನ್ನು ಮುಂದುವರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

-ಆರ್. ಅನಿತಾ,
ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶಿಕ್ಷಕರು ಸನ್ನದ್ಧರಾಗಿ



ಚಾಮರಾಜನಗರ, ಮೇ 26– ಶಾಲೆಗಳ ಸಮಗ್ರ ಅಭಿವೃದ್ಧಿಗೆ ಗುಣಾತ್ಮಕ ಶಿಕ್ಷಣಕ್ಕೆ ಶಿಕ್ಷಕರು ಸನ್ನದ್ಧರಾಗುವಂತೆ ನೂತನವಾಗಿ ಅಧಿಕಾರ ವಹಿಸಿಕೊಂಡ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ. ಪಾಂಡು ತಿಳಿಸಿದರು.

ಶಿಕ್ಷಕರ ಸಂಘದಿಂದ ಸ್ವಾಗತ ಸನ್ಮಾನ ಸ್ವೀಕರಿಸಿ ಸಭೆಯಲ್ಲಿ ಮಾತನಾಡುತ್ತ 2023–24ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಇಲಾಖೆಯ ಮಾರ್ಗಸೂಚಿಯಂತೆ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಸರ್ಕಾರಿ ಶಾಲೆಗಳಲ್ಲಿ ಹಾಜರಾತಿ ಕಡಿಮೆ ಆಗದಂತೆ ಎಚ್ಚರವಹಿಸಿ ಖಾಸಗಿ ಶಾಲೆಗಳಂತೆ ಸ್ಪರ್ಧಾತ್ಮಕ ಕಾರ್ಯ ನಿರ್ವಹಿಸಬೇಕಾಗಿದೆ. ಮೇ 29 ರಿಂದ ಶಾಲಾ ಪ್ರಾರಂಭೋತ್ಸವವನ್ನು ಸಮುದಾಯದ ಸಹಕಾರದೊಂದಿಗೆ ದಾಖಲಾತಿ ಆಂದೋಲನ ನಡೆಸಿ ಎಂದು ತಿಳಿಸಿದರು.

ಇಲಾಖೆಯ ಕಚೇರಿಗಳಲ್ಲಿ ಶಿಕ್ಷಕರ ಕೆಲಸಗಳು ವಿಳಂಬವಾಗದಂತೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ. ಎಂದು ಸಂಘದ ಮನವಿಗಳಿಗೆ ಪೂರಕವಾಗಿ ತಿಳಿಸಿದರು. ಸಂಘ ಹಾಗೂ ಇಲಾಖೆಯ ಮುಖ್ಯಸ್ಥರೊಡನೆ ಜಂಟಿ ಸಮಲೋಚನಾ ಸಭೆಗಳನ್ನು ನಡೆಸಿ ಶಿಕ್ಷಕರ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಸಿದರು.'

ಸಂಘದ ಜಿಲಾ ಅಧ್ಯಕ್ಷ ಕೆ.ಎಸ್. ಮಾದಪ್ಪ, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಉಪಾಧ್ಯಕ್ಷೆ ಅನ್ನಪೂರ್ಣ ಪದಾಧಿಕಾರಿಗಳಾದ ಸಿ.ಕೆ. ರಾಮಸ್ವಾಮಿ, ಡಿ.ಎನ್.ಭರತ್‌ಭೂಷಣ್, ಎಂ.ಡಿ ಮಹದೇವಯ್ಯ, ರಾಚಯ್ಯ, ಸೋಮಣ್ಣ ರವಿಕುಮಾರ್, ವಿ.ಶಾಂತರಾಜು, ಸಿ.ಎಂ. ಮುರುಗೇಶ್‌ಕುಮಾರ್, ಶಿವಮಲ್ಲು, ಶಿವಕುಮಾರ್ ಸಭೆಯಲ್ಲಿ ಉಪಸ್ಥಿತರಿದ್ದರು.

ಮಾದಪ್ಪಬೆಟ್ಟದಲ್ಲಿ ಎಸ್‌ಸಿ,ಓಬಿಸಿ ಅಂಗಡಿ ಮಳಿಗೆಗಳನ್ನು ವಶಪಡಿಸಿಕೊಂಡಿರುವವರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಎಡಿಸಿಗೆ ಮನವಿ

ಚಾಮರಾಜನಗರ, ಮೇ 26– ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ ಅಂಗಡಿ ಮಳಿಗೆಗಳನ್ನು ಮೇಲ್ವರ್ಗದವರು ಹಣದ ಆಮಿಷವೊಡ್ಡಿ ವಶಪಡಿಸಿಕೊಂಡಿರುವವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಮಹದೇಶ್ವರ ಬೆಟ್ಟದ ಪರಿಶಿಷ್ಟ ಜಾತಿ ನಿರುದ್ಯೋಗ ಯುವಕರು ಮುಖಂಡ ಬಸವಪುರ ರಾಜಶೇಖರ ಅವರ ನೇತೃತ್ವದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರಿಗೆ ಮನವಿ ಸಲ್ಲಿಸಿದರು. ಬೆಟ್ಟದಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ ಅಂಗಡಿ ಮಳಿಗೆಗಳನ್ನು ಮೇಲ್ವರ್ಗದವರು ಹಣದ ಆಮಿಷವೊಡ್ಡಿ ಮಳಿಗೆಗಳನ್ನು ವಶಪಡಿಸಿಕೊಂಡು ಹೆಚ್ಚಿನ ಲಾಭಕ್ಕೆ ಖರೀದಿ ಮಾಡುವುದರಿಂದ ನಮಗೆ ತುಂಬಾ ನಷ್ಟವಾಗುತ್ತದೆ. ಬದುಕು ನಡೆಸಲು ತುಂಬಾ ಕಷ್ಟಕರವಾಗುತ್ತದೆ. ಹಾಗಾಗಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಅಂಗಡಿ ಮಳಿಗೆಗಳನ್ನು ವಶಪಡಿಸಿಕೊಂಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಂಡು ಸ್ಥಳೀಯ ಅರ್ಹ ಫಲಾನುಭವಿಗಳಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯನಿದೇವಿ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಪರಿಶಿಷ್ಟ ಜಾತಿ ನಿರುದ್ಯೋಗ ಯುವಕರು ಆಗ್ರಹಿಸಿದ್ದಾರೆ.



ಈ ಸಂದರ್ಭದಲ್ಲಿ ಮುಖಂಡರಾದ ಬಸವನಪುರ ರಾಜಶೇಖರ್, ರಾಮಸಮುದ್ರ ಎಂ.ಶಿವಕುಮಾರ್, ವೆಲ್ಡಿಂಗ್ ಲಿಂಗರಾಜು, ಹರವೆ ನಾಗೇಶ್, ನಾಗಯ್ಯ ಹೊನ್ನೇಗೌಡನಹಳ್ಳಿ, ಯಳಂದೂರು ಮಲ್ಲಿಕ್, ಮಹದೇಶ್ವರ ಬೆಟ್ಟದ ಮಂಜುನಾಥ್, ಮಹೇಶ್, ನಾಗೇಶ್, ಹರಿಕೃಷ್ಣ, ಆರ್. ಕಾರ್ತಿಕ್ ಇತರರು ಹಾಜರಿದ್ದರು.

ಸಚಿವ ಸಂಪುಟದಲ್ಲಿ ಆದಿಜಾಂಬವ ಸಮುದಾಯಕ್ಕೆ ಪ್ರಾಧಾನ್ಯತೆ ನೀಡಲು ಆಗ್ರಹ



ಚಾಮರಾಜನಗರ, ಮೇ. 26– ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದಲ್ಲಿ ಮೈಸೂರು ಭಾಗದ ಆದಿಜಾಂಬವ ಸಮುದಾಯಕ್ಕೆ ಪ್ರಾಧಾನ್ಯತೆ ನೀಡಬೇಕು ಎಂದು ಜಿಲ್ಲಾ ಡಾ.ಬಾಬು ಜಗಜೀವನರಾಂ ಯುವ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಎಂ. ಶಿವಮೂರ್ತಿ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ನಗರದ ಹೋಟಲ್ ಶೃಂಗಾರ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಡಾ.ಬಾಬು ಜಗಜೀವನರಾಂ ಯುವ ಜಾಗೃತಿ ವೇದಿಕೆಯ ಪದಾಧಿಕಾರಿಗಳ ಸಭೆಯಲ್ಲಿ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿ ರಾಜ್ಯದಲ್ಲಿ ನಡೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದ್ದು, ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಿದೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು, ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕಾರ ಮಾಡಿರುವುದು ತುಂಬಾ ಸಂತಸ ಉಂಟು ಮಾಡಿದೆ ಎಂದರು.

ಕಳೆದ 25 ವರ್ಷಗಳಿಂದ ಮೈಸೂರು ಭಾಗದಿಂದ ಆದಿಜಾಂಬವ ಸಮುದಾಯಕ್ಕೆ ಯಾವುದೇ ಪ್ರಾಧಾನ್ಯತೆ ಕೊಟ್ಟಿಲ್ಲ. ಈ ಚುನಾವಣೆಯಲ್ಲಿ ಸಮುದಾಯ ಕಾಂಗ್ರೆಸ್‌ಗೆ ಹೆಚ್ಚಿನ ಮತ ಕೊಟ್ಟಿದೆ. ಹಾಗಾಗಿ ಮೈಸೂರು ಭಾಗದಲ್ಲಿ ಸಮುದಾಯ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅವರನ್ನು ಸಚಿವರನ್ನಾಗಿ ಮಾಡುವ ಮೂಲಕ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಿಕೊಡಬೇಕು ಎಂದು ಶಿವಮೂರ್ತಿ ಕಾಂಗ್ರೆಸ್ ವರಿಷ್ಠರಲ್ಲಿ ಒತ್ತಾಯಿಸಿದರು.

ಸಭೆಯಲ್ಲಿ ಜಿಲ್ಲಾ ಡಾ.ಬಾಬು ಜಗಜೀವನರಾಂ ಯುವ ಜಾಗೃತಿ ವೇದಿಕೆಯ ಸಂಘಟಕ ಹರವೆ ನಾಗೇಶ್, ಎಚ್.ಎಚ್, ನಾಗರಾಜು, ನಾಗಯ್ಯ ಹೊನ್ನೇಗೌಡನಹಳ್ಳಿ, ರಾಮಸಮುದ್ರದ ಬಾಬುಜಗಜೀವನರಾಂ ಯುವಕರ ಜಾಗೃತಿ ವೇದಿಕೆ ಅಧ್ಯಕ್ಷ ರಾಚಯ್ಯ, ಕುಮಾರ್ ಭಾಗವಹಿಸಿದ್ದರು.

ಜೂ.1, ಫೋನ್ ಇನ್ ಕಾರ್ಯಕ್ರಮ

ಚಾಮರಾಜನಗರ, ಮೇ 23– ಕರ್ನಾಟಕ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಕುರಿತು ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜೂನ್ 1ರಂದು ರಾತ್ರಿ 8 ರಿಂದ 8.30 ಗಂಟೆಯವರೆಗೆ ಆಕಾಶವಾಣಿಯಲ್ಲಿ ಫೋನ್ ಇನ್ ನೇರ ಪ್ರಸಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗ್ರಾಹಕರು ಯಾವುದೇ ಪ್ರಶ್ನೆಗಳಿದ್ದಲ್ಲಿ ದೂ.ಸಂ 080–22370477, 22370488, 22370499ಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು. ಗ್ರಾಹಕರು ತಮ್ಮ ಪ್ರಶ್ನೆಗಳನ್ನು ಮಿಂಚಂಚೆ (ಇ–ಮೇಲ್) consumer grievances.queries@gmail.com ಮೂಲಕ ಮೇ 31ರ ಒಳಗಾಗಿ ಕಳುಹಿಸಿಕೊಡಬಹುದು.

ಗುಂಡ್ಲುಪೇಟೆ: ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 26– ಗುಂಡ್ಲುಪೇಟೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2023ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳು ವೆಬ್‌ಸೈಟ್ www.cite.karnataka.gov.in ಮೂಲಕ ಜೂ.7 ರವರಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. 2 ವರ್ಷಗಳ ಅವಧಿಯ ಎಲೆಕ್ಟ್ರಾನಿಕ್ಸ್ ಮೆಕಾನಿಕ್ಸ್ (ಇ.ಎಂ), ಎಲೆಕ್ಟ್ರಿಷಿಯನ್ (ಇ.ಎನ್), ಮೆಕಾನಿಕ್ ಎಲೆಕ್ಟ್ರಿಕ್ ವೆಹಿಕಲ್ (ಎಂ.ಇ.ವಿ) ತರಬೇತಿ, 1 ವರ್ಷ ಅವಧಿಯ ಕಂಪ್ಯೂಟರ್ ಆಪರೇಟರ್ ಅಂಡ್ ಪ್ರೋಗ್ರಾಮಿಂಗ್ ಅಸಿಸ್ಟಂಟ್ (ಸಿಓಪಿಎ), ಇಂಡಸ್ಟ್ರಿಯಲ್ ರೋಬೋಟಿಕ್ಸ್ ಅಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಿಷಿಯನ್ (ಐ.ಆರ್ ಮತ್ತು ಡಿ.ಎಮ್) ಕೋರ್ಸ್‌ಗಳಿಗೆ ಅವಕಾಶವಿದೆ. ಎಲೆಕ್ಟ್ರಿಷಿಯನ್ ವೃತ್ತಿಯ ಸ್ಥಾನಗಳಿಗೆ ಆಫ್‌ಲೈನ್‌ನಲ್ಲಿ ಮೊದಲು ಬಂದವರಿಗೆ ಪ್ರವೇಶವನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ: 6360318511, 7676289589 ಸಂಪರ್ಕಿಸುವಂತೆ ಗುಂಡ್ಲುಪೇಟೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಶನಿವಾರ 27 ಮೇ 2023

ಸೋನಿಯಾ, ರಾಹುಲ್ ಗಾಂಧಿಗೆ ರಾಜ್ಯದಲ್ಲಿ ಉತ್ತಮ ಆಡಳಿತದ ಭರವಸೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ನವದೆಹಲಿ, ಮೇ 26– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ



ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪಕ್ಷದ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದರು. ತಮ್ಮ ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ಸಿದ್ದರಾಮಯ್ಯ ಅವರು ರಾಷ್ಟ್ರ ರಾಜಧಾನಿಗೆ ತೆರಳಿದ್ದು, ದಕ್ಷಿಣದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದ ನಂತರ ಸೋನಿಯಾ ಗಾಂಧಿ ಅವರೊಂದಿಗಿನ ಅವರ ಮೊದಲ ಸಭೆ ಇದಾಗಿದೆ. ಸಿದ್ದರಾಮಯ್ಯ ಅವರು ಸಿಪಿಪಿ ಅಧ್ಯಕ್ಷರಿಗೆ ರಾಜ್ಯದಲ್ಲಿ ಉತ್ತಮ ಆಡಳಿತದ ಭರವಸೆ ನೀಡಿದ್ದಾರೆ ಮತ್ತು ವಿಧಾನಸಭಾ ಚುನಾವಣೆಯ ಸಮಯದಲ್ಲಿ ಅವರ ಮಾರ್ಗದರ್ಶನ ಮತ್ತು ಪ್ರಚಾರಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ. ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಕಾಂಗ್ರೆಸ್‌ನ ಉನ್ನತ ನಾಯಕರು ಗುರುವಾರ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಕರ್ನಾಟಕ ಉಸ್ತುವಾರಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಉಭಯ ನಾಯಕರು ಭೇಟಿ ಮಾಡಿದ್ದರು.

ಒಂದನೇ ಪುಟದಿಂದ

ಸ್ಥಾನಮಾನ; ಚರ್ಚೆಗೆ ಗ್ರಾಸ

ಎಸ್.ಎಸ್.ಬೋಸರಾಜು ಅವರನ್ನು ಸಚಿವರನ್ನಾಗಿ ಮಾಡಲಾಗಿದೆ. ಐದಾರು ಬಾರಿ ಶಾಸಕರಾಗಿರುವ ಹಿರಿಯರನ್ನು ಕಡೆಗಣಿಸಿದ್ದು, ಬೋಸರಾಜು ಅವರಿಗೆ ಮಣೆ ಹಾಕಿರುವುದು ಹಾಗೂ ಶೆಟ್ಟರ್ ಮತ್ತು ಸವದಿ ಅವರಿಗೆ ಸಂಪುಟದಲ್ಲಿ ಸ್ಥಾನ ನೀಡದೇ ಇರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಮತ್ತೊಂದೆಡೆ ಬಿಜೆಪಿ ಬೆಂಬಲಿತ ಸಾಮಾಜಿಕ ಜಾಲ ತಾಣ ಗ್ರೂಪ್‌ಗಳು ಶೆಟ್ಟರ್ ಮತ್ತು ಸವದಿಯವರನ್ನು ಅಣಕಿಸುವಂತೆ ಪೋಸ್ಟ್‌ಗಳನ್ನು ಹಾಕುತ್ತಿವೆ.

ಇಂದು ಸಂಪುಟ ವಿಸ್ತರಣೆ

ಈ ಎರಡು ಸಮುದಾಯಗಳನ್ನು ಹೆಚ್ಚು ಒಲೈಕೆ ಮಾಡಿ, ಮುಂದಿನ ಚುನಾವಣೆಗೆ ಆ ಸಮುದಾಯಗಳನ್ನು ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಮಂತ್ರಿಮಂಡಲದಲ್ಲಿ ಹೆಚ್ಚಿನ ಸ್ಥಾನ ನೀಡಲು ನಿರ್ಧರಿಸಿದ್ದಾರೆ. ವರಿಷ್ಠರ ಈ ನಿರ್ಧಾರದಿಂದ ವಿಧಾನಸಭೆಯ ಕೆಲ ಹಿರಿಯ ಸದಸ್ಯರು ಮಂತ್ರಿ ಸ್ಥಾನದಿಂದ ದೂರ ಉಳಿಯುವಂತಾಗುತ್ತದೆ. ಪ್ರತಿ ಲೋಕಸಭಾ ಕ್ಷೇತ್ರಕ್ಕೆ ಕನಿಷ್ಠ ಒಂದು ಸಚಿವ ಸ್ಥಾನ ಕಲ್ಪಿಸಲು ವರಿಷ್ಠರು ಪ್ರಯತ್ನಪಟ್ಟಿದ್ದಾರೆ. ಒಟ್ಟಾರೆ ಸಂಪುಟ ಸದಸ್ಯರನ್ನು ಸೇರಿಸಿಕೊಳ್ಳುವ ಪಟ್ಟಿಯ ಕೊನೆಯ ಹಂತದಲ್ಲಿ ಮುಖ್ಯಮಂತ್ರಿಯವರು ಮೇಲುಗೈ ಸಾಧಿಸಿದ್ದಾರೆ ಎನ್ನಲಾಗಿದೆ. ಅಂತೂ ಕಳೆದ ಮೂರು ದಿನಗಳಿಂದ ನಡೆಸಿದ ಕಸರತ್ತಿಗೆ ಇಂದು ಸಂಜೆ ಮೋಕ್ಷ ದೊರೆತ ನಂತರ ಮುಖ್ಯಮಂತ್ರಿಯವರು ನಗರಕ್ಕೆ ಹಿಂತಿರುಗಿದ್ದಾರೆ. ಕಳೆದ ಶನಿವಾರ ಸರ್ಕಾರ ರಚನೆ ಮಾಡಿದ ಸಿದ್ದರಾಮಯ್ಯ ತಮ್ಮ ಜೊತೆ ಒಬ್ಬರು ಉಪ ಮುಖ್ಯಮಂತ್ರಿ ಸೇರಿದಂತೆ 9 ಸದಸ್ಯರನ್ನು ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು.

ಒಂದು ವಾರದ ನಂತರ ಉಳಿದಿರುವ 24 ಸ್ಥಾನಗಳನ್ನು ಭರ್ತಿ ಮಾಡಿ, ಪೂರ್ಣ ಪ್ರಮಾಣದಲ್ಲಿ ಸರ್ಕಾರ ರಚಿಸಿ, ಆಡಳಿತಕ್ಕೆ ಚುರುಕು ನೀಡಲು ಮುಂದಾಗಿದ್ದಾರೆ.

ಕೆಲವು ಸದಸ್ಯರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬಾರದೆಂದು ಉಭಯ ನಾಯಕರು ಪಟ್ಟು ಹಿಡಿದಿದ್ದರು, ಅದರಲ್ಲಿ ಇಬ್ಬರು ಅಲ್ಪಮಟ್ಟಿಗೆ ಯಶಸ್ವಿಯಾಗಿದ್ದಾರೆ. ಇವರ ಪೈಪೋಟಿಯಿಂದ ಅರ್ಹರು ಮತ್ತು ಹಿರಿಯರು ಸಂಪುಟದಿಂದ ದೂರ ಉಳಿಯುವಂತಾಗಿದೆ. ಮಂತ್ರಿಮಂಡಲ ಸೇರುವವರ ಪಟ್ಟಿ ಇಂತಿದೆ.

ಐಪಿಎಲ್ ಬೆಟ್ಟಿಂಗ್‌ಗೆ ಯುವಕ ಬಲಿ

ದೊಣ್ಣೆ ಮತ್ತಿತರ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಪುನೀತ್‌ಗೆ ಕೆ.ಎಂ. ದೊಡ್ಡಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಜಿಲ್ಲಾ ಎಸ್ಪಿ ಎನ್. ಸತೀಶ್, ಹೆಚ್ಚುವರಿ ಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ನವೀನ್‌ಕುಮಾರ್ ಮಾರ್ಗದರ್ಶನದಲ್ಲಿ ಮದ್ದೂರು ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ನೇತೃತ್ವದಲ್ಲಿ ರಚಿಸಲಾಗಿದ್ದ ವಿಶೇಷ ತಂಡ ರಾತ್ರೋರಾತ್ರಿ ಮಿಂಚಿನ ಕಾರ್ಯಾಚರಣೆ ನಡೆಸಿ 10 ಮಂದಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಕೂಪನ್ ಹಂಚಿ ಅಧಿಕಾರಕ್ಕೆ ಬಂದಿದೆ

ಸೋನಿಯಾ ಗಾಂಧಿ ಅವರಿಂದ ಮಾಡಿಸಿತು. ಅಲ್ಲಿ ರಾಷ್ಟ್ರಪತಿ ಅವರು ನೆನಪಿಗೆ ಬರಲಿಲ್ಲವೇ ಎಂದು ಅವರು ಪ್ರಶ್ನಿಸಿದರು. ಕರ್ನಾಟಕದಲ್ಲಿ ವಿಕಾಸಸೌಧ ಉದ್ಘಾಟನೆ ಮಾಡಲು ರಾಷ್ಟ್ರಪತಿಗಳನ್ನು ಕರೆದಿದ್ದಾರಾ. ಅಂದು ಮುಖ್ಯಮಂತ್ರಿ, ಲೋಕೋಪಯೋಗಿ ಸಚಿವರೇ ವಿಕಾಸಸೌಧವನ್ನು ಉದ್ಘಾಟನೆ ಮಾಡಲಿಲ್ಲವೇ. ಈಗ ನೋಡಿದರೆ ಆದಿವಾಸಿ ಮಹಿಳೆಯನ್ನು ಕಡೆಗಣಿಸಿದ್ದಾರೆ ಎಂದು ನಾಟಕ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಕುಟುಕಿದರು. ಮಾಜಿ ಪ್ರಧಾನಿ ದೇವೇಗೌಡರಿಗೆ ಆಹ್ವಾನ ಕಳುಹಿಸಿದ್ದಾರೆ. ಹಾಗಾಗಿ ದೇವೇಗೌಡರು ಈ ಕಾರ್ಯಕ್ರಮಕ್ಕೆ ಹೋಗುತ್ತಿದ್ದಾರೆ. ಇದರಿಂದ ಬಿಜೆಪಿ ಬಗ್ಗೆ ಜೆಡಿಎಸ್ ಮೃದು ಧೋರಣೆ ಅಂತಾ ತಿಳಿಯುವ ಅಗತ್ಯ ಇಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಪ್ರೊ.ಜಿ.ಹೆಚ್.ನಾಯಕ್ ನಿಧನ

ಪ್ರೊ ನಾಯಕ್, ಸಮಕಾಲೀನ, ಅನಿವಾರ್ಯ, ನಿರಪೇಕ್ಷೆ, ನಿಜದನಿ, ಗುಣಗೌರವ, ಹರಿಶ್ಚಂದ್ರ ಕಾವ್ಯ ಓದು–ವಿಮರ್ಶೆ, ದಲಿತ ಹೋರಾಟ: ಗಂಭೀರ ಸವಾಲುಗಳು, ಸ್ಥಿತಿಪ್ರಜ್ಞೆ, ಮತ್ತೆ ಮತ್ತೆ ಪಂಪ, ಸಾಹಿತ್ಯ ಸಮೀಕ್ಷೆ, ಉತ್ತರಾರ್ಧ ಮುಂತಾದ ಕೃತಿಗಳನ್ನು ಬರೆದಿದ್ದರಲ್ಲದೆ, ಕನ್ನಡ ಸಣ್ಣ ಕಥೆಗಳು, ಹೊಸಗನ್ನಡ ಕವಿತೆ, ಶತಮಾನದ ಕನ್ನಡ ಸಾಹಿತ್ಯ 2 ಸಂಪುಟಗಳನ್ನು ಸಂಪಾದಿಸಿದ್ದರು. ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಅವರಿಗೆ 1989 ರಲ್ಲಿ ವಿಎಂ ಇನಾಂದಾರ್ ವಿಮರ್ಶಾ ಪ್ರಶಸ್ತಿ, 1990 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, 2000 ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 2004 ರಲ್ಲಿ ಜಿ.ಎಸ್. ಶಿವರುದ್ರಪ್ಪ ವಿಮರ್ಶಾ ಪ್ರಶಸ್ತಿ, 2009 ರಲ್ಲಿ ಶಿವರಾಜ ಕಾರಂತ ಪ್ರಶಸ್ತಿ ಹಾಗೂ 2010 ರಲ್ಲಿ ಪಂಪ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಪ್ರೊ.ಜಿ.ಹೆಚ್.ನಾಯಕ್ ಅವರ ನಿಧನಕ್ಕೆ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ಡಾ.ವೈ.ಡಿ. ರಾಜಣ್ಣ, ಚಂದ್ರಶೇಖರ್, ಮಾನಸ, ಪ್ರೊ.ನೀ. ಗಿರೀಗೌಡ ಸೇರಿದಂತೆ ಹಲವು ಸಾಹಿತಿಗಳು, ವಿಮರ್ಶಕರು ತೀವ್ರ ಸಂತಾಪ ಸೂಚಿಸಿದ್ದಾರೆ.

ಜಿ.ಎಚ್.ನಾಯಕ್ ನಿಧನಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಂತಾಪ

ಖ್ಯಾತ ಲೇಖಕರು ಮತ್ತು ವಿಮರ್ಶಕರಾದ ಜಿ.ಹೆಚ್ ನಾಯಕ್ ಅವರ ನಿಧನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತಾಪ ಸೂಚಿಸಿದ್ದಾರೆ. ಕನ್ನಡದ ಲೇಖಕರು, ಸಾಹಿತ್ಯ ವಿಮರ್ಶೆ, ವಿಶ್ಲೇಷಣೆಗೆ ಹೆಸರುವಾಸಿಯಾಗಿದ್ದ ನಾಯಕ್ ಅವರ ನಿಧನದ ಸುದ್ದಿ ಕೇಳಿ ಬೇಸರವಾಗಿದೆ. ಅವರೊಬ್ಬ ನಿಷ್ಠುರ ವಿಮರ್ಶಕರು, ಪ್ರಗತಿಪರ ಚಿಂತಕರಾಗಿದ್ದವರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಸಮಕಾಲೀನ ಅನೇಕ ವಿಮರ್ಶಾ ಕೃತಿಗಳು, ಸಾಹಿತ್ಯ ಕೃತಿಗಳನ್ನು ಸಂಪಾದಿಸಿದ ನಾಯಕ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಸಾಹಿತ್ಯ ವಿಮರ್ಶೆ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಅವರ ಅಗಲಿಕೆ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ನಷ್ಟವಾಗಿದೆ. ಅವರ ಆತ್ಮಕ್ಕೆ ಸದ್ಗತಿ ಸಿಗಲಿ. ಅವರ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಅವರ ಕುಟುಂಬ ಹಾಗೂ ಆಪ್ತರಿಗೆ ಭರಿಸುವ ಶಕ್ತಿಯನ್ನು ಕರುಣಿಸುವಂತೆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಮ್ಮ ಸಂತಾಪ ನುಡಿಗಳಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ

ಕನ್ನಡದ ಖ್ಯಾತ ಲೇಖಕ ಹಾಗೂ ವಿಮರ್ಶಕ ಜಿ.ಹೆಚ್ ನಾಯಕ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯದ ವಿಮರ್ಶೆ, ವಿಶ್ಲೇಷಣೆ ಹಾಗೂ ಬರಹಲೋಕದ ಅಪರೂಪದ ವ್ಯಕ್ತಿ. ಪ್ರಗತಿಪರ ಚಿಂತಕರು, ಸೌಜನ್ಯಶೀಲ, ನಿಷ್ಠುರ ವಿಮರ್ಶಕರಾದ ನಾಯಕ್ ಅವರು ಪೂರ್ವಾಗ್ರಹವಿಲ್ಲದ ಅಪ್ಪಟ ಮಾನವೀಯ ಮನಸ್ಸುಳ್ಳವರಾಗಿದ್ದರು. ನಾಯಕ್ ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆ ಅನನ್ಯ. ಹಂಪಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಅವರ ಸೇವೆ ಗಮನಾರ್ಹವಾಗಿದೆ. ಸಮಕಾಲೀನ, ಅನಿವಾರ್ಯ ನಿರಪೇಕ್ಷ ಸೇರಿದಂತೆ ಹಲವಾರು ವಿಮರ್ಶಾ ಕೃತಿಗಳು ಹಾಗೂ ಸಾಹಿತ್ಯ ಕೃತಿಗಳನ್ನು ಸಂಪಾದಿಸಿದ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಸಾಹಿತ್ಯ ವಿಮರ್ಶೆ ಪ್ರಶಸ್ತಿಯನ್ನು ಒಳಗೊಂಡಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅವರ ನಿಧನದಿಂದ ಕನ್ನಡ ಸಾಹಿತ್ಯ ಲೋಕದ ಪ್ರಖರ ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ. ಅವರ ಕುಟುಂಬ ಹಾಗೂ ಅಪಾರ ಅಭಿಮಾನಿಗಳಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಮೈಸೂರು ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು ಮೇಳ

ಮೊದಲ ದಿನವೇ ಜನರಿಂದ ಉತ್ತಮ ಪ್ರತಿಕ್ರಿಯೆ | ಬಯಸಿದ ಮಾವು ಖರೀದಿಸಿದ ಗ್ರಾಹಕರು





ಮೈಸೂರು,ಮೇ 26 (ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆರಂಭವಾದ ಮೂರು ದಿನಗಳ ಮಾವು ಮೇಳಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ, ನೂರಾರು ಗ್ರಾಹಕರು ತಮಗಿಷ್ಟವಾದ ತಳಿಯ ಮಾವಿನಹಣ್ಣು ಖರೀದಿಸಿದರು.

ಜಿಲ್ಲಾಡಳಿತ ಹಾಗೂ ತೋಟಗಾರಿಕಾ ಇಲಾಖೆ ಆಯೋಜಿಸಿದ್ದ ಮಾವು ಮೇಳಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು. ಮೈಸೂರು, ಮಂಡ್ಯ, ರಾಮನಗರ, ಕನಕಪುರದಿಂದ 15ಕ್ಕೂ ಹೆಚ್ಚು ಮಾವು ಬೆಳೆಗಾರರು ಮೇಳದಲ್ಲಿ ಪಾಲ್ಗೊಂಡಿದ್ದು, ಒಟ್ಟು 28 ಮಳಿಗೆಗಳಲ್ಲಿ ವಿವಿಧ ತಳಿಯ ಮಾವಿನಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ.

ಯಾವುದೇ ರಾಸಾಯಿಕ ಪದಾರ್ಥ ಬಳಸದೇ, ನೈಸರ್ಗಿಕವಾಗಿ ಮಾಗಿಸಿದ ಮಾವಿನಹಣ್ಣುಗಳನ್ನೇ ಮಾರಾಟ ಮಾಡಲು ಸೂಚಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಮಾವು ಮೇಳಕ್ಕೆ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೇಳಕ್ಕೆ ಚಾಲನೆ ದೊರೆಯುವ ಮುನ್ನವೇ ಗ್ರಾಹಕರು ಮೇಳದಲ್ಲಿನ ವಿವಿಧ ಮಳಿಗೆಗಳಲ್ಲಿ ತಮಗಿಷ್ಟವಾದ ಮಾವಿನ ಹಣ್ಣನ್ನು ಖರೀದಿಸುವಲ್ಲಿ ಮಗ್ನರಾಗಿದ್ದರು. ನಿಗದಿತ ಸಮಯಕ್ಕಿಂತ ಎರಡು ಗಂಟೆ ವಿಳಂಬವಾಗಿ ಮೇಳಕ್ಕೆ ಚಾಲನೆ ದೊರೆಯಿತು. ಆದರೆ, ಉದ್ಘಾಟನೆಗೆ ಕಾಯದ ಗ್ರಾಹಕರು ಮಾವು ಖರೀದಿಸಿ ತೆರಳುತ್ತಿದ್ದರು.

ಮೇಳದಲ್ಲಿ 28 ಮಳಿಗೆಗಳನ್ನು ತೆರೆಯಲಾಗಿದ್ದು, ಅವುಗಳಲ್ಲಿ ಬಾದಾಮಿ, ಸೇಲಂ, ಶಿರಸಿ ಲೋಕಲ್, ರತ್ನಗಿರಿ, ರಸಪುರಿ, ಮಲಗೋವ, ಮಲ್ಲಿಕಾ, ಸೇಂದೂರಾ, ತೋತಾಪುರಿ, ಬೈಗಾನಪಲ್ಲಿ, ದಶೇರಿ, ಕಾಲಾಪಹಾಡ್, ಕೇಶರ್, ಸಕ್ಕರೆ ಗುತ್ತಿ, ಅಮ್ರಪಾಲಿ, ದಿಲ್‌ಪಸಂದ್ ಸೇರಿದಂತೆ ವಿವಿಧ ತಳಿಯ ಮಾವಿನ ಹಣ್ಣುಗಳನ್ನು ಮಾರಾಟಕ್ಕಿಡಲಾಗಿದೆ. ದರ ಪಟ್ಟಿಯಂತೆ ಮಾರಾಟ ಮಾಡಬೇಕಿದ್ದು, ಕಡಿಮೆ ಮತ್ತು ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ರೈತರಿಗೆ ಸೂಚಿಸಲಾಗಿದೆ.

ಮಾವು ಎಲ್ಲರಿಗೂ ಪ್ರಿಯ: ಮೇಳ ಉದ್ಘಾಟಿಸಿದ ಬಳಿಕ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಮಾವಿನ ಹಣ್ಣನ್ನು ಹಣ್ಣುಗಳ ರಾಜ ಎಂದು ಕರೆಯಲಾಗುತ್ತದೆ. ಈ ಹಣ್ಣು ಎಲ್ಲರಿಗೂ ಪ್ರಿಯವಾದ ಹಣ್ಣಾಗಿದೆ. ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಸಲುವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಮಾವು ಮೇಳ ಆಯೋಜಿಸಲಾಗಿದೆ. ಮೇಳದಲ್ಲಿ ವಿವಿಧ ಜಿಲ್ಲೆಗಳ ರೈತರು ಭಾಗವಹಿಸಿದ್ದಾರೆ. ಹಣ್ಣುಗಳನ್ನು ನೈಸರ್ಗಿಕವಾಗಿ ಮಾಗಿಸಿರುವುದರಿಂದ ಆರೋಗ್ಯಕ್ಕೂ ಒಳ್ಳೆಯದು. ಹೆಚ್ಚು ಸಾರ್ವಜನಿಕರು ಭಾಗವಹಿಸುವುದರಿಂದ ಎರಡು ಮೂರು ದಿನ ವಿಸ್ತರಿಸಿದರೆ ಒಳ್ಳೆಯದು ಎಂದರು.

ಸೇತುವೆಯಾಗಿದೆ: ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮಾತನಾಡಿ, ಈ ಮೇಳವು ಮಾವು ಬೆಳೆಗಾರರು ಹಾಗೂ ಗ್ರಾಹಕರಿಗೆ ಸೇತುವೆಯಂತೆ ಕೆಲಸ ಮಾಡುತ್ತಿದೆ. ಮಾವು ಬೆಳೆಗಾರರಿಂದಲೇ ಮಾವಿನ ಹಣ್ಣಿನ ಮಾರಾಟ ಮಾಡಿಸಲಾಗುತ್ತಿದೆ. ನೈಸರ್ಗಿಕ ಪದ್ಧತಿಯಲ್ಲಿ ಮಾಗಿಸಿದ ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದರಿಂದ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ. ವಿವಿಧ ಬಗೆಯ ಮಾವಿನಹಣ್ಣು ಒಂದೇ ಸೂರಿನಡಿ ಲಭ್ಯವಿರುವುದರಿಂದ ಗ್ರಾಹಕ ಸ್ನೇಹಿ ವಾತಾವರಣವನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಎಂ.ರುದ್ರೇಶ್, ಹಿರಿಯ ಸಹಾಯಕ ನಿರ್ದೇಶಕ ಶಶಿಧರ್, ಸಹಾಯಕ ನಿರ್ದೇಶಕರಾದ ಅಶ್ವಿನಿ, ಸಬೀನಾ, ಹಾಪ್‌ಕಾಮ್ಸ್ ಅಧ್ಯಕ್ಷ ಅಣ್ಣೇಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮಾವಿನ ಹಣ್ಣುಗಳ ದರ



ಬಾದಾಮಿ	80
ರಸಪುರಿ	70
ಮಲ್ಲಿಕಾ	70
ಸೇಂದುರ	50
ಮಲಗೋವಾ	80
ತೋತಾಪುರಿ	30
ಬೈಗಾನಪಲ್ಲಿ	45

ಸಸ್ಯ ಸಂತೆ ಪ್ರದರ್ಶನ

ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಆರಂಭಿಸಿರುವ ನರ್ಸರಿಯಲ್ಲಿ ಮಾವು ಮೇಳದ ಅಂಗವಾಗಿ ಸಸ್ಯಸಂತೆ ಮುಂದುವರೆಸಲಾಗಿದೆ. ಮಾವು ಖರೀದಿಸಲು ಬಂದ ಗ್ರಾಹಕರು ತೆಂಗು, ಸಪೋಟ, ಪಪ್ಪಾಯಿ, ಅಡಿಕೆ, ಮಾವು, ನುಗ್ಗೆ, ಸೀಬೆ, ನೇರಳೆ, ನಿಂಬೆ, ಕರಿಬೇವು, ಹಿರಳಿ, ಹುಣಸೆ, ಸೀತಾಫಲ, ಚಕ್ರಮುನಿ, ವೀಳ್ಯದೆಲೆ, ಬೆಟ್ಟದ ನೆಲ್ಲಿ, ಬೆಣ್ಣೆಹಣ್ಣು, ಹಲಸು ಸಸ್ಯಗಳನ್ನು ಪ್ರದರ್ಶಿಸಲಾಗಿದೆ. ಜತೆಗೆ ಯೂಕ, ಸ್ನೇಕ್ ಪ್ಲಾಂಟ್, ಫೈಕಸ್ ಸ್ಟಾರ್ ಲೈಟ್, ಡ್ರಸೀನಾ, ಕ್ರೋಟಾನ್, ಸಂಪಿಗೆ, ಕುಫಿಯಾ, ಲೆಮನ್ ಗ್ರಾಸ್ ಸೇರಿದಂತೆ ಹೂವಿನ ಗಿಡ, ಅಲಂಕಾರಿಕ ಗಿಡಗಳನ್ನು ಖರೀದಿಸಿದರು.

ನಾವು ನುಡಿದಂತೆ ನಡೆಯುತ್ತೇವೆ: ಶಾಸಕ ಕೆ.ಹರೀಶ್‌ಗೌಡ

ಸಂಸದ ಪ್ರತಾಪ ಸಿಂಹ ಹೇಳಿಕೆಗೆ ತಿರುಗೇಟು ನೀಡಿದ ಶಾಸಕರು

ಮೈಸೂರು, ಮೇ 26(ಎಂಟಿವೈ)– ನಮ್ಮದು ನುಡಿದಂತೆ ನಡೆಯುವ ಸರ್ಕಾರ. ನಮ್ಮ ನಾಯಕರು ನೀಡಿರುವ ಭರವಸೆಗಳನ್ನು ಈಡೇರಿಸಲು ಬದ್ಧವಾಗಿದ್ದಾರೆ. ಯಾರಿಂದಲೂ ಗಡುವು ನಮಗೆ ಅಗತ್ಯವಿಲ್ಲ ಎಂದು ಸಂಸದ ಪ್ರತಾಪ ಸಿಂಹ ಅವರಿಗೆ ಶಾಸಕ ಕೆ.ಹರೀಶ್‌ಗೌಡ ತಿರುಗೇಟು ನೀಡಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ ಕಾಯಕ್ರಮಗಳನ್ನು ಅನುಷ್ಠಾನಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಭರವಸೆ ಈಡೇರಿಸಲು ನಮ್ಮ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥ ರೀತಿಯಲ್ಲಿ ನಿಭಾಯಿಸಲಿದ್ದಾರೆ ಎಂದರು.

ಮೊದಲ ಕ್ಯಾಬಿನೆಟ್ ಸಭೆಯಲ್ಲಿ ತಾತ್ವಿಕ ಅನುಮೋದನೆ ಸಿಕ್ಕಿದೆ. ಸಚಿವ ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಗೊಂಡ ಬಳಿಕ, ಇಲಾಖಾವಾರು ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಮಾಹಿತಿ ತೆಗೆದುಕೊಂಡು ಗ್ಯಾರಂಟಿ ಯೋಜನೆಗಳನ್ನು ಮುಖ್ಯಮಂತ್ರಿಗಳು ಅನುಷ್ಠಾನಗೊಳಿಸುತ್ತಾರೆ. ಇದಕ್ಕೆ ಯಾರು ಗಡುವು ನೀಡುವ ಅಗತ್ಯವಿಲ್ಲ. ನಮ್ಮ ಸರ್ಕಾರಕ್ಕೆ ಗಡುವು ನೀಡಲು ಮುಂದಾಗಿರುವವರು ತಮ್ಮ ಸರ್ಕಾರದ ಅವಧಿಯಲ್ಲಿ ಜನರಿಗೆ ಎಷ್ಟು ಕಾರ್ಯಕ್ರಮ ತಲುಪಿಸಿದ್ದೀರಿ. ಕಳೆದ ಚುನಾವಣೆಯಲ್ಲಿ ಘೋಷಣೆ ಮಾಡಿದ್ದ ಭರವಸೆಗಳಲ್ಲಿ ಎಷ್ಟನ್ನು ಈಡೇರಿಸಿದ್ದೀರಿ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಕಿಡಿಕಾರಿದರು.

ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಏನನ್ನೂ ಮಾಡಲಿಲ್ಲ. ಕೇವಲ ಕೋಮು ದ್ವೇಷ ಹೆಚ್ಚಿಸುವ ಕೆಲಸ ಮಾಡಿದರು. ಕಾಂಗ್ರೆಸ್ ಅಭಿವೃದ್ಧಿ ಪರವಾಗಿದ್ದು, ಅಭಿವೃದ್ಧಿ ಯೋಜನೆಗಳಿಗೆ ರಾಜಕೀಯ ಮಾಡದೆ ಸಹಕಾರ ನೀಡುತ್ತೇವೆ. ಪ್ರತಾಪಸಿಂಹ ಅವರು ಮೊದಲು ಮೋದಿ ಅವರಿಂದ ಎಲ್ಲರ ಖಾತೆಗೂ 15 ಲಕ್ಷ ರೂ. ಹಾಕಿಸಲಿ. ರಾಜ್ಯಕ್ಕೆ ಬರಬೇಕಿರುವ ಅನುದಾನ ತರಲಿ ಎಂದು ತಿರುಗೇಟು ನೀಡಿದರು.

ಮಾಜಿ ಸಚಿವ ಡಾ.ಅಶ್ವಥ್‌ನಾರಾಯಣ್ ವಿರುದ್ಧ ಎಫ್‌ಐಆರ್ ದಾಖಲಿಸಿ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ ಎಂಬ ಬಿಜೆಪಿಯವರ ಆರೋಪಕ್ಕೆ ಪ್ರತಿಕ್ರಿಯಿಸಿ, ನಾವು ಯಾವುದೇ ದ್ವೇಷ ರಾಜಕಾರಣ ಮಾಡುತ್ತಿಲ್ಲ. ಪೊಲೀಸರು ಇಷ್ಟು ದಿನ ಮಲಗಿದ್ದರು. ಈಗ ಅವರನ್ನು ಎಬ್ಬಿಸಿದ್ದೇವೆ. ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಿ ಎಂದು ಹೇಳಿಕೆ ನೀಡಿದ್ದರೂ ಪೊಲೀಸರು ಎಫ್‌ಐಆರ್ ದಾಖಲಿಸಿರಲಿಲ್ಲ. ಈಗ ಕಾನೂನಾತ್ಮಕವಾಗಿ ಪ್ರಕರಣ ದಾಖಲಿಸಿದ್ದೇವೆ ಎಂದರು.

ಮೈಸೂರಿನ ಮೂವರಿಗೆ ಸಚಿವ ಸ್ಥಾನ ನೀಡಬೇಕು: ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಮೈಸೂರಿನ ಮೂವರು ಹಿರಿಯ ಶಾಸಕರಿಗೆ ಮಂತ್ರಿ ಮಾಡಬೇಕು. ಡಾ.ಹೆಚ್.ಸಿ.ಮಹಾದೇವಪ್ಪ, ಕೆ.ವೆಂಕಟೇಶ್, ತನ್ವೀರ್ ಸೇಠ್ ಅವರಿಗೆ ಮಂತ್ರಿ ಮಾಡಬೇಕು ಎಂದು ಮನವಿ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

ಪ್ರತಾಪಸಿಂಹನಿಗೆ ಕಾಂಗ್ರೆಸ್ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ

ಮೈಸೂರು, ಮೇ 26– ಸಂಸದ ಪ್ರತಾಪ ಸಿಂಹ ಅವರಿಗೆ ಕಾಂಗ್ರೆಸ್ ಸರ್ಕಾರದ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ಆಕ್ರೋಶ ವ್ಯಕ್ತಪಡಿಸಿದರು.



ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಸಾವಿರದ ಒಂದು ತೆಂಗಿನಕಾಯಿ ಒಡೆದು ಹರಕೆ ತೀರಿಸಿ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ. ನೆಹರು ಅವರಿಂದ ಮನಮೋಹನ್ ಸಿಂಗ್‌ವರೆಗೂ ಈ ದೇಶವನ್ನು ಅಭಿವೃದ್ಧಿಪಡಿಸಿದ ಪಕ್ಷ. ಬಿಜೆಪಿ ಸುಳ್ಳಿನ ಮೇಲೆ ಸುಳ್ಳು ಹೇಳುತ್ತಾ ಈ ದೇಶದ ಅಧಿಕಾರ ನಡೆಸುತ್ತಿದ್ದಾರೆ. ಕೇಂದ್ರದ ಬಿಜೆಪಿ ಸರ್ಕಾರ ಚುನಾವಣೆಯ ಮುಂಚೆ ಎಲ್ಲರ ಖಾತೆಗೆ 15 ಲಕ್ಷ ಹಾಕುತ್ತೇವೆ ಎಂದರು. ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಇಳಿಸುತ್ತೇವೆ ಎಂದರು.

ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದಿದ್ದರು. ಮಾಡಿದ್ದಾರಾ? ಪ್ರತಾಪ್‌ಸಿಂಹ ಮೊದಲು ಈ ಪ್ರಶ್ನೆಗೆ ಉತ್ತರ ಕೊಡಲಿ. 19 ಬಾರಿ ಮೋದಿ, ಅಮಿತ್ ಶಾ ಬಂದರೂ ರಾಜ್ಯದಲ್ಲಿ ಬಿಜೆಪಿ ಧೂಳೀಪಟವಾಗಿದೆ ಎಂದರೆ ಕರ್ನಾಟಕದಲ್ಲಿ ಮೋದಿ ಆಟ ನಡೆಯುವುದಿಲ್ಲ ಎಂದರ್ಥ. ಮುಂದಿನ ಲೋಕಸಭಾ ಚುನಾವಣೆಗೆ ಈ ಫಲಿತಾಂಶ ದಿಕ್ಸೂಚಿಯಾಗಲಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ನಾಯಕತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಗ್ಯಾರಂಟಿ ಭರವಸೆಗಳನ್ನು ಖಂಡಿತ ಈಡೇರಿಸುತ್ತಾರೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಜೆ. ಸತೀಶ್ ಕುಮಾರ್, ಮುಖಂಡರಾದ ಭರತ್ ಕಾಳಯ್ಯ, ನಾಡನಹಳ್ಳಿ ರವಿ, ನಾಗವಾಲ ನರೇಂದ್ರ, ಕೆರೆಹುಂಡಿ ಮಹೇಶ, ಸ್ವಾಮಿ, ಮಹದೇವ, ಖಡ್ಗ ದೇವರಾಜ್, ಮಹೇಶ್, ಶಿವರಾಜೇಗೌಡ, ಸೋಮಶೇಖರ್, ರವಿ, ಜಯಶ್ರೀ ಮರೀಗೌಡ, ಬಸವೇಗೌಡ, ಭಾಗ್ಯಮ್ಮ, ಬಸವರಾಜು ಹಾಜರಿದ್ದರು.

ಇಂದು ಖಾತೆ ಹಂಚಿಕೆಯೂ ಆಗಲಿದೆ

ಬೆಂಗಳೂರು, ಮೇ 26– ಶನಿವಾರ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ಸಂಜೆ ವೇಳೆಗೆ ಖಾತೆ ಹಂಚಿಕೆಯಾಗಲಿದೆ ಎಂದು ಸಚಿವ ಕೆಎಚ್ ಮುನಿಯಪ್ಪ ಶುಕ್ರವಾರ ಹೇಳಿದ್ದಾರೆ. ದೆಹಲಿಯಿಂದ ವಾಪಸ್ಸಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುನಿಯಪ್ಪ, ಸಚಿವ ಸಂಪುಟವು ಹಿರಿಯರು ಮತ್ತು ಯುವ ಜನರ ಮಿಶ್ರಣವಾಗಿದೆ ನಾಳೆ ಸಚಿವ ಸಂಪುಟ ವಿಸ್ತರಣೆಯಾಗಲಿದೆ. ಸಮಯವೂ ನಿಗದಿಯಾಗಿದೆ. ಸಚಿವ ಸ್ಥಾನಕ್ಕೆ ಸಂಬಂಧಿಸಿದಂತೆ ಹಿರಿಯ ನಾಯಕರು ಪಕ್ಷದ ಹೈಕಮಾಂಡ್ ಮುಂದೆ ಏನಾದರೂ ಬೇಡಿಕೆ ಇಟ್ಟಿದ್ದಾರೆಯೇ ಎಂಬ



ಪ್ರಶ್ನೆಗೆ ಉತ್ತರಿಸಿದ ಮುನಿಯಪ್ಪ ಈ ಹೊತ್ತಿನಲ್ಲಿ ಏನನ್ನೂ ಹೇಳುವುದು ಕಷ್ಟ ಆದರೆ, ನಮಗೆ ಹಿರಿಯರು ಹಾಗೂ ಯುವಕರು ಇಬ್ಬರೂ ಬೇಕು. ಎರಡನ್ನೂ ಸಮತೋಲನದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು. ಶನಿ ವಾರ ಸಂಜೆಯೊಳಗೆ ಖಾತೆ ಹಂಚಿಕೆಯನ್ನು ಪ್ರಕಟಿಸಬೇಕಾಗಿದೆ ಎಂದರು. ಮಾಜಿ ಕೇಂದ್ರ ಸಚಿವ ಮತ್ತು ಏಳು ಬಾರಿ ಲೋಕ ಸಭೆ ಸದಸ್ಯರಾಗಿರುವ ದೇವನಹಳ್ಳಿ ಶಾಸಕ ಮುನಿಯಪ್ಪ ಅವರು ಮೇ 20 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಕರ್ನಾಟಕದ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ನಾಳೆ ಶ್ರೀ ರವಿಶಂಕರ್ ಗುರೂಜಿ ಜನ್ಮದಿನದ ಪ್ರಯುಕ್ತ ಭಜನೆ



ಮೈಸೂರು,ಮೇ 26(ಪಿಎಂ)– ಆರ್ಟ್ ಆಫ್ ಲೀವಿಂಗ್ ಆಶ್ರಮದ ಸಂಸ್ಥಾಪಕ ಶ್ರೀ ರವಿಶಂಕರ್ ಗುರೂಜಿ ಅವರ ಜನ್ಮದಿನದ ಪ್ರಯುಕ್ತ ಮೇ 28ರಂದು ದಿವ್ಯ ಸತ್ಸಂಗ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಆರ್ಟ್ ಆಫ್ ಲೀವಿಂಗ್ ಮೈಸೂರು ಆಶ್ರಮದ ಶಿಕ್ಷಕ ಚೇತನ್ ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಸಂಜೆ 5.30ಕ್ಕೆ ಸತ್ಸಂಗ ಕಾರ್ಯಕ್ರಮ ನಡೆಯಲಿದೆ. ಆಶ್ರಮದ ಖ್ಯಾತ ಗಾಯಕರಾದ ಶ್ರೀನಿವಾಸ್, ಶಾಲಿನಿ ಶ್ರೀನಿವಾಸ್ ಭಜನಾ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸುಮಾರು 2 ಗಂಟೆ ಕಾಲ ಈ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು. ಆಶ್ರಮದ ರಾಜ್ಯ ಸಮಿತಿ ಸದಸ್ಯರಾದ ರವಿಕುಮಾರ್, ಮಂಜುನಾಥ್, ಅಪೂರ್ವ ಸುರೇಶ್ ಗೋಷ್ಠಿಯಲ್ಲಿದ್ದರು.

ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯ

ಮೈಸೂರು, ಮೇ 26–ನಗರದ ಯಾದವಗಿರಿಯಲ್ಲಿರುವ ಶುದ್ಧೀಕರಣಗಾರದ ಸೆಟ್ಲಿಂಗ್ ಟ್ಯಾಂಕ್‌ನ ಶುಚಿಗೊಳಿಸುವ ಮತ್ತು ಇನ್ನಿತರೆ ನಿಯತಕಾಲಿಕ ನಿರ್ವಹಣೆಯನ್ನು ಕೈಗೆತ್ತಿಕೊಳ್ಳಲಾಗುವುದರಿಂದ ಮೇ 27ರಿಂದ 30ರವರೆಗೆ ನಗರದ ಕೆಲವೆಡೆ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ. ನಗರದ ಪ್ರದೇಶಗಳಾದ ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ವೀರನಗೆರೆ, ಸಿದ್ಧಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ಚಾಮರಾಜ ಮೊಹಲ್ಲಾ, ಸುಬ್ಬರಾಯನಕೆರೆ, ಬಂಡಿಕೇರಿ, ಮೇದರಕೇರಿ, ಕಾಕರವಾಡಿ, ಬೆಸ್ತರಗೇರಿ, ಕೆ.ಜಿ.ಕೊಪ್ಪಲು, ಕಾಮಟಗೇರಿ, ಕೊಳಸಂದಿ ಬೀದಿ, ಬಿ.ಬಿ.ಕೇರಿ, ಕೈಲಾಸಪುರಂ, ಕನಕಗಿರಿ, ವಿದ್ಯಾರಣ್ಯಪುರಂ, ಅಶೋಕಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನಾಳೆ ಕೆ.ಹೆಚ್.ರಾಮಯ್ಯ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ

ಹಳೇ ವಿದ್ಯಾರ್ಥಿಗಳಲ್ಲಿ 75 ವರ್ಷ ಪೂರೈಸಿದವರಿಗೆ ಸನ್ಮಾನ

ಮೈಸೂರು,ಮೇ 26(ಪಿಎಂ)–ಕೆ.ಹೆಚ್. ರಾಮಯ್ಯ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ಹಾಗೂ ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸ್ಮರಣಾರ್ಥ ಈ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳಲ್ಲಿ 75 ವರ್ಷ ಪೂರೈಸಿದವರಿಗೆ ಸನ್ಮಾನ ಕಾರ್ಯಕ್ರಮವನ್ನು ಮೇ 28ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಮತ್ತು ಕರ್ನಾಟಕ ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಕೆ.ಹೆಚ್.ರಾಮಯ್ಯ ವಿದ್ಯಾರ್ಥಿನಿಲಯದಲ್ಲಿ ಪ್ರಸ್ತುತ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಶ್ರಯ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ. 1937ರಲ್ಲಿ ಎನ್.ಜಿ.ಗುಜ್ಜೇಗೌಡರು ಮೈಸೂರು ನಗರದ ದಾನಿಗಳ ಸಹಾಯದಿಂದ ಒಕ್ಕಲಿಗ ಸಮುದಾಯದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಈ ವಿದ್ಯಾರ್ಥಿ ನಿಲಯ ಪ್ರಾರಂಭಿಸಿದರು ಎಂದರು.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾಲೇಜಿನ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆಶಂಕರಲಿಂಗೇಗೌಡ ಸಂಘದ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಪೊಲೀಸ್ ಅಧಿಕಾರಿ ಕೆ.ಟಿ.ಬಾಲಕೃಷ್ಣ, ಆಂತರಿಕ ಭದ್ರತಾ ವಿಭಾಗದ ಮಂಗಳೂರು ಜಿಲ್ಲಾ ಎಸ್‌ಪಿ ಡಾ.ಎ.ಎನ್.ಪ್ರಕಾಶ್‌ಗೌಡ, ಮಂಡ್ಯ ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಬೆಂಗಳೂರು ನಗರ ಜಿಲ್ಲೆ ವಿಶೇಷ ಜಿಲ್ಲಾಧಿಕಾರಿ ಬಾಲಚಂದ್ರ, ರಾಜ್ಯ ಸರ್ಕಾರದ ಐಟಿ ಬಿಟಿ ನಿರ್ದೇಶಕ ಬಸವರಾಜು, ಕೆಪಿಟಿಸಿಎಲ್ ಮುಖ್ಯ ವಿಚಕ್ಷಣಾಧಿಕಾರಿ ಟಿ.ಪಿ. ಶಿವಕುಮಾರ್, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪಿ.ವಿಶ್ವನಾಥ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂತ ಫಿಲೋಮಿನಾ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೃಷ್ಣೇಗೌಡ ಮುಖ್ಯ ಭಾಷಣ ಮಾಡಲಿದ್ದಾರೆ ಇದೇ ವೇಳೆ ದಿವಂಗತ ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸ್ಮರಣಾರ್ಥ 75 ವರ್ಷ ಪೂರೈಸಿರುವ ಕೆಹೆಚ್. ರಾಮಯ್ಯ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು. ಸಂಘದ ಕಾರ್ಯದರ್ಶಿ ಕೆಂಪರಾಜೇಗೌಡ, ಖಜಾಂಚಿ ಡಾ.ಚೇತನ್, ವಿದ್ಯಾರ್ಥಿನಿಲಯದ ಟ್ರಸ್ಟಿ ಕೆ.ಟಿ.ಕೃಷ್ಣಯ್ಯ, ಹಳೇ ವಿದ್ಯಾರ್ಥಿ ಬೂಕನಕೆರೆ ವಿಜಯೇಂದ್ರ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ
ಶನಿವಾರ 27 ಮೇ 2023

ಅಧ್ವಾನವಾಗಿರುವ ನಿವೇದಿತಾ ನಗರದ ಸುಬ್ಬರಾವ್ ಉದ್ಯಾನವನ

ಹಲವಾರು ಬಾರಿ ದೂರು ಸಲ್ಲಿಸಿದರೂ ಯಾವುದೇ ಪ್ರಯೋಜನವಿಲ್ಲ



ಮೈಸೂರು, ಮೇ 26 (ಎಸ್‌ಪಿಎನ್)– ಮೈಸೂರು ನಿವೇದಿತಾ ನಗರದ ಸುಬ್ಬರಾವ್ ಉದ್ಯಾನವನ ನಗರದ ಅತ್ಯಂತ ಸುಂದರ ಉದ್ಯಾನವನ, ನಿರ್ವಹಣೆಯಲ್ಲಿ ಸೂಪರ್ ಎಂಬ ಗೌರವಕ್ಕೆ ಪಾತ್ರವಾಗಿತ್ತು ಆದರೆ ಈಗ ಈಗ ಮೂಲಸೌಕರ್ಯಗಳ ಕೊರತೆಯಿಂದ ಸೊರಗುತ್ತಿದೆ. ಈ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸುವಂತೆ ಒತ್ತಾಯಿಸಿ ಬಡಾವಣೆಯ ನಾಗರಿಕರು ಮೈಸೂರು ನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಸುಬ್ಬರಾವ್ ಉದ್ಯಾನವನ ವಿಸ್ತಾರವಾಗಿದ್ದು, ಶಾರದಾದೇವಿ ನಗರ, ಸಿಎಫ್‌ಟಿಆರ್‌ಐ ಬಡಾವಣೆ, ರಾಮಕೃಷ್ಣ ನಗರ, ನಿವೇದಿತಾ ನಗರ, ಆನಂದ ನಗರ, ಜನತಾನಗರ ಸೇರಿದಂತೆ ಸುತ್ತಮುತ್ತಲ ಬಡಾವಣೆಗೆ ಏಕೈಕ ಅತಿ ದೊಡ್ಡ ಪಾರ್ಕ್ ಇದಾಗಿದೆ. ಈ ಉದ್ಯಾನವನದಲ್ಲಿ ಯೋಗ ಮಂಟಪ, ಹಿರಿಯರ ವಿಶ್ರಾಂತಿ ಪಡೆಯಲು ಅನುಭವ ಮಂಟಪ, ಮಕ್ಕಳ ಮನರಂಜನೆಗಾಗಿ ಮ್ಯೂಸಿಕಲ್ ಫೌಂಟೆನ್, ಮಕ್ಕಳ ಆಟಿಕೆ ಮೈದಾನ, ಜಿಮ್, ವಾಕಿಂಗ್ ಪಾತ್, ರಂಗಮಂಟಪ, ಗ್ರಂಥಾಲಯ ಹಾಗೂ ಉದ್ಯಾನವನದಲ್ಲಿ ಯಾವುದೇ ಅನೈತಿಕ ಚಟುವಟಿಕೆ ತಡೆಯಲು ಸಿಸಿಟಿವಿ, ಸಂಗೀತ ಸೇರಿದಂತೆ ಇತರೆ ಸವಲತ್ತುಗಳನ್ನು ಈ ಹಿಂದೆ ಕಲ್ಪಿಸಲಾಗಿತ್ತು. ಇದೀಗ ನಿರ್ವಹಣೆ ಇಲ್ಲದ ಈ ಪಾರ್ಕ್ ಹಾಳು ಕೊಂಪೆಯಾಗಿದೆ ಎಂದು ಸಾರ್ವಜನಿಕರು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಪಾರ್ಕ್ ಅವ್ಯವಸ್ಥೆ ಕುರಿತಂತೆ ಮೈಸೂರು ನಗರ ಪಾಲಿಕೆ ಇಂಜಿನಿಯರ್ ಸುರ್ವಣ, ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ಹಲವು ಬಾರಿ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಪಾರ್ಕಿನಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಲಾಗಿದೆ. ಆದರೆ ಸಚ್ಛತೆ ಮಾಯವಾಗಿದೆ ಎಂದು ನಾಗರಿಕರು ದೂರಿದ್ದಾರೆ.

ಉದ್ಯಾನವನದ ಆವರಣದಲ್ಲಿ ಹೈಟೆಕ್ ಗ್ರಂಥಾಲಯವಿದ್ದರೂ ಇಲ್ಲಿನ ಪುಸ್ತಕಗಳ ಜೋಡಣೆಗೆ ರ್‍ಯಾಕ್ ವ್ಯವಸ್ಥೆ ಇಲ್ಲ. ಇದರಿಂದ ಅಮೂಲ್ಯ ಪುಸ್ತಕಗಳು ಒಂದು ಮೂಲೆಯಲ್ಲಿ ಮೂಟೆ ಕಟ್ಟಿ ಇಡಲಾಗಿದೆ. ಇದರಿಂದ ಓದುಗರು ಅಮೂಲ್ಯ ಪುಸ್ತಕಗಳು ಲಭ್ಯವಾಗುತ್ತಿಲ್ಲ. ಅಲ್ಲದೆ, ಗ್ರಂಥಾಲಯದ ಕಟ್ಟಡಕ್ಕೆ ನೀರಿನ ಸೌಕರ್ಯ ಕಲ್ಪಿಸಲು ಓವರ್‌ಹೆಡ್ ಟ್ಯಾಂಕ್ ಅಳವಡಿಸಿದ್ದರೂ ಇಲ್ಲಿಯವರೆಗೂ ನೀರಿನ ಸಂಪರ್ಕ ಕಲ್ಪಿಸಿಲ್ಲ ಎಂದು ಆರೋಪಿಸಿದ್ದಾರೆ.

ಈ ಉದ್ಯಾನವನದಲ್ಲಿನ ಶೌಚಾಲಯ ಸ್ವಚ್ಛತೆಗೆ ಓರ್ವ ಪೌರಕಾರ್ಮಿಕರನ್ನು ನೇಮಿಸುವಂತೆ ಪಾಲಿಕೆ ಆಯುಕ್ತರಿಗೆ, ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಹಿರಿಯ ನಾಗರಿಕ ವೇದಿಕೆಯ ಕಾರ್ಯದರ್ಶಿ ಹಾಗೂ ರೈಲ್ವೆ ಇಲಾಖೆಯ ನಿವೃತ್ತ ಡೆಪ್ಯೂಟಿ ಚೀಫ್ ಟಿಕೆಟ್ ಇನ್ಸ್‌ಪೆಕ್ಟರ್ ಬಿ.ಬಸವರಾಜು ತಿಳಿಸಿದ್ದಾರೆ.

ಮಂಡಿ ಮೊಹಲ್ಲಾದ ಚಿಕ್ಕ ಮಾರುಕಟ್ಟೆ ಬಳಿ ಪೈಪ್‌ಲೈನ್‌ನಲ್ಲಿ ಸಿಲುಕಿಕೊಂಡ ಆಟೋ



ಮೈಸೂರು, ಮೇ 26 (ಎಸ್‌ಪಿಎನ್)– ಮೈಸೂರು ಮಂಡಿ ಮೊಹಲ್ಲಾದ ಚಿಕ್ಕ ಮಾರುಕಟ್ಟೆ ಎದುರು ವಾಟರ್ ಪೈಪ್‌ಲೈನ್ ಒಡೆದು ಸದಾ ನೀರು ಹರಿದು ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ. ಈ ಜಾಗದಲ್ಲಿ ಆಟೋ ಹೂತುಕೊಂಡು ಚಾಲಕ ಪರದಾಡುತ್ತಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಮಂಡಿ ಮೊಹಲ್ಲಾದ ಚಿಕ್ಕ ಮಾರುಕಟ್ಟೆ ಬಳಿ ಗ್ರಾಹಕರೊಬ್ಬರನ್ನು ಆಟೋದಲ್ಲಿ ಬಿಡಲು ಹೋದಾಗ ವಾಟರ್ ಪೈಪ್‌ಲೈನ್ ಒಡೆದಿದ್ದ ಜಾಗದಲ್ಲಿ ಆಟೋ ಚಕ್ರ ಹೂತುಕೊಂಡಿತು. ಸ್ಥಳೀಯ ಆಟೋ ಚಾಲಕರ ಸಹಾಯದಿಂದ ಮೇಲೆ ಎತ್ತಲು ಹರಸಾಹಸ ಪಡಬೇಕಾಯಿತು ಎಂದು ಆಟೋ ಚಾಲಕ ಗಣೇಶ್ ತಮಗಾದ ತೊಂದರೆಯನ್ನು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಸಮಸ್ಯೆ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಮಾಹಿತಿ ನೀಡಿದರೂ ಏನೇನು ಸಬೂಬು ಹೇಳಿ ಫೋನ್ ಕಟ್ ಮಾಡುತ್ತಿದ್ದಾರೆ. ಈ ಸಮಸ್ಯೆ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಗಮನಹರಿಸುತ್ತಿಲ್ಲ. ದಿನನಿತ್ಯ ಓಡಾಡುವ ಪಾದಚಾರಿಗಳಿಗೆ, ವಾಹನ ಸವಾರರಿಗೆ ಈ ರೀತಿ ತೊಂದರೆ ಆಗುತ್ತಿದೆ ದುರಸ್ತಿ ಮಾಡಿಸದಿದ್ದರೆ ಏನು ಗತಿ ಎಂದು ಪ್ರಶ್ನಿಸಿದರು.

ಚುನಾವಣೆಗೂ ಮುನ್ನ ಕಾಂಗ್ರೆಸ್ ಅಭ್ಯರ್ಥಿ ಕೊಟ್ಟಿದ್ದ ಕುಕ್ಕರ್ ಸ್ಫೋಟ; ಬಾಲಕಿಗೆ ಗಾಯ

ರಾಮನಗರ, ಮೇ 26– ವಿಧಾನಸಭೆ ಚುನಾವಣೆಗೆ ಮುನ್ನ ಕಾಂಗ್ರೆಸ್ ಅಭ್ಯರ್ಥಿ ಹಂಚಿದ್ದ ಕುಕ್ಕರ್ ಅಡುಗೆ ಮಾಡುವಾಗ ಸ್ಫೋಟಗೊಂಡು ಮಹಾಲಕ್ಷ್ಮೀ ಎಂಬ ಬಾಲಕಿ ಗಾಯಗೊಂಡ ಘಟನೆ ರಾಮನಗರ ಜಿಲ್ಲೆಯ ಮಾಗಡಿ ಕ್ಷೇತ್ರ ವ್ಯಾಪ್ತಿಯ ಕೂನಮುದ್ದನಹಳ್ಳಿಯಲ್ಲಿ ನಡೆದಿದೆ. ಇದರ ಬೆನ್ನಲ್ಲೇ, ಕೂನಮುದ್ದನಹಳ್ಳಿ ನಿವಾಸಿಗಳು ಆತಂಕದಿಂದ ಕುಕ್ಕರ್‌ಗಳನ್ನು ರಸ್ತೆಗೆಸೆದಿದ್ದಾರೆ. ಪರಿಣಾಮವಾಗಿ ಅನೇಕ ಕುಕ್ಕರ್‌ಗಳು ರಸ್ತೆಯಲ್ಲಿ ಬಿದ್ದಿವೆ. ಇವುಗಳು ಹಾಲಿ ಶಾಸಕ ಬಾಲಕೃಷ್ಣ ಕಡೆಯವರು ಹಂಚಿದ್ದರು ಎಂದು ಜನ ಹೇಳುತ್ತಿದ್ದಾರೆ.

ಕುಕ್ಕರ್ ಸ್ಫೋಟದ ನಂತರ ಬೆಚ್ಚಿಬಿದ್ದ ಕೂನಮುದ್ದನಹಳ್ಳಿ ನಿವಾಸಿಗಳು ನಿಮ್ಮ ಕುಕ್ಕರ್ ಬೇಡ, ನಿಮ್ಮ ಸಹವಾಸ ನಮಗೆ ಬೇಡವೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಎಲೆಕ್ಷನ್ ಗಿಫ್ಟ್ ಕುಕ್ಕರ್ ಬಳಸಿದರೆ ನಮಗೂ ಇಂತಹ ಸ್ಥಿತಿ ಬರುತ್ತೆ ಎಂದು ಅವುಗಳನ್ನು ರಸ್ತೆಗೆ ಎಸೆದಿದ್ದಾರೆ.

ಚುನಾವಣೆಗೆ ಮುಂಚೆ ರಾಜ್ಯದ ಹಲವೆಡೆ ವಿವಿಧ ಪಕ್ಷಗಳ ಅಭ್ಯರ್ಥಿಗಳು ಕುಕ್ಕರ್ ಹಂಚಿದ್ದ ಬಗ್ಗೆ ವರದಿಗಳಾಗಿದ್ದವು. ಬೆಂಗಳೂರು, ರಾಮನಗರ, ಕೋಲಾರ, ತುಮಕೂರ ಸೇರಿದಂತೆ ಅನೇಕ ಕಡೆ ಕುಕ್ಕರ್‌ಗಳನ್ನು ಹಂಚಲಾಗಿತ್ತು. ಕೆಲವು ಕಡೆ ಈಗಾಗಲೇ ಕುಕ್ಕರ್ ಸ್ಫೋಟಗೊಂಡ ಬಗ್ಗೆಯೂ ವರದಿಯಾಗಿತ್ತು. ಇನ್ನು ಕೆಲವು ಕಡೆ ಕುಕ್ಕರ್‌ಗಳನ್ನು ಚುನಾವಣಾ ಆಯೋಗ ವಶಪಡಿಸಿಕೊಂಡಿತ್ತು.



ವಾರ್ಡ್ ನಂ.6 ಗೋಕುಲಂ ಬೃಂದಾವನ ಪಾರ್ಕ್ ಅಭಿವೃದ್ಧಿಗೆ ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಇಂಜಿನಿಯರ್ ರಾಮಣ್ಣ, ಲೊಕೇಶಣ್ಣ, ಬುಲೆಟ್ ಬಸವರಾಜ್, ಕೆಇಬಿ ಮನೋಹರ್, ಜವರಪ್ಪ, ಸಿಎಫ್‌ಟಿಆರ್‌ಐ ಮಾಜಿ ವಿಜ್ಞಾನಿ ನಾಯ್ಡು, ಮಾದೇವಣ್ಣ, ಭಾಗ್ಯಮ್ಮ, ಲಲಿತಕ್ಕ ಇನ್ನಿತರರು ಉಪಸ್ಥಿತರಿದ್ದರು.

ಮೇ 30, ವಿಶ್ವ ಸ್ಕಿಜೋಫ್ರೀನಿಯಾ ದಿನಾಚರಣೆ

ಮೈಸೂರು, ಮೇ 26– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಮೇ 30 ರಂದು ಬೆಳಗ್ಗೆ 10 ಗಂಟೆಗೆ ವಿಶ್ವ ಸ್ಕಿಜೋಫ್ರೀನಿಯಾ ದಿನಾಚರಣೆ–2023 ಹಾಗೂ ಜಾಗೃತಿ ಕಾರ್ಯಕ್ರಮವನ್ನು ವೈದ್ಯರ ಭವನದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ. ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಕೆ.ಹೆಚ್. ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆ ಹಾನಿ ವೇಳೆ ತುರ್ತಾಗಿ ಸ್ಪಂದಿಸಿ: ಡಿಸಿ ಡಾ.ಕೆ.ವಿ.ರಾಜೇಂದ್ರ ಸೂಚನೆ

● ಏಪ್ರಿಲ್‌ಗಿಂತ ಮೇ ತಿಂಗಳಲ್ಲಿ ಉತ್ತಮ ಮಳೆ ● ಮಳೆಯಿಂದ ಬೆಳೆ ಹಾನಿಯಾದವರಿಗೆ ಪರಿಹಾರ ● ವಿದ್ಯುತ್ ಕಂಬ, ತಂತಿ ಸರಿಪಡಿಸಲು ಸೂಚನೆ



ಮೈಸೂರು, ಮೇ 26(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಮಳೆ ಹಾನಿಗೆ ತುರ್ತಾಗಿ ಸ್ಪಂದಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ದುರಂತಗಳು ಸಂಭವಿಸುವುದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಲ್ಲಿ ಶೇ.30 ಕೊರತೆ ಇತ್ತು. ಆದರೆ ಮೇ ತಿಂಗಳಲ್ಲಿ ಉತ್ತಮ ಮಳೆಯಾಗಿದೆ. ಅದರಲ್ಲೂ 30–40 ಕಿ.ಮೀ ವೇಗದ ಗಾಳಿಯೊಂದಿಗೆ ಮಳೆ ಬಿದ್ದಿದೆ. ಇದರಿಂದ ಕೆಲವೆಡೆ ಹಾನಿಯಾಗಿದೆ. 250 ಹೆಕ್ಟೇರ್‌ಗಿಂತಲೂ ಹೆಚ್ಚಿನ ತೋಟಗಾರಿಕಾ ಬೆಳೆ ಹಾನಿಯಾಗಿದೆ. ಕೆಲವೆಡೆ ಬಾಳೆ, ತರಕಾರಿ ಬೆಳೆ ನಾಶವಾಗಿದೆ. ತೋಟಗಾರಿಕೆ ಹಾಗೂ ಕಂದಾಯ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಸರ್ವೆ ಮಾಡಿ, ರೈತರಿಗೆ ಆದ ನಷ್ಟದ ಬಗ್ಗೆ ಮಾಹಿತಿ ಪಡೆಯಲಾಗುತ್ತದೆ ಅಲ್ಲದೆ, ಎನ್‌ಡಿಆರ್‌ಎಫ್ ಗೈಡ್ಲೈನ್‌ನಲ್ಲಿ ಅನ್ವಯ ಪರಿಹಾರ ನೀಡಲಾಗುತ್ತದೆ. ಈಗಾಗಲೇ ಬೆಳೆ ನಷ್ಟಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲು ಸರ್ಕಾರ 'ಪರಿಹಾರ ಪೋರ್ಟಲ್' ತೆರೆದಿದೆ. ಅದರಲ್ಲಿ ನಷ್ಟದ ಪ್ರಮಾಣ ನಮೂದು ಮಾಡಲಾಗುತ್ತದೆ ಎಂದು ವಿವರಿಸಿದರು.

ನದಿ ಪಾತ್ರದಲ್ಲಿ ಕಟ್ಟೆಚ್ಚರ

ಜಿಲ್ಲೆಯ ವ್ಯಾಪ್ತಿಯಲ್ಲಿ ಕಬಿನಿ ಹಾಗೂ ನುಗು ಡ್ಯಾಂ ಬರುತ್ತದೆ. ಕಳೆದ ಬಾರಿ ಕಬಿನಿಯಿಂದ 1.20 ಲಕ್ಷ ಕ್ಯುಸೆಕ್ ನೀರು ಬಿಟ್ಟಾಗ ಕೆಲವು ಪ್ರದೇಶಕ್ಕೆ ನೀರು ನುಗ್ಗಿತ್ತು. ಅಂತಹ ಸ್ಥಳವನ್ನು ಪರಿಶೀಲನೆ ಮಾಡಲಾಗಿದೆ. ಏಕಾಏಕಿ ದೊಡ್ಡ ಪ್ರಮಾಣದಲ್ಲಿ ನೀರನ್ನು ಹೊರಗೆ ಬಿಡುವುದಿಲ್ಲ. ಹಂತ ಹಂತವಾಗಿ ಬಿಡಲಾಗುತ್ತದೆ. ಹಾಗಾಗಿ ಪರಿಸ್ಥಿತಿ ಅವಲೋಕಿಸಿ, ಹೆಚ್ಚು ನೀರು ಬಿಡುಗಡೆ ಮಾಡುವ ಪರಿಸ್ಥಿತಿ ಒದಗಿ ಬಂದರೆ ನದಿ ಪಾತ್ರದ ಜನರನ್ನು ಸ್ಥಳಾಂತರ ಮಾಡಲಾಗುವುದು. ಕಾಳಜಿ ಕೇಂದ್ರ ತೆರೆಯುವುದಕ್ಕೂ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಮೈಸೂರಿಗೆ ಕುಡಿಯುವ ನೀರು ಪೂರೈಸುವ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿದ್ದರೂ, ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ.

ಜಿಲ್ಲೆಯಲ್ಲಿ ಕಳೆದ ಒಂದು ವಾರದಲ್ಲಿ ಗಾಳಿಯೊಂದಿಗೆ ಸುರಿದ ಮಳೆಗೆ 234 ಮನೆಗಳು ಭಾಗಶಃ ಹಾನಿಯಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಮನೆಗಳಿಗೆ ಆಗಿರುವ ಹಾನಿ ಬಗ್ಗೆ ಮಾಹಿತಿ ಪಡೆಯಲು ಪಿಡಿಓ, ಗ್ರಾಮಲೆಕ್ಕಿಗ ಹಾಗೂ ಓರ್ವ ಇಂಜಿನಿಯರ್‌ವುಳ್ಳ ತಂಡ ರಚಿಸಲಾಗಿದೆ. ಅಲ್ಲದೆ, ಮನೆ ಹಾನಿಯಾದವರಿಗೆ 48 ಗಂಟೆಯಲ್ಲಿಯೇ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಸಭೆ ನಡೆಸಿ ಜಿಲ್ಲೆಯಲ್ಲಿರುವ ಚರಂಡಿ ಸ್ವಚ್ಛಗೊಳಿಸಲು ಸೂಚನೆ ನೀಡಲಾಗಿದೆ. ಮಳೆ ಅನಾಹುತ ನಡೆಸಿದ್ದ ಪ್ರದೇಶವನ್ನು ಗುರಿಯಾಗಿಸಿಕೊಂಡು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. 2019–20ರಲ್ಲಿ ಮಳೆ ಅನಾಹುತ ವಾಗಿರುವ ಸ್ಥಳಗಳನ್ನು ಗಮನಿಸಿ, ಅಲ್ಲಿ ಘಟನೆ ಮರುಕಳಿಸದಂತೆ ಕಟ್ಟೆಚ್ಚರವಹಿಸಲು ಸೂಚಿಸಲಾಗಿದೆ ತಗ್ಗು ಪ್ರದೇಶಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ. ಮಳೆ ನೀರು ನುಗ್ಗಿದರೆ, ಸಂತ್ರಸ್ತರ ರಕ್ಷಣೆಗಾಗಿ ಕಾಳಜಿ ಕೇಂದ್ರ ತೆರೆಯಲು ನಿರ್ದೇಶನ ನೀಡಲಾಗಿದೆ ಎಂದರು.

ಚೆಸ್ಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಜಿಲ್ಲೆಯಲ್ಲಿ ಬಾಗಿರುವ ಅಥವಾ ಬಿದ್ದಿರುವ ವಿದ್ಯುತ್ ಕಂಬ, ವಿದ್ಯುತ್ ತಂತಿ, ದೋಷಪೂರಿತ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗೆ ಸೂಚನೆ ನೀಡಲಾಗಿದೆ. ಅಲ್ಲದೆ, ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಸಂದರ್ಭದಲ್ಲಿ ಸುರಕ್ಷಿತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಕಾಮಗಾರಿ ನಡೆಯುವ ಸ್ಥಳದಲ್ಲಿ ಸೂಚನಾ ಫಲಕ ಅಳವಡಿಸಿ, ಅವಘಡ ತಡೆಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ ಎಂದು ತಿಳಿಸಿದರು.

ಕಳೆದವಾರ ಸುರಿದ ಮಳೆಗೆ ಜಿಲ್ಲೆಯಲ್ಲಿ ಮೂವರು ಮೃತಪಟ್ಟಿದ್ದಾರೆ. ಇಬ್ಬರು ಸಿಡಿಲು ಬಡಿದು ಸಾವಿಗೀಡಾಗಿದ್ದರೆ, ಓರ್ವ ಮಹಿಳೆ ಮಳೆಯಿಂದ ಆಶ್ರಯ ಪಡೆಯುತ್ತಿದ್ದ ವೇಳೆ ಚಾವಣಿ ಕುಸಿದು ಮೃತಪಟ್ಟಿದ್ದಾರೆ. 8 ಜಾನುವಾರುಗಳು ಮೃತಪಟ್ಟಿವೆ. ಇದರ ಮಾಲೀಕರಿಗೆ ಪರಿಹಾರ ನೀಡಲು ಸೂಚನೆ ನೀಡಲಾಗಿದೆ ಎಂದರು.

ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಇದೆ: ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗೆ ಅಗತ್ಯವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ದಾಸ್ತಾನು ಮಾಡಲಾಗಿದೆ. ಅಗತ್ಯಕ್ಕೆ ಅನುಗುಣವಾಗಿ ದಾಸ್ತಾನು ಮಾಡಲಾಗಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ. ಈಗಾಗಲೇ ವಿವಿಧ ತಾಲೂಕುಗಳಿಗೆ ತೆರಳಿ ಪರಿಶೀಲಿಸಿದ್ದೇನೆ. ಕೆಲವೆಡೆ ಗೊಂದಲವಿದೆ ಅದನ್ನು ಬಗೆಹರಿಸಲು ಆಯಾ ತಾಲೂಕಿನ ತಹಶೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಪರಿಹಾರಕ್ಕೆ ಪ್ರಸ್ತಾವನೆ: ಕಳೆದ ಸಾಲಿನಲ್ಲಿ ಜಿಲ್ಲೆಯಲ್ಲಿ 1200 ಮನೆಗಳಿಗೆ ಹಾನಿಯಾಗಿದೆ ಎಂದು ಸರ್ಕಾರಕ್ಕೆ ವರದಿ ಕಳುಹಿಸಲಾಗಿತ್ತು. ಆದರೆ, ಆ ವರದಿಯಲ್ಲಿ ಕೆಲವರು ತಾವೇ ಮನೆ ಬೀಳಿಸಿಕೊಂಡಿರುವುದು, ಮತ್ತೆ ಕೆಲವರು ಒತ್ತಡಕ್ಕೆ ಮಣಿದು ಪರಿಹಾರಕ್ಕಾಗಿ ಹೆಸರು ಸೇರಿಸಿದ್ದಾರೆಂಬ ಮಾಹಿತಿ ಬಂದ ಹಿನ್ನೆಲೆಯಲ್ಲಿ ನೈಜವಾಗಿ ಮನೆ ಕಳೆದುಕೊಂಡಿರುವವರ ಪಟ್ಟಿ ತಯಾರಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಸ್ಪಷ್ಟನೆ ನೀಡಿದರು.

ರಸ್ತೆಗಳು ಸುರಕ್ಷಿತ ಪ್ರಯಾಣಕ್ಕೆ ಅನುಕೂಲಕಾರಿಯಾಗಿರಬೇಕು

ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸಲಹೆ

ಮೈಸೂರು, ಮೇ 26– ರಸ್ತೆಗಳು ಸುರಕ್ಷಿತ ಪ್ರಯಾಣಕ್ಕೆ ಅನುಕೂಲವಾಗಿರಬೇಕು. ಇದರಿಂದ ಅಪಘಾತಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂದಿನ ಒಂದು ವಾರದಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿದ್ದು, ಮಳೆ ಸಂದರ್ಭದಲ್ಲಿ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿರಬೇಕು. ಸಿಗ್ನಲ್ ಲೈಟ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಪ್ರಯಾಣಿಕರು ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ತಿಳಿಸಿದರು.

ಪ್ರತಿಯೊಂದು ಜೀವವೂ ಅಮೂಲ್ಯವಾದದ್ದು, ಅಪಘಾತಗಳು ಕಡಿಮೆ ಮಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಿ, ಅಗತ್ಯ ಇರುವೆಡೆ ಸ್ಪೀಡ್ ಬ್ರೇಕರ್‌ಗಳನ್ನು ಅಳವಡಿಸಿ. ಪೀಪಲ್ಸ್ ಪಾರ್ಕ್ ಸೇರಿದಂತೆ ಅಗತ್ಯ ಇರುವೆಡೆ ಹೈ–ಮಾಸ್ಟ್‌ಲೈಟ್‌ಗಳನ್ನು ಅಳವಡಿಸುವಂತೆ ಹಾಗೂ ರಸ್ತೆಗಳಲ್ಲಿ ಹಂಪ್ಸ್‌ಗಳನ್ನು ಸರಿಯಾಗಿ ನಿರ್ವಹಿಸಿ ಎಂದು ನ್ಯಾಷನಲ್ ಹೈವೇ ಅಥಾರಿಟಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಅತೀ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಿ, ಜಿಲ್ಲೆಯಲ್ಲಿ ಮಾರ್ಚ್ ತಿಂಗಳಲ್ಲಿ ಅಪಘಾತಗಳಿಂದ 47 ಜನ ಮರಣ ಹೊಂದಿದ್ದಾರೆ. ಏಪ್ರಿಲ್ ತಿಂಗಳಲ್ಲಿ 37 ಅಪಘಾತಗಳು ಹಾಗೂ ನಗರ ವ್ಯಾಪ್ತಿಯಲ್ಲಿ 11 ಮಾರಣಾಂತಿಕ ಅಪಘಾತಗಳು ಸಂಭವಿಸಿದ್ದು, 50 ಜನ ಸಾವನ್ನಪ್ಪಿದ್ದಾರೆ. ಆದ್ದರಿಂದ ಪ್ರಯಾಣಿಕರು ಸುರಕ್ಷತಾ ಕ್ರಮಗಳನ್ನು ತಪ್ಪದೇ ಪಾಲಿಸಬೇಕು. ದ್ವಿ ಚಕ್ರ ವಾಹನ ಚಾಲಕರು ಹೆಲ್ಮೆಟ್ ಧರಿಸಿ, ಇತರೆ ವಾಹನ ಚಾಲಕರು ಸೀಟ್ ಬೆಲ್ಟ್ ಹಾಕಿಕೊಂಡು ವಾಹನ ಚಲಾಯಿಸುವಂತೆ ಜಾಗೃತಿ ಮೂಡಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಉಪ ಪೊಲೀಸ್ ಆಯುಕ್ತರಾದ ಜಾಹ್ನವಿ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ರಾಜು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಜೂ.9ಕ್ಕೆ ದರ್ಬಾರ್ ತೆರೆಗೆ



ಮೈಸೂರು,ಮೇ 26(ಪಿಎಂ)– ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ರಾಜಕೀಯ ವಿಡಂಬನಾತ್ಮಕ ಕಥಾಹಂದರ ಹೊಂದಿರುವ ಕನ್ನಡ ಸಿನಿಮಾ 'ದರ್ಬಾರ್' ಜೂ.9ಕ್ಕೆ ತೆರೆ ಕಾಣಲಿದೆ ಎಂದು ಸಿನಿಮಾದ ನಿರ್ದೇಶಕ, ಸಂಗೀತ ನಿರ್ದೇಶಕ ವಿ.ಮನೋಹರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿನಿಮಾ ಹಾಸ್ಯಮಯವಾಗಿದ್ದು, ಅತ್ಯುತ್ತಮ ಸಂದೇಶ ರವಾನಿಸಲಿದೆ. ಸತೀಶ್ ನಾಯಕ ನಟರಾಗಿ ಹಾಗೂ ಜಾಹ್ನವಿ ನಾಯಕ ನಟಿಯಾಗಿ ಅಭಿನಯಿಸಿದ್ದು, ನಾನು ತುಂಬ ವರ್ಷಗಳ ನಂತರ ನಿರ್ದೇಶನ ಮಾಡಿದ ಸಿನಿಮಾ ಇದಾಗಿದೆ ಎಂದರು. ಸಿನಿಮಾದ ನಾಯಕ ನಟ ಸತೀಶ್, ಕಲಾವಿದರಾದ ರಾಜಗುರು ನಾಗೇಂದ್ರ, ಜಯರಾಮ್, ಶಿವು ಬಾಲಾಜಿ, ಬಸವರಾಜಗೌಡ, ಶಂಕರ್, ಮಂಜುನಾಥ್ ಗೋಷ್ಠಿಯಲ್ಲಿದ್ದರು.

ನಾಯಿ ತಳಿ ಸಂವರ್ಧನೆ, ಮಾರಾಟಕ್ಕೆ ನೋಂದಣಿ ಕಡ್ಡಾಯ

ಮೈಸೂರು, ಮೇ 26– ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ ಮತ್ತು ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳಿಂದ ಪಡೆಯುವ ಮುನ್ನ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯಿದೆ (ನಾಯಿ ತಳಿ ಸಂವರ್ಧನೆ ಮತ್ತು ಮಾರಾಟ ನಿಯಮ 2017 ಮತ್ತು ಮುದ್ದಿನ ಪ್ರಾಣಿ ಮಳಿಗೆ ನಿಯಮ 2018)ಯ ಸೆಕ್ಷನ್ 3, 4 ಮತ್ತು 5 ರ ಅಡಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.

ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ, ಸಂಸ್ಥೆಗಳು ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನದೊಳಗೆ ಭರ್ತಿ ಮಾಡಿದ ನಮೂನೆ (FORM-I) ಯಲ್ಲಿ ಅಗತ್ಯ ದಾಖಲಾತಿಗಳು ಹಾಗೂ ನಿಗದಿಪಡಿಸಿದ ಶುಲ್ಕದೊಂದಿಗೆ ನೋಂದಣಿ ಮಾಡಿಸಿಕೊಳ್ಳಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ www.kawb.karnataka.nic.in ವೆಬ್‌ಸೈಟ್ ಅಥವಾ ದೂ.ಸಂ: 080–29901411 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪ್ರಾಣಿ ದಯಾ ಸಂಘದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಚಾಲಕನಿಗೆ ತೀವ್ರ ಗಾಯ

ಮೈಸೂರು, ಮೇ 26– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ತೀವ್ರವಾಗಿ ಗಾಯಗೊಂಡ ಘಟನೆ ಚಾಮುಂಡಿಬೆಟ್ಟದಲ್ಲಿ ಸಂಭವಿಸಿದೆ.

ಅಪಘಾತದಲ್ಲಿ ಗಾಯಗೊಂಡಿದ್ದ ಬೈಕ್ ಸವಾರನನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ತಮ್ಮ ಕಾರಿನಲ್ಲೇ ಖಾಸಗಿ ಆಸ್ಪತ್ರೆಗೆ ದಾಖಲಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ವಿವರ: ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ಯೋಗೇಶ್ ಅಪಘಾತದಲ್ಲಿ ಗಾಯಗೊಂಡವರಾಗಿದ್ದು, ಇವರು ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಬೈಕ್‌ನಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳುತ್ತಿದ್ದರು. ಈ ವೇಳೆ ಬೆಟ್ಟದಿಂದ ಹಿಂತಿರುಗುತ್ತಿದ್ದ ತಮಿಳುನಾಡಿನ ಕಾರೊಂದು ತಿರುವಿನಲ್ಲಿ ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಯೋಗೇಶ್ ಕಾಲು ಮುರಿದು ತೀವ್ರವಾಗಿ ಗಾಯಗೊಂಡು ನರಳಾಡುತ್ತಿದ್ದರು. ನೆರೆದಿದ್ದ ಸಾರ್ವಜನಿಕರು ಆಂಬುಲೆನ್ಸ್‌ಗಾಗಿ ಕಾಯುತ್ತಿದ್ದಾಗ ಆ ಮಾರ್ಗವಾಗಿ ವಾಯು ವಿಹಾರಕ್ಕೆ ಬಂದ ಎಂ.ಕೆ. ಸೋಮಶೇಖರ್ ತಕ್ಷಣವೇ ಅವರ ಕಾರು ಚಾಲಕ ವಿಶ್ವನಾಥ್ ಅವರಿಂದ ಕಾರು ತರಿಸಿಕೊಂಡು ಗಾಯಾಳು ಯೋಗೇಶ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಅಲ್ಲದೇ, ಚಿಕಿತ್ಸೆಗಾಗಿ ಯೋಗೇಶ್‌ಗೆ ಹಣ ನೀಡುವಂತೆ ಕಾರು ಚಾಲಕನಿಗೆ ಸೂಚಿಸಿದರು. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಇಎಸ್‌ಐ ಆಸ್ಪತ್ರೆಯ ಅತ್ಯಾಧುನಿಕ ಸೌಲಭ್ಯ ಪರಿಶೀಲಿಸಿದ ಪ್ರತಾಪ್ ಸಿಂಹ



ಮೈಸೂರು, ಮೇ 26 (ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಕಾರ್ಮಿಕರ ರಾಜ್ಯ ವಿಮಾ (ESI) ಆಸ್ಪತ್ರೆಗೆ 5 ಕೋಟಿ ರೂ. ಮೌಲ್ಯದ ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳನ್ನು ಒದಗಿಸಲಾಗಿದೆ.

ರೋಗಿಗಳ ಅನುಕೂಲಕ್ಕಾಗಿ ಹಳೇ ಕಟ್ಟಡ ನೆಲಸಮಗೊಳಿಸಿ ಹೊಸದಾಗಿ ಸುಸಜ್ಜಿತ ಇಎಸ್‌ಐ ಆಸ್ಪತ್ರೆ ಕಟ್ಟಡ ನಿರ್ಮಿಸಲಾಗಿತ್ತಾದರೂ, ಆಪರೇಷನ್ ಥಿಯೇಟರ್ (OT)ಗೆ ಬೇಕಾದ ವೈದ್ಯಕೀಯ ಸಲಕರಣೆ (OT Equipments) ಗಳನ್ನು ಒದಗಿಸದಿದ್ದ ಕಾರಣ ಶಸ್ತ್ರಚಿಕಿತ್ಸಾ ವ್ಯವಸ್ಥೆ ಲಭ್ಯವಾಗಿರಲಿಲ್ಲ.

ಆಸ್ಪತ್ರೆ ವೈದ್ಯರು ಸಲ್ಲಿಸಿದ್ದ ಬೇಡಿಕೆ ಪ್ರಸ್ತಾವನೆಯಂತೆ ಸಂಸದ ಪ್ರತಾಪ್ ಸಿಂಹ ಕೇಂದ್ರ ಸರ್ಕಾರದ ಗಮನಸೆಳೆದು ಮೈಸೂರಿನ ಇಎಸ್‌ಐ ಆಸ್ಪತ್ರೆಗೆ ಓಟಿ ಸಲಕರಣೆಗಳು, ಅನಸ್ತೇಷಿಯಾ, ಎಂಡೋಸ್ಕೋಪಿ, ಲ್ಯಾಪ್ರೋಸ್ಕೋಪಿ, ಇಎನ್‌ಟಿ ವರ್ಕ್ ಸ್ಟೇಷನ್ ಸೇರಿದಂತೆ ಹೊಸ ವೈದ್ಯಕೀಯ ಉಪಕರಣಗಳು ಹಾಗೂ ಒಂದು ಸುಸಜ್ಜಿತ ಆಂಬುಲೆನ್ಸ್ ಮಂಜೂರು ಮಾಡಿಸಿದ್ದಾರೆ.

ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿ, ಉಪ ಕರಣಗಳು ಹಾಗೂ ಆಂಬುಲೆನ್ಸ್ ವೀಕ್ಷಿಸಿದ ಪ್ರತಾಪ್ ಸಿಂಹ, ರೋಗಿಗಳಿಗೆ ಸೌಲಭ್ಯ ಇಲ್ಲ ಎಂದು ಹೇಳಿ ಖಾಸಗಿ ಆಸ್ಪತೆಗಳಿಗೆ ರೆಫರ್ ಮಾಡಿ ಕಳುಹಿಸದೇ ಇಲ್ಲಿಯೇ ಗುಣಮಟ್ಟದ ಚಿಕಿತ್ಸಾ ಸೇವೆ ಒದಗಿಸಿ ಎಂದು ವೈದ್ಯರಿಗೆ ಸೂಚನೆ ನೀಡಿದರು.

ಇದೇ ವೇಳೆ ಟೆಕ್ನೀಷಿಯನ್‌ಗಳು, ಪ್ಯಾರಾ ಮೆಡಿಕಲ್ ಸಿಬ್ಬಂದಿಗಳನ್ನು ನೇಮಿಸುವ ಅಗತ್ಯವಿದೆ ಎಂದು ಆಸ್ಪತ್ರೆ ವೈದ್ಯರು ಕೇಳಿಕೊಂಡ ಹಿನ್ನೆಲೆಯಲ್ಲಿ ಪ್ರಸ್ತಾವನೆ ಸಲ್ಲಿಸಿ ಅದರ ಮಾಹಿತಿ ನೀಡಿದಲ್ಲಿ ತಕ್ಷಣವೇ ಮಂಜೂರಾತಿ ಮಾಡಿಸಿ ಕೊಡುತ್ತೇನೆಂದು ಸಂಸದರು ತಿಳಿಸಿದರು.

ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಚಂದ್ರಕಲಾ, ವೈದ್ಯರಾದ ಡಾ. ಶಿವಕುಮಾರ್, ಡಾ. ಮಾದೇಗೌಡ, ಡಾ. ಚಂದ್ರಹಾಸ, ಕಾರ್ಮಿಕ ಮುಖಂಡ ಸಿದ್ದರಾಜು ಸೇರಿದಂತೆ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಅಶೋಕಪುರಂ ರೈಲು ನಿಲ್ದಾಣ ಆಗಸ್ಟ್ 15ರೊಳಗೆ ಸುಸಜ್ಜಿತ

ಸಂಸದ ಪ್ರತಾಪ್ ಸಿಂಹರಿಂದ ವಿವಿಧ ಕಾಮಗಾರಿ ಪರಿಶೀಲನೆ



ಮೈಸೂರು, ಮೇ 26(ಆರ್‌ಕೆ)– ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದ ವಿಸ್ತರಣೆ ಹಾಗೂ ಅಭಿವೃದ್ಧಿ ಕಾಮಗಾರಿಯನ್ನು ಮುಂದಿನ ತಿಂಗಳೊಳಗಾಗಿ ಪೂರ್ಣಗೊಳಿಸಿ ಆಗಸ್ಟ್ 15ರ ಸ್ವಾತಂತ್ರ್ಯ ದಿನದಂದು ಉದ್ಘಾಟಿಸಿ ಸಾರ್ವಜನಿಕರ ಸೇವೆಗೆ ಲೋಕಾರ್ಪಣೆ ಮಾಡಲು ಸಜ್ಜುಗೊಳಿಸುವಂತೆ ರೈಲ್ವೇ ಇಲಾಖೆ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ನಿರ್ದೇಶನ ನೀಡಿದಾರೆ.

ಪ್ರಗತಿಯಲ್ಲಿರುವ ಅಶೋಕಪುರಂ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿ ವೀಕ್ಷಿಸಿದ ಅವರು, ಆಗಸ್ಟ್ 15ರಂದೇ ಪ್ರಯಾಣಿಕರ ಸೇವೆಗೆ ಸೌಲಭ್ಯ ಲೋಕಾರ್ಪಣೆ ಮಾಡಲು ಸಿದ್ಧತೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಪ್ರಸ್ತುತ ಇರುವ 3 ಪ್ಲಾಟ್‌ಫಾರಂ ಜೊತೆಗೆ ಹೆಚ್ಚುವರಿಯಾಗಿ ಎರಡು ಪ್ಲಾಟ್‌ಫಾರಂ ಅನ್ನು ಹೊಸದಾಗಿ ರೈಲ್ವೇ ಇಲಾಖೆಯಿಂದ ನಿರ್ಮಿಸಲಾಗುತ್ತಿದೆ.

ಅದೇ ರೀತಿ ಅಶೋಕಪುರಂ–ಚಾಮರಾಜನಗರ ಮಾರ್ಗಕ್ಕೆ ಸಂಪರ್ಕ ಕಲ್ಪಿಸಲು ಹೆಚ್ಚುವರಿ ಹಳಿ ನಿರ್ಮಾಣ, ಅಶೋಕಪುರಂ ರೈಲು ನಿಲ್ದಾಣ (ಪೂರ್ವ ಭಾಗ)ದಲ್ಲಿರುವ ಪ್ರವೇಶದ ಜೊತೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಪಶ್ಚಿಮ ಭಾಗದ ಪಂಪಾಪತಿ ರಸ್ತೆಗೆ ಅಭಿಮುಖವಾಗಿ ಮತ್ತೊಂದು ಪ್ರವೇಶ (Entry) ಕಲ್ಪಿಸಿ, ಅಲ್ಲೇ ಟಿಕೆಟ್ ನೀಡಲು ಕೌಂಟರ್ ತೆರೆಯುವುದಕ್ಕೆ ಸಿದ್ಧತೆ ಮಾಡಲಾಗುತ್ತಿದೆ.

ಇದರಿಂದಾಗಿ ರೈಲ್ವೆ ಸ್ಟೇಷನ್ ಎದುರಿನ ವಸತಿ ಬಡಾವಣೆಗಳಿಂದ ಬರುವ ಪ್ರಯಾಣಿಕರು ಫುಟ್ ಓವರ್ ಬ್ರಿಡ್ಜ್ (FOB) ಮೇಲೆ ಬಂದು ಟಿಕೆಟ್ ಪಡೆದು ರೈಲು ಹತ್ತಲು ಉಂಟಾಗುತ್ತಿದ್ದ ತೊಂದರೆ ನಿವಾರಣೆಯಾಗಲಿದೆ. ಶ್ರೀರಾಂಪುರ, ಜೆ.ಪಿ.ನಗರ, ವಿದ್ಯಾರಣ್ಯಪುರಂ, ದಟ್ಟಗಳ್ಳಿ, ಕುವೆಂಪುನಗರ ಕಡೆಯಿಂದ ಬರುವವರು ಪಶ್ಚಿಮ ಭಾಗದ ಎರಡನೇ ಪ್ರವೇಶದಲ್ಲೇ ಟಿಕೆಟ್ ಪಡೆದು ರೈಲಿನಲ್ಲಿ ಪ್ರಯಾಣಿಸಲು ಅನುಕೂಲವಾಗಲಿದೆ.

ರೈಲುಗಳಿಗೆ ಪಾರ್ಕಿಂಗ್, ಸ್ವಚ್ಛತೆ, ವಾಹನ ನಿಲುಗಡೆ ಸೌಲಭ್ಯ, ಫುಟ್ ಓವರ್ ಬ್ರಿಡ್ಜ್ ಸೇರಿದಂತೆ ಅಗತ್ಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿ, ರೈಲು ನಿಲ್ದಾಣದ ವಿಸ್ತರಣೆ ಕಾಮಗಾರಿ ತೀವ್ರ ಗತಿಯಿಂದ ನಡೆಯುತ್ತಿದ್ದು, ಈಗಾಗಲೇ ಶೇ.80ಷ್ಟು ಕೆಲಸ ಮುಗಿದಿದೆ ಎಂದು ರೈಲ್ವೇ ಅಧಿಕಾರಿಗಳು ಸಂಸದರಿಗೆ ವಿವರಿಸಿದರು.

ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಸೀನಿಯರ್ ಡಿವಿಜನಲ್ ಇಂಜಿನಿಯರ್ (ಕೋ–ಆರ್ಡಿನೇಷನ್) ರವಿಚಂದ್ರನ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೇಶವಮೂರ್ತಿ ಹಾಗೂ ಇತರರು ಕಾಮಗಾರಿ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಮಳೆ ಹಿನ್ನೆಲೆ

ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಮುಂಜಾಗ್ರತೆ ಕೈಗೊಳ್ಳಿ

ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಶಾಸಕ ಡಿ. ರವಿಶಂಕರ್ ಸೂಚನೆ



ಕೆ.ಆರ್.ನಗರ, ಮೇ 26– ಅವಳಿ ತಾಲೂಕಿನಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಜನರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಶಾಸಕ ಡಿ.ರವಿಶಂಕರ್ ಸೂಚನೆ ನೀಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳಲ್ಲಿ ಮಳೆಯಿಂದ ಅತಿವೃಷ್ಟಿ ಉಂಟಾಗಿ ಮನೆ, ಬೆಳೆ ಹಾನಿ ಹಾಗೂ ಇತರ ಅವಘಡ ಸಂಭವಿಸುವ ಮುನ್ನ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದರು.

ಮಳೆ ಗಾಳಿಗೆ ಮರ ಮತ್ತು ವಿದ್ಯುತ್ ಕಂಬಗಳು ರಸ್ತೆಗೆ ಬಿದ್ದು ಸಂಚಾರಕ್ಕೆ ತೊಂದರೆಯಾಗದಂತೆ ಇಲಾಖಾವಾರು ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕು. ವಿದ್ಯುತ್ ಇಲ್ಲದೆ ಒಂದೇ ಒಂದು ಗಂಟೆ ಕಳೆಯಲು ಸಾಧ್ಯವಿಲ್ಲ. ಇದನ್ನರಿತು ಚೆಸ್ಕಾಂ ಅಧಿಕಾರಿಗಳು ತ್ವರಿತವಾಗಿ ವಿದ್ಯುತ್ ಸರಬರಾಜು ಮಾಡಲು ಬದಲಿ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಿದರು.

ಮೇ 29 ರಿಂದ ಶಾಲೆಗಳು ಆರಂಭವಾಗಲಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಥಲ ಕಟ್ಟಡಗಳನ್ನು ಪರಿಶೀಲಿಸಿ ಮತ್ತು ಮುಖ್ಯ ಶಿಕ್ಷಕರ ಸಭೆ ನಡೆಸಿ ಮಕ್ಕಳಿಗೆ ತೊಂದರೆಯಾಗದಂತೆ ಸಕಲ ಸಿದ್ಧತೆ ಮಾಡಿಕೊಳ್ಳಬೇಕು. ಶಾಲಾರಂಭಕ್ಕೆ ತಾವು ಭೇಟಿ ನೀಡುವುದಾಗಿ ತಿಳಿಸಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತಾಲೂಕು 9ನೇ ಸ್ಥಾನದಲ್ಲಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಡಿ.ರವಿಶಂಕರ್ ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಆಗ್ಗಿಂದಾಗೆ ಸಿಆರ್‌ಪಿ ಮತ್ತು ಬಿಆರ್‌ಸಿ ಸೇರಿದಂತೆ ಮುಖ್ಯ ಶಿಕ್ಷಕರ ಸಭೆ ನಡೆಸಿ ಈ ಸಾಲಿನಲ್ಲಿ ಕನಿಷ್ಠ 3ನೇ ಸ್ಥಾನ ಪಡೆಯಲು ಪ್ರಯತ್ನ ಮಾಡಬೇಕು ಎಂದು ತಾಕೀತು ಮಾಡಿದರು.

ಸಾರಿಗೆ ಸಿಬ್ಬಂದಿಗಳು ಬಸ್‌ಪಾಸ್ ಹೊಂದಿರುವ ಶಾಲಾ ಕಾಲೇಜು ವಿದ್ಯಾರ್ಥಿಗಳ ಪ್ರಯಾಣಕ್ಕೆ ಅನಗತ್ಯ ತೊಂದರೆ ನೀಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಘಟಕದ ವ್ಯವಸ್ಥಾಪಕ ಮಹೇಶ್ ಸೂಕ್ತ ಕ್ರಮ ವಹಿಸಬೇಕು. ಶಾಲಾ ಕಾಲೇಜು ವೇಳೆ ಎಲ್ಲಾ ಗ್ರಾಮಗಳಿಗೂ ಹೆಚ್ಚು ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಆದೇಶಿಸಿದರು.

ಮುಂದೆ ನಡೆಯುವ ಸಭೆಗಳಿಗೆ ಆಯಾ ಇಲಾಖೆ ಮುಖ್ಯಸ್ಥರು ಹಾಜರಿರಬೇಕು. ಸಭೆಗೆ ಗೈರು ಹಾಜರಾದ ಮತ್ತು ಬದಲಿ ಅಧಿಕಾರಿಗಳನ್ನು ಕಳುಹಿಸುವ ಮುಖ್ಯಸ್ಥರಿಗೆ ನೋಟಿಸ್ ನೀಡುವಂತೆ ತಹಸೀಲ್ದಾರ್‌ಗೆ ಸೂಚಿಸಿದರು.

ನಾಲೆಗಳಿಗೆ ನೀರು ಹರಿಸುವ ಮುನ್ನಾ ನೀರಾವರಿ ಇಲಾಖೆ ಅಧಿಕಾರಿಗಳು ಪ್ರಾರಂಭದಿಂದ ನಾಲೆ ಕೊನೆವರೆಗೆ ಏರಿ ಮೇಲೆ ಸಂಚರಿಸಿ ಸಣ್ಣಪುಟ್ಟ ದುರಸ್ಥಿಗಳನ್ನು ಸರಿಪಡಿಸಿ ನಾಲೆಯಲ್ಲಿರುವ ಗಿಡಗಂಟಿಗಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ರೈತರಿಗೆ ತೊಂದರೆ ನೀಡುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರಾಗಿದ್ದು, ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರುವುದರಿಂದ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ತರಲು ಯಾವುದೇ ಸಮಸ್ಯೆ ಇಲ್ಲ. ಅಧಿಕಾರಿಗಳು ಇದನ್ನು ಮನಗಂಡು ಕೆಲಸ ಮಾಡಬೇಕು. ಇಲಾಖಾವಾರು ಆಗ ಬೇಕಿರುವ ಕಾಮಗಾರಿಗಳ ಬಗ್ಗೆ ಅಂದಾಜು ಪಟ್ಟಿ ತಯಾರಿಸಿ ವಾರದೊಳಗೆ ಸಲ್ಲಿಸುವಂತೆ ತಿಳಿಸಿದರು. ಈ ವೇಳೆ ತಹಸೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್, ತಾಪಂ ಇಓ ಬಿ.ಕೆ.ಮನು, ಸಾಲಿಗ್ರಾಮ ತಹಸೀಲ್ದಾರ್‌ಗಳಾದ ತಿಮ್ಮಪ್ಪ ಕೆಎನ್.ಮೋಹನ್‌ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ, ಹಾರಂಗಿ ಇಲಾಖೆ ಇಇ ಈರಣ್ಣನಾಯಕ, ಎಇಇಗಳಾದ ಈಶ್ವರ್, ಗುರುರಾಜ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಂದ್ರಪ್ಪ, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಎಂ.ಎಸ್.ನಾಗೇಂದ್ರ, ಜಿಪಂ ಎಇಇ ವಿನೂತ್, ಲೋಕೋಪಯೋಗಿ ಇಲಾಖೆ ಎಇಇ ವಿಜಯಕುಮಾರ್, ಚೆಸ್ಕಾಂ ಎಇಇಗಳಾದ ಅರ್ಕೇಶ್ ಮೂರ್ತಿ, ಮಧುಸೂದನ್, ಆರ್‌ಎಫ್‌ಓ ರಶ್ಮಿ, ಬಿಇಓ ಟಿ.ಎನ್. ಗಾಯಿತ್ರಿ, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರಸನ್ನ, ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ತಾಪಂ ಮೇಲ್ವಿಚಾರಕ ಕರೀಗೌಡ ಸೇರಿದಂತೆ ಮತ್ತಿತರರಿದ್ದರು.

> ❛ ಎಷ್ಟೋ ಅಧಿಕಾರಿಗಳ ಬಳಿ ನನ್ನ ಮೊಬೈಲ್ ನಂಬರ್ ಇಲ್ಲ. ತಾಲೂಕಿನ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಗೆ ಕರೆ ಮಾಡಿದರೆ ಯಾರು ಹೇಳಿ ಎನ್ನುತ್ತಿದ್ದಾರೆ. ನಾಳೆಯಿಂದ ಈ ರೀತಿಯ ತಪ್ಪುಗಳು ಆಗದಂತೆ ಎಚ್ಚರ ವಹಿಸಿ.
>
> –ಡಿ.ರವಿಶಂಕರ್, ಶಾಸಕರು.

ಕಾರ್ಯಕರ್ತರು ಪಕ್ಷದ ಬಲವರ್ಧನೆ ಶ್ರಮಿಸಿ



ಮೂಗೂರು, ಮೇ 26– ಮುಂಬರುವ ಜಿಪಂ, ತಾಪಂ ಚುನಾವಣೆಗೆ ಪಕ್ಷದ ಬಲವರ್ಧನೆ ಹಾಗೂ ಅಭ್ಯರ್ಥಿಗಳ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು ತಿಳಿಸಿದರು.

ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಹೆಚ್.ಸಿ. ಮಹದೇವಪ್ಪ ಜಯಗಳಿಸಿದ ಹಿನ್ನೆಲೆಯಲ್ಲಿ ಮೂಗೂರು ಹೋಬಳಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು, ಡಾ.ಮಹದೇವಪ್ಪನವರು ಸಚಿವರಾಗುವುದರಿಂದ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಮಾದರಿ ಕ್ಷೇತ್ರವನ್ನಾಗಿಸಲು ಪಣ ತೊಟ್ಟಿದ್ದಾರೆ. ಕ್ಷೇತ್ರದ ಪ್ರತಿ ಹಳ್ಳಿಗಳಲ್ಲಿ ಅಗತ್ಯವಿರುವ ಕೆಲಸ ಕಾರ್ಯಗಳ ಬಗ್ಗೆ ಕಾರ್ಯಕರ್ತರು ಗಮನಹರಿಸಬೇಕು. ಅಭಿವೃದ್ಧಿಯತ್ತ ಎಲ್ಲರೂ ಕೈ ಜೋಡಿಸಿ ಎಂದರು.

ಇದೇ ವೇಳೆ ಮುಖಂಡರಾದ ಮಹದೇವಸ್ವಾಮಿ, ನಟರಾಜ್, ಚಿನ್ನಸ್ವಾಮಿ, ಸಿದ್ದಪ್ಪಸ್ವಾಮಿ, ರೇವಣ್ಣ, ವೆಂಕಟೇಶ್, ಮಹೇಶ್, ಪ್ರಕಾಶ್, ಬಸವರಾಜು, ಕುಮಾರ್, ರಾಜು, ಮರಿಸ್ವಾಮಿ, ಇತರರಿದ್ದರು.

ಸರ್ಕಾರಿ ಶಾಲೆಯಲ್ಲಿ ಶೌಚಾಲಯ ಉದ್ಘಾಟನೆ



ನಂಜನಗೂಡು, ಮೇ 26– ನಗರದ ಅಶೋಕಪುರಂ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ನೆಸ್ಲೆ ಕಾರ್ಖಾನೆ ತನ್ನ ಸಿಎಸ್‌ಆರ್ ಅನುದಾನದ 3.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಅನುದಾನದಲ್ಲಿ ನೆಸ್ಲೆ ಕಾರ್ಖಾನೆ ಸಮುದಾಯಕ್ಕೆ ಅವಶ್ಯವಿರುವ ಶೌಚಾಲಯ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ, ಶಾಲಾ ಕಾಲೇಜುಗಳಿಗೆ ಪರಿಕರಗಳನ್ನು ಒದಗಿಸುವ ಸೇವೆಯಲ್ಲಿ ತೊಡಗಿರುವುದು ಉತ್ತಮ ಬೆಳವಣಿಗೆ. ಇದರಿಂದ ಸಾಮಾಜಿಕ ಕೊಡುಗೆ ನೀಡಿದಂತಾಗಿದೆ. ಈ ನಿಟ್ಟಿನಲ್ಲಿ ನೆಸ್ಲೆ ಕಾರ್ಖಾನೆ 16344 ಶೌಚಾಲಯ, 16523 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿದೆ ಜೊತೆಗೆ ಪೌಷ್ಠಿಕ ಆಹಾರ ಕಿಟ್ ವಿತರಣೆ, ಕೃಷಿ ವಿಶ್ವವಿದ್ಯಾಲಯದ ಜೊತೆ ಒಪ್ಪಂದ ಮಾಡಿಕೊಂಡು ಕೃಷಿ ಕ್ಷೇತ್ರಕ್ಕೂ ಕೊಡುಗೆ ನೀಡುತ್ತಿರುವುದು ಕಂಪನಿಗೆ ಸಮಾಜದ ಮೇಲಿರುವ ಸೇವಾ ಮನೋಭಾವವನ್ನು ತೋರಿಸುತ್ತದೆ. ತಾಲೂಕಿನ ಹಲವು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ತೊಂದರೆ ಇದ್ದು, ನೆಸ್ಲೆ ಕಾರ್ಖಾನೆ ಆ ತೊಂದರೆ ನಿವಾರಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಮುಖ್ಯಶಿಕ್ಷಕ ಮುದ್ದು ಮಾದೇಗೌಡ ಮಾತನಾಡಿ, ನೆಸ್ಲೆ ಕಾರ್ಖಾನೆ ತಮ್ಮ ಸಿಎಸ್‌ಆರ್ ಅನುದಾನದಲ್ಲಿ ಶಾಲೆಗೆ ಬೇಕಾಗಿರುವ ಡೆಸ್ಕ್‌ಗಳನ್ನು ಕೊಡುಗೆಯಾಗಿ ನೀಡಬೇಕು. ಶಾಲಾ ಕಟ್ಟಡಕ್ಕೆ ಬಣ್ಣ ಬಳಿಸಿಕೊಡಬೇಕೆಂದು ಮನವಿ ಮಾಡಿಕೊಂಡರು.

ಇದೇ ಸಂದರ್ಭ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ನೆಸ್ಲೆ ಕಾರ್ಖಾನೆ ವ್ಯವಸ್ಥಾಪಕ ಶ್ರೀನಿವಾಸಮೂರ್ತಿ, ಬಿಇಓ ಶಿವಲಿಂಗಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ನಗರಸಭಾ ಸದಸ್ಯೆ ಮಂಗಳಾ, ಮುಖಂಡರಾದ ದೇವರಾಜು, ಸುಂದರಾಜು ಇತರರಿದ್ದರು.

ಎಲ್ಲಾ ವರ್ಗದವರು ಸ್ವಾವಲಂಬಿ ಜೀವನ ನಡೆಸಲು

ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ: ಹೆಚ್.ಸಿ.ಮಹದೇವಪ್ಪ



ತಿ.ನರಸೀಪುರ, ಮೇ 26– ದಲಿತರು, ಹಿಂದುಳಿದವರು, ರೈತರು, ಪ.ಜಾತಿ ಸೇರಿದಂತೆ ಎಲ್ಲಾ ವರ್ಗದವರು ಸ್ವಾವಲಂಬಿ ಜೀವನ ನಡೆಸಲು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಶಾಸಕ ಡಾ. ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ತಮ್ಮ ನಿವಾಸದಲ್ಲಿ ಮಾತನಾಡಿದ ಅವರು, ರಾಜ್ಯದ ಯಾವುದೇ ಕುಟುಂಬ ತಾವು ಜೀವನ ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿಗೆ ಬರಬಾರದು ಎಂಬ ದೃಷ್ಟಿಯಿಂದ ನಾನು ಮತ್ತು ಸಿದ್ದರಾಮಯ್ಯ ಹಲವು ಜನೋಪಯೋಗಿ ಯೋಜನೆಗಳ ಜಾರಿಗೆ ಮುಂದಾಗಿದ್ದೇವೆ. ಗೃಹ ಜ್ಯೋತಿ ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ಮನೆ ಯಜಮಾನಿಗೆ 2 ಸಾವಿರ ರೂ., ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿಯೊಬ್ಬರಿಗೂ ತಿಂಗಳಿಗೆ 10 ಕೆಜಿ ಅಕ್ಕಿ ಹಾಗೂ ಯುವನಿಧಿ ಯೋಜನೆಯಡಿ ಪದವೀಧರರಿಗೆ 3 ಸಾವಿರ ಹಾಗೂ ಡಿಪ್ಲೊಮಾ ಪದವೀಧರರಿಗೆ 1500 ರೂ. ನೀಡುವ ಉದ್ದೇಶ ಹೊಂದಲಾಗಿದ್ದು, ಈ ಯೋಜನೆಗಳು ಸಚಿವ ಸಂಪುಟ ರಚನೆ ಬಳಿಕ ಜಾರಿಗೆ ಬರುತ್ತದೆ. ಇದನ್ನು ಹೊರತುಪಡಿಸಿ ಸ್ತ್ರೀ ಶಕ್ತಿ ಸಂಘದ ಸಾಲಗಳು, ಎಸ್‌ಸಿ, ಎಸ್ಟಿ ಸಮುದಾಯಕ್ಕೆ ನೀಡುವ ಸವಲತ್ತುಗಳು ಇದ್ದೇ ಇರುತ್ತವೆ ಎಂದರು.

ಇದೇ ವೇಳೆ ಪುರಸಭಾ ಸದಸ್ಯ ಸಿ. ಪ್ರಕಾಶ್ ಹಾಗೂ ಇತರರು ಶಾಸಕರಾದ ದರ್ಶನ್ ಧ್ರುವನಾರಾಯಣ್ ಹಾಗೂ ಹೆಚ್.ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಿದರು. ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್. ಹಿರಿಯೂರು ಸೋಮಣ್ಣ ಇತರರಿದ್ದರು.

ವ್ಯಕ್ತಿ ನಾಪತ್ತೆ

ಮೈಸೂರು, ಮೇ 26– ಸರಗೂರು ಠಾಣೆ ವ್ಯಾಪ್ತಿಯಲ್ಲಿ ಫೀರ್(54) ಎಂಬವರು ಫೆ.2ರಿಂದ ಕಾಣೆಯಾಗಿದ್ದಾರೆ. ಸುಮಾರು ನಾಲ್ಕೂವರೆ ಅಡಿ ಎತ್ತರವಿದ್ದು, ಕೋಲು ಮುಖ ಹೊಂದಿದ್ದಾರೆ. ಬುದ್ದಿಮಾಂದ್ಯ ವ್ಯಕ್ತಿಯಾಗಿರುವ ಇವರು ಮನೆ ಬಿಟ್ಟಾಗ ಕಾಫಿ ಬಣ್ಣದ ಪ್ಯಾಂಟ್, ಬಿಳಿ ಬಣ್ಣದ ಶರ್ಟ್ ಧರಿಸಿದ್ದಾರೆ ಹಾಗೂ ಕನ್ನಡ ಮತ್ತು ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಇವರ ಸುಳಿವು ಸಿಕ್ಕವರು ಸರಗೂರು ಠಾಣೆಯ ದೂ.ಸಂ:08228–265542 ಅನ್ನು ಸಂಪರ್ಕಿಸಬಹುದು.

ರೋಗಿಗಳ ಸೇವೆ ನನ್ನ ಮುಖ್ಯ ಧ್ಯೇಯ

ಗರ್ಗೇಶ್ವರಿ ಪಿಹೆಚ್‌ಸಿ ನೂತನ ವೈದ್ಯಾಧಿಕಾರಿ ಡಾ.ಸುಹಾಸ್



ತಿ.ನರಸೀಪುರ, ಮೇ 26– ನಾನು ಇಲ್ಲಿವರೆಗೆ ಸೇವೆ ಸಲ್ಲಿಸಿರುವ ಗ್ರಾಮಗಳಲ್ಲಿ ಪ್ರಾಮಾಣಿಕವಾಗಿ ಜನರ ಸೇವೆ ಮಾಡಿದ್ದೇನೆ. ರೋಗಿಗಳ ಸೇವೆಯೇ ನನ್ನ ಮುಖ್ಯ ಧ್ಯೇಯ ಎಂದು ಗರ್ಗೇಶ್ವರಿ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ವೈದ್ಯಾಧಿಕಾರಿ ಡಾ.ಸುಹಾಸ್ ತಿಳಿಸಿದರು.

ಇಲ್ಲಿನ ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಾನು ತಾಲೂಕಿನ ಜನರಿಗೆ ಉತ್ತಮ ಸೇವೆ ನೀಡಲು ಬಂದಿದ್ದೇನೆ. ರೋಗಿಗಳು ಯಾವುದೇ ಸಮಸ್ಯೆಗಳಿದ್ದರೂ, ನನ್ನನ್ನು ನೇರವಾಗಿ ಸಂಪರ್ಕ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಸಲಹೆ ನೀಡಿದರು.

ಜೆಡಿಎಸ್ ರಾಜ್ಯ ವಕ್ತಾರ ತಾಯೂರು ಪ್ರಕಾಶ್ ಮಾತನಾಡಿ, ಈ ಹಿಂದೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಪ್ರಭುಸ್ವಾಮಿಯವರು ತಮ್ಮ ಸೇವಾವಧಿಯಲ್ಲಿ ಉತ್ತಮ ಕೆಲಸ ಮಾಡಿ ಸಾರ್ವಜನಿಕರ ಪ್ರಶಂಸೆಗೆ ಒಳಗಾಗಿದ್ದರು. ಅವರ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ನಂಜನಗೂಡು ತಾಲೂಕಿನ ಕಸುವಿನಹಳ್ಳಿಯಲ್ಲಿ ಹಾಗೂ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿ ಅನುಭವವಿರುವ ಡಾ.ಎಸ್. ಸುಹಾಸ್ ಅವರು ನಿಯೋಜನೆಗೊಂಡಿದ್ದಾರೆ. ನೂತನ ವೈದ್ಯಾಧಿಕಾರಿಗಳು ಈ ಭಾಗದ ಜನತೆಗೆ ಉತ್ತಮ ಆರೋಗ್ಯ ಸೇವೆ ಸಲ್ಲಿಸಿ ಜನತೆಯ ಪ್ರಶಂಸೆಗೆ ಪಾತ್ರವಾಗುವ ಮೂಲಕ ಮತ್ತಷ್ಟು ಉನ್ನತ ಹುದ್ದೆಗೇರಲಿ ಎಂದು ಹಾರೈಸಿದರು.

ಮಹರ್ಷಿ ವಾಲ್ಮೀಕಿ ಟ್ರಸ್ಟ್ ವೈದ್ಯರಿಗೆ ಸನ್ಮಾನ ಮಾಡುವ ಮೂಲಕ ಅವರ ಜವಾಬ್ದಾರಿ ಹೆಚ್ಚುವಂತೆ ಹಾಗೂ ಅವರು ಉತ್ಸಾಹದಿಂದ ಕೆಲಸ ಮಾಡಲು ಪ್ರೇರೇಪಿಸುತ್ತದೆ ಎಂದರು.

ಈ ವೇಳೆ ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಪೂರಿಗಾಲಿ ಗ್ರಾಪಂ ಅಧ್ಯಕ್ಷ ಚಿಕ್ಕಬಸವರಾಜು, ಸದಸ್ಯ ಜಗದೀಶ್ ನಾಯಕ್, ಟ್ರಸ್ಟ್ ಪದಾಧಿಕಾರಿಗಳಾದ ರವೀಶ್, ಮಂಜು, ವೆಂಕಟರಾಜು, ದೇವರಾಜು, ನಾಗಣ್ಣ, ಮಹದೇವ, ರವಿ, ಮುರುಳಿ, ತುಂಬಲ ಸುರೇಶ್, ಆಸ್ಪತ್ರೆ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ದಿನೇಶ್ ಕುಮಾರ್, ಪ್ರಯೋಗ ಶಾಲೆ ತಂತ್ರಜ್ಞೆ ನಸೀಮ ಅಖ್ತರ್, ಸಿಹೆಚ್‌ಓ ರೂಪಶ್ರೀ, ಸಿಬ್ಬಂದಿಗಳಾದ ದೇವರಾಜು, ಮಂಜುನಾಥ್ ಹಾಜರಿದ್ದರು.

ಸಂಗೀತ ತರಬೇತಿ

ಮೈಸೂರು, ಮೇ 26– ಮೈಸೂರಿನ ಶ್ರೀನಿಕೇತನ ಸಂಗೀತ ಸಂಸ್ಥೆಯು ಜೂನ್ ತಿಂಗಳಲ್ಲಿ ಕರ್ನಾಟಕ ಶಾಸ್ತ್ರೀಯ ಗಾಯನ, ಕೀಬೋರ್ಡ್, ಮ್ಯಾಂಡೋಲಿನ್ ಮತ್ತು ಗಿಟಾರ್ ವಾದ್ಯ ಸಂಗೀತ ತರಬೇತಿಯನ್ನು ಆರಂಭಿಸಲಾಗುವುದು. ಸಂಗೀತ ತರಬೇತಿಯು ಸಂಜೆ 6 ರಿಂದ 7 ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 7892498367 ಸಂಪರ್ಕಿಸಬಹುದು.



ಹೆಚ್.ಡಿ.ಕೋಟೆ ತಾಲೂಕಿನ ಯರಹಳ್ಳಿ ಗ್ರಾಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಹಾಗೂ ಸಿಬ್ಬಂದಿ ಲಾರ್ವ ಪರಿಶೀಲನೆ ನಡೆಸಿದರು. ಈ ವೇಳೆ ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ನಾಗೇಂದ್ರ, ರವಿರಾಜ್, ರಾಜಶೇಖರ್, ಲಕ್ಷ್ಮಿ, ಆಶಾ ಕಾರ್ಯಕರ್ತೆಯರು ಇನ್ನಿತರರಿದ್ದರು.

ದನಗಾಹಿ ಮೇಲೆ ಹುಲಿ ದಾಳಿ



ನಂಜನಗೂಡು, ಮೇ 26– ದನಗಾಹಿ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ಹಾದನೂರು ಒಡೆಯನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ವಿಷಕಂಠ(45) ಹುಲಿ ದಾಳಿಯಿಂದ ಗಾಯಗೊಂಡವರು. ಈತ ತನ್ನ ಜಮೀನಿನಲ್ಲಿ ಇಂದು ದನಗಳನ್ನು ಮೇಯಿಸುತ್ತಿದ್ದ ವೇಳೆ ಹುಲಿ ಏಕಾಏಕಿ ದಾಳಿ ನಡೆಸಿ ವಿಷಕಂಠನ ಎದೆ, ಬೆನ್ನು ಹಾಗೂ ಕೈ ಗಾಯಗೊಳಿಸಿದೆ. ಈ ವೇಳೆ ಈತನ ಚೀರಾಟದಿಂದ ಹುಲಿ ಅಲ್ಲಿಂದ ಓಡಿ ಹೋಗಿದ್ದು, ವಿಷಕಂಠ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ತೀವ್ರ ಗಾಯಗೊಂಡ ಈತನನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಾದನೂರು ಭಾಗದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ರೈತರು ಜಮೀನು ಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಮನುಷ್ಯರ ಮೇಲೆ ದಾಳಿ ಮಾಡುತ್ತಿರುವ ಹುಲಿಯನ್ನು ಅರಣ್ಯ ಇಲಾಖೆ ಸೆರೆ ಹಿಡಿಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ರೈತರ ಆರ್ಥಿಕ ಸಧೃಡತೆಗೆ ಇ–ಕೆವೈಸಿ ಅಗತ್ಯ



ಹೆಚ್.ಡಿ.ಕೋಟೆ, ಮೇ 26– ರೈತರ ಆರ್ಥಿಕ ಸಧೃಡತೆಗೆ ಇ–ಕೆವೈಸಿ ಅಗತ್ಯ ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ರಂಗಸ್ವಾಮಿ ತಿಳಿಸಿದರು.

ಪಟ್ಟಣದ ಕೃಷಿ ಇಲಾಖೆ ಕಚೇರಿಯಲ್ಲಿ ರೈತರಿಗೆ ಇ–ಕೆವೈಸಿ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಅವರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ನೆರವು ಪಡೆಯಲು ರೈತರು ಇ–ಕೆವೈಸಿ ಮಾಡಿಸುವುದು ಅಗತ್ಯ. ಹೀಗಾಗಿ ರೈತರು ಕೂಡಲೇ ನಿಮ್ಮ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ ಹಾಗೂ ರೈತ ಸಂಪರ್ಕ ಕೇಂದ್ರದಲ್ಲಿ ನಿಮ್ಮ ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿಸತಕ್ಕದ್ದು. ಒಂದು ವೇಳೆ ಇ–ಕೆವೈಸಿ ಮಾಡಿಸದಿದ್ದರೇ 14ನೇ ಕಂತಿನ ಹಣ ಬಿಡುಗಡೆ ಆಗುವುದಿಲ್ಲ ಆದ್ದರಿಂದ ಕೂಡಲೇ ರೈತರು ಮೊಬೈಲ್ ಸಂಖ್ಯೆಯನ್ನು ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಿಸಬೇಕು ಎಂದರು. ಮಾಹಿತಿಗೆ ಡಾ.ಡಿ.ಪಿ.ರಾಜೇಶ್ ಮೊ.8453782414 ಸಂಪರ್ಕಿಸಬಹುದು.

ನಂಜನಗೂಡು ಅಭಿವೃದ್ಧಿಯೇ ನನ್ನ ಗುರಿ: ಶಾಸಕ ದರ್ಶನ್



ನಂಜನಗೂಡು, ಮೇ 26– ಚುನಾವಣೆಯಲ್ಲಿ ಗೆಲ್ಲಿಸಿರುವ ಕ್ಷೇತ್ರದ ಮತದಾರರ ಋಣ ತೀರಿಸಲು ಕ್ಷೇತ್ರವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸುವುದೇ ನನ್ನ ಗುರಿ ಎಂದು ನೂತನ ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಬಳಿಕ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕರ್ತರು ಚುನಾವಣೆ ಆರಂಭದಿಂದಲೂ ಸಹ ಬಿಸಿಲು, ಮಳೆ ಲೆಕ್ಕಿಸದೇ ಶ್ರಮಿಸುವ ಮೂಲಕ ದಾಖಲೆಯ 47,607 ಮತಗಳ ಅಂತರದಿಂದ ನನ್ನನ್ನು ಜಯಶೀಲರನ್ನಾಗಿ ಮಾಡಿದ್ದೀರಿ. ಇದಕ್ಕೆ ನಾನು ಕ್ಷೇತ್ರದ ಜನತೆ ಹಾಗೂ ಕಾರ್ಯಕರ್ತರಿಗೆ ಚಿರಋಣಿಯಾಗಿರುತ್ತೇನೆ. ಚುನಾವಣೆಯಲ್ಲಿ ಜೆಡಿಎಸ್ ವರಿಷ್ಠರು ಅಭ್ಯರ್ಥಿ ಹಾಕದೇ ಬೆಂಬಲ ಸೂಚಿಸಿದ್ದಾರೆ. ಜೊತೆಗೆ ರೈತ ಸಂಘ, ಕಾರ್ಮಿಕ ಸಂಘಟನೆ, ಮಹಿಳಾ ಸಂಘಟನೆ ಸೇರಿದಂತೆ ತಾಲೂಕಿನ ಎಲ್ಲಾ ಸಂಘ ಸಂಸ್ಥೆಗಳು ನನ್ನ ಪರ ಕೆಲಸ ಮಾಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಭ್ರಷ್ಟ ಸರ್ಕಾರದ ವಿರುದ್ಧ ದನಿ ಎತ್ತಿ ಉತ್ತಮ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಗಿರುವ ನಿಮ್ಮ ಸೇವಕನಾಗಿ ಕ್ಷೇತ್ರವನ್ನು ಯಾವ ರೀತಿ ಅಭಿವೃದ್ಧಿಪಡಿಸಬೇಕು. ಯಾವ ಕೆಲಸ ಮಾಡಬೇಕು ಎಂಬುದರ ಬಗ್ಗೆ ಜನಾಭಿಪ್ರಾಯ ಪಡೆದು ಮಾದರಿ ಕ್ಷೇತ್ರವನ್ನಾಗಿಸಲು ಪ್ರಯತ್ನ ಮಾಡುತ್ತೇನೆ. ಯಾವುದೇ ಸಮಸ್ಯೆಗಳಿದ್ದರೂ ಸಾರ್ವಜನಿಕರು ನನ್ನನ್ನು ನೇರವಾಗಿ ಹಾಗೂ ದೂರವಾಣಿ ಮೂಲಕ ಸಂಪರ್ಕಿಸಬಹುದು ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಅವರಿಗೆ ದಾಖಲೆ ಮತಗಳನ್ನು ನೀಡಿದ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನೂತನ ಶಾಸಕರು ವಾರದಲ್ಲಿ ಒಂದು ದಿನ ಬೆಳಗ್ಗೆಯಿಂದ ಸಂಜೆವರೆಗೆ ನಗರದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ ಪರಿಹರಿಸಲಿದ್ದಾರೆ. ಅಲ್ಲದೇ ತಾಲೂಕು ಪಂಚಾಯಿತಿಯಲ್ಲಿರುವ ಶಾಸಕರ ಕಚೇರಿಗೆ ಆಗಮಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದರು.

ಇದೇ ವೇಳೆ ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ನೂತನ ಶಾಸಕರನ್ನು ಅಭಿನಂದಿಸಿದರು. ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯರಾದ ಲತಾ, ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲೀಂ, ಮುಖಂಡರಾದ ನಂದಕುಮಾರ್, ಎನ್.ಟಿ.ಗಿರೀಶ್, ದೊರೆಸ್ವಾಮಿ ನಾಯಕ, ನಾಗರಾಜಯ್ಯ, ಕುಳ್ಳಯ್ಯ, ಶಂಕರಪ್ಪ, ಶಿವಣ್ಣ, ಗೋವಿಂದರಾಜು, ರಾಜೇಶ್, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಬಸವರಾಜು, ನಗರಸಭಾ ಸದಸ್ಯೆ ಗಾಯಿತ್ರಿ, ಮಾಜಿ ನಗರಸಭಾ ಸದಸ್ಯ ದೊರೆಸ್ವಾಮಿ, ಎಸ್.ಪಿ.ಮಹೇಶ್, ಗಂಗಾಧರ್, ಸೇರಿದಂತೆ ಹಲವರಿದ್ದರು.

DO YOU WANT STAR OF MYSORE



STAR OF MYSORE, English evening daily published by the city's Academy Newspapers (P) Ltd., has been gaining increasing popularity over the years. As Mysuru city is growing rapidly, there is an overwhelming demand for STAR OF MYSORE. But there are complaints that the paper is not reaching the readers in time in areas of city outskirts and also not available. At the same time it's a matter of delight, that a good number of our readers in the outskirts of our city, beyond the ring road, are getting their copy of STAR OF MYSORE next day along with their morning dailies.

Therefore, those wishing to have STAR OF MYSORE the next morning along with their regular morning newspaper (Kannada or English) may ask the paper boy who delivers the morning paper to deliver **STAR OF MYSORE** also.

The readers can also contact our Circulation Manager **T.S. Gopinath - 9845296447** or Circulation Assistant **K.S. Prasad - 9900382840** for getting their copy under this arrangement.

—Circulation Manager
STAR OF MYSORE

MUDA APPROVED SITES FOR SALE
20x30, 30x40 & 30x50
Behind Chamundi Hill, Adjacent to Ring Road, Lalithadripura & near JSS 2nd Stage, Mysuru
9980270076, 9900466811

SITE FOR SALE
24 x 151
ANANDA SAGAR, HUNSUR ROAD, EAST FACING 1400/- PER SQFT
9845107830

SITE FOR SALE
30 X 40 NORTH FACING
Perfect Vasthu
(West to East Slope) Site for Sale in MIG 200-D Block, Vijayanagar 3rd Stage, Mysuru.
Contact :
93416 22476

ಅಭಿನಂದನೆ



ಕು.ಸಮನ್ವಿ

ಶ್ರೀ ಪ್ರಶಾಂತ್ ಹಾಗೂ ಶ್ರೀಮತಿ ಕವಿತಾ ರವರ ಪುತ್ರಿ ಕುಮಾರಿ ಸಮನ್ವಿ ರವರು ದಿ: 10.05. 2023ರಲ್ಲಿ ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಿ 2ನೇ ಸ್ಥಾನ ಗಳಿಸಿ ಬೆಳ್ಳಿ ಪದಕವನ್ನು ಪಡೆದಿರು ತ್ತಾರೆ. ಇವರಿಗೆ ಅಭಿನಂದಿಸುವವರು. ಅಜ್ಜ: ಕೆ.ಎಂ.ನಂಜಶೆಟ್ಟಿ ಅಜ್ಜಿ: ವಿಮಲ, ದೊಡ್ಡಪ್ಪ: ಎನ್. ಪ್ರದೀಪ್, ಪ್ರೊಫೆಸರ್ ಚೆಲುವಾಂಭ ಆಸ್ಪತ್ರೆ, ದೊಡ್ಡಮ್ಮ: ಶ್ರೀಮತಿ ಸಂಗೀತಾ ಹಾಗೂ ಕುಟುಂಬವರ್ಗ

WANTED VEDIC MATHS TEACHER
to teach in Mysore
Contact:
82966 58879

COMMERCIAL SPACE FOR RENT
Approximately 1600 sqft., in 1st Floor, at Ramanamaharshi Road & Panchamantra Road Junction, Kuvempunagar, Opp. Kumar Medicals, Suitable for Govt. offices, Tuition Centre, Poly Clinic etc.,
Contact: 9845296447 between 7am & 8pm

RENT OR LEASE
2 BHK Flat available for rent and lease near Vijayanagar 1st Stage, Mysore with one car parking.
Mob: 8904804787

ಉಚಿತ ಕಣ್ಣಿನ ತಪಾಸಣೆಗೆ ಭೇಟಿ ಕೊಡಿ
ಇಸ್ಮಾಯಿಲ್ ಐ ಕೇರ್
ಕನ್ನಡಕಗಳು, ದೃಷ್ಟಿ ದರ್ಪಣಗಳು ಹಾಗೂ ಇತರ ಆಪ್ಟಿಕಲ್ ಅಗತ್ಯ ಸಾಮಗ್ರಿಗಳು
ಇಸ್ಮಾಯಿಲ್ ಐ ಕೇರ್
ಅಭಿಷೇಕ್ ರಸ್ತೆ, ಮಹಾಜನ ಬಡಾವಣೆ ಹನುಮಾನ್ ಸ್ಪೋರ್ಟ್ಸ್ ಎದುರು, ವಿಜಯನಗರ 2ನೇ ಹಂತ, ಮೈಸೂರು. ಫೋ: 0821-4050164 / 9845026027

REQUIRED FOR A CA FIRM
We are a Prominent CA Firm in Mysore looking for hiring candidates having the following Credentials:
Recently Qualified CA's, IPCC (inter) completed candidates, articles completed candidates
Vacancies also exist for Articled Clerks
Candidates with a desire to excel and interested in a sustaining relationship may send their detailed resume and expected remuneration to:
mysorecafirm@gmail.com

ನೇರವಾಗಿ II ಪಿಯುಸಿ ಬರೆಯಿರಿ!!
I PUC / ಡಿಪ್ಲೋಮಾ ಫೇಲಾಗಿದೆಯೇ? ಹಾಜರಾತಿ ಕೊರತೆಯಿಂದ ಪರೀಕ್ಷೆ ಬರೆದಿಲ್ಲವೇ? ತುಂಬಾ ವರ್ಷಗಳಿಂದ ಪಿಯುಸಿ ಇನ್ಕಂಪ್ಲೀಟ್ ಆಗಿದೆಯೇ? ಇಂತಹ ಸಾವಿರಾರು ಮಂದಿ ನಮ್ಮಲ್ಲಿ ಬಂದು ಪಿಯುಸಿ ಮುಗಿಸಿಕೊಂಡು ಒಳ್ಳೆಯ ನೌಕರಿಯಲ್ಲಿದ್ದಾರೆ. ಸಂಪರ್ಕಿಸಿ J.V. ಸೆಂಟರ್, ಮೈಸೂರು
8088455457, 9844355941
www.direct2puc.com

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ನ್ಯೂ ಸಯ್ಯಾಜಿ ರಾವ್ ರಸ್ತೆ, ಕೆ.ಆರ್. ಆಸ್ಪತ್ರೆ ಹತ್ತಿರ, ಮೈಸೂರು
ಪ್ರವೇಶ ತೆರದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463

ಸವಿನೆನಪು



ಪಾರ್ವತಮ್ಮಣ್ಣಿ–ಡಿ.ದೇವರಾಜ ಅರಸ್ (KSRTC)
(12 ವರ್ಷ) (18 ವರ್ಷ)

COMMERCIAL SPACE FOR RENT IN KALIDASA ROAD
1^{st} Floor 2500 Sq,
2^{nd} Floor 2500 Sq
Call: 70192 92093

SITE FOR SALE
- BHIMA KRITIKA LAKE VIEW LAYOUT
- 30 X 48
- EAST FACING
- OFF NANJANGUD ROAD
- NEAR APMC

CONTACT
9035379769

VISHVAKSHEMA TRUST®
SHREE PARASHARA GURUKULAM
Shree Lakshminarasimha Kshetram,
Srinivasa Kshetram Road, Off Mysore-KRS Road,
Belagola,Srirangapatna Taluk, Mandya Dist., -571606
REQUIRES
Experienced / Fresh Male / Female Brahmin Candidates (Thrimathasta)
To teach the following Subjects for Classes 5^{th} to 10^{th} Standard (Central Syllabus)
A) **English:** B.A/M.A basically with English Major.
B) **Science:** B.Sc./M.Sc. with Physics Chemistry and Mathematics in B.Sc. and Physics Major in M.Sc.
C) **Mathematics:** B.Sc./M.Sc. with PCM in B.Sc. and Mathematics in M.Sc.
D) **Social-Science:** B.A in HEG
E) **Biology (Part Time):** B.Sc./M.Sc. with Botany or Zoology Major.
For all the above posts, B.Ed. is Essential.
F) **Painting (Part time):** Degree/Diploma in Painting.
G) **Hostel Warden:** Any Degree/Post Graduation.
Forward your Resume to the email ID given below within 7 days from the date of this Advertisement.
Email: parasharagurukulam@gmail.com/ vishvakshema@yahoo.com

BOOKINGS OPEN FOR
Construction of Brand New Architecture Designed Houses
MUDA APPROVED
20'x40' - 33.10 Lakhs
30'x40' - 50.49 Lakhs
Near St. Joseph's Central School, Hunsur Road, Mysore.
9740767576, 8884001233

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಪ್ರಸಾದ್.ಎ.ಎಂ
(ಪಾಪು)

ಇವರು ದಿ: 16.05.2023 ರಂದು ದೈವಾಧೀನರಾಗಿದ್ದು ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 27.05.2023 ಶನಿವಾರ ಬೆಳಗ್ಗೆ 10.30ಕ್ಕೆ ಮೃತರ ಸ್ವಗೃಹ ನಂಜನಗೂಡು ತಾ||, ಆಲತ್ತೂರು ಗ್ರಾಮದಲ್ಲಿ ಏರ್ಪ ಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಎಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇ ಕಾಗಿ ವಿನಂತಿ. ದುಃಖತಪ್ತರು: ತಾಯಿ-ತಂದೆ: ಶ್ರೀಮತಿ ಶಿವಮ್ಮ ಮತ್ತು ಎ.ಎಂ.ಮಾದಯ್ಯ (ಚಿಕ್ಕೂಸು) ಮತ್ತು ಕುಟುಂಬವರ್ಗ

HOUSE FOR RENT / LEASE
G/F, East Facing 2 Bedroom with attached, Dining, Poojaroom at Srirampura 2nd Stage, behind Devayyana Hundi, Govt. School, no pets.
Call : 94805 60312 / 94818 14370
Brokers Excuse

CHANGE OF NAME
I, H.P. Mahadevaswamy, residing at Door No. 729, Opposite Bus Stop, Hinkal, Mysuru-570 030, on my own free will, I intend to change my daughter's name as Hamsa Veda, in place of her former name Hamsapriyaa.M. I declare this in front of Notary R. Ramachandra on 24-5-2023, that hereafter at all times to designate and address my daughter by her new name Hamsa Veda.
Sd/- H.P. Mahadevaswamy

ಕೊನೆಯ 2 ದಿನಗಳು ಮಾತ್ರ
ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್
ಗೃಹಶೋಭೆ
GRUHA SHOBHE
LIVING STYLE EXHIBITION
TIMING : 11 Am to 9 Pm
ಬೃಹತ್ ಇಂಟೀರಿಯರ್ ಮತ್ತು ಫರ್ನಿಚರ್ ಎಕ್ಸ್‌ಪೋ
10 Days
INTERIORS & FURNITURE SHOW
ಮೇ 19 ರಿಂದ 28 ರವರೆಗೆ
ಮಹಾರಾಜ ಕಾಲೇಜು ಗ್ರೌಂಡ್
ಮೈಸೂರು
ENTRY Rs. 30/- Children Below 10 Years Free Entry **PARKING FREE**

ಗುರುಕುಲ ಪತ್ತಿನ ಸಹಕಾರ ಸಂಘ ನಿಯಮಿತ, ಮೈಸೂರು
#55, 3ನೇ ಕ್ರಾಸ್, ಗುರುಕುಲ ಬಡಾವಣೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಮಾರ್ಗ, ಜೆ.ಪಿ. ನಗರ ರಿಂಗ್‌ರೋಡ್, ಮೈಸೂರು – 570031
ತಕ್ಷಣ ಬೇಕಾಗಿದ್ದಾರೆ PART TIME / FULL TIME
ಪಿಗ್ಮಿ ಏಜೆಂಟ್‌ಗಳು – 05
ಪಿಯುಸಿ /ಯಾವುದೇ ಪದವಿ
ಸಂಪರ್ಕಿಸಿ : **81519 40937** Email: gcc.society2021@gmail.com

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ
ಬಾಲಾಜಿ ನಗರ
ಲಲಿತಾದ್ರಿಪುರ
ಸಂಪೂರ್ಣ ಅಭಿವೃದ್ಧಿ ಹೊಂದಿದೆ & ರೇರಾ ರಿಜಿಸ್ಟರ್ಡ್ ನೋಂದಣಿಗೆ ಸಿದ್ಧವಿದೆ
ಸಂಪರ್ಕಿಸಿ: 97397 39791 / 63627 69242



ಅಭಿವೃದ್ಧಿ **LAST 9 DAYS**
ಸಿಲ್ಕ್ ಇಂಡಿಯಾ® 2023
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

26 ಮೇ ಯಿಂದ 4 ಜೂನ್ 2023 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಸದರ್ನ್ ಸ್ಟಾರ್
(ಹೋಟೆಲ್ ರಿಡಾಲಿಜ್) ವಿನೋಬಾ ರಸ್ತೆ, ಮೈಸೂರು
Entry Free | All Credit & Debit Cards Accepted | Contact : +91 78924 03536
(Registered with O/o D C (H) Ministry of Textiles, Govt. of India)


ALL IN ONE FURNITURES
BRINGS AN OPPORTUNITY TO EXCHANGE ANY FURNITUER TO NEW FURNITURES
7760263212

ಬಾಡಿಗೆಗೆ ದೊರೆಯುತ್ತದೆ
ಮೈಸೂರಿನ ಪ್ರತಿಷ್ಠಿತ ಕಾಳಿದಾಸ ರಸ್ತೆಯಲ್ಲಿ 1800Sq. ಅಡಿಯ ಮಳಿಗೆಯು ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ:
9743212495

REQUIRED FOR RENT
REQUIRED 3BHK HOUSE NEAR BY SIDDARTHA LAYOUT, K.C.LAYOUT & ALANAHALLI
9480194555

SITE FOR SALE
30x40 North Face Site @ Rs. 25 Lakhs DTCP Approved Bank Loan Available Behind Yelwala Bus stand
1.5 Kms from Hunsur Road
9538583377

ಜಾಗ ಬೇಕಾಗಿದೆ
ಮುಡಾ/ಡಿಟಿಸಿಪಿ ಮಿತಿಯಲ್ಲಿ ಲೇಔಟ್ ಅಭಿವೃದ್ಧಿಗಾಗಿ ಜಾಗ ಬೇಕಾಗಿದೆ.
ಜಂಟಿ ಅಭಿವೃದ್ಧಿ 5 ರಿಂದ 25 ಎಕರೆ
ಕಲೀದಿಗೆ 4 ರಿಂದ 8 ಎಕರೆ
VALUE SPACE
+91 9845519640 / 7992799205



ವಿಶೇಷ ಕರಕುಶಲ ವಸ್ತುಗಳ ನೈಜ ಪ್ರಾತ್ಯಕ್ಷಿಕೆ ಕ್ರಿಯಾಶೀಲತೆಯುಳ್ಳ ಕರಕುಶಲಕರ್ಮಿಗಳಿಂದ ನೇರವಾಗಿ ಗ್ರಾಹಕರಿಗೆ

ವೈವಿಧ್ಯಮಯ ಕರಕುಶಲ ವಸ್ತುಗಳು, ದೇಶೀ ವಿನ್ಯಾಸ ವಸ್ತ್ರಗಳು, ಮನಮೋಹಕ ಆಭರಣಗಳು, ಗೃಹಾಲಂಕಾರ ಪರಿಕರಗಳು, ನವೀನ ಮಾದರಿಯ ಸಾಂಪ್ರದಾಯಿಕ ಗುಜರಾತಿ ಕಸೂತಿ ಕುಸರಿಗಳು ಹಾಗೂ ಇನ್ನಷ್ಟು ಕಲಾತ್ಮಕ ಆಕರ್ಷಣೆಗಳು ಕಣ್ಮನ ಸೆಳೆಯಲಿವೆ. ಗುಜರಾತ್ ಹೆಮ್ಮೆಯ "ಪಟೋಲ ಸೀರೆ", ಬಾಂಧಿನಿ (ಟೈ ಮತ್ತು ಡೈ) ಬ್ಲಾಕ್ ಪ್ರಿಂಟ್, ಕಛ್ ಕಸೂತಿ / ಎಂಬ್ರಾಯಿಡ್ರಿ, ಕಛ್ ಮಡ್ ಮಿರರ್ ವರ್ಕ್ ಕಛ್ ಜ್ಯುವೆಲರಿ, ಕೈಮಗ್ಗ ಉತ್ಪನ್ನಗಳು, ಬೀಡ್ ವರ್ಕ್, ಮಡಿಕೆಗಳು, ಚನ್ನಪಟ್ಟಣ, ಚರ್ಮದ ಉತ್ಪನ್ನಗಳು, ಬೆಡ್‌ಶೀಟ್ ಮತ್ತು ಕುಷನ್ ಕವರ್ ಹಾಗೂ ಇನ್ನಿತರ ಆಕರ್ಷಣೀಯ ಕಸೂತಿ ಕರಕುಶಲವಸ್ತುಗಳು.

ವಿಶೇಷ ಆಕರ್ಷಣೆ :
ಕಛ್ ಗೋಡಿ ಮತ್ತು ಬೊಂಬೆ ಆಟ
ಸಾಂಸ್ಕೃತಿಕ ಕಾರ್ಯಕ್ರಮ

ಪಾರ್ಕಿಂಗ್ ಹಾಗೂ ಪ್ರವೇಶ ಉಚಿತ
ಮೋ : 96866 77232, 81975 83261

ಗುಜರಾತ್ ಕರಕುಶಲ ಉತ್ಸವ
ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್
ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಮೈಸೂರು–570 016
19 – 28 ಮೇ 2023
ಬೆಳಿಗ್ಗೆ 10.00 – ಸಂಜೆ 9.00
Organized by Executive Director Indext-c Govt. of Gujarat, Gandhinagar | Sponsored by : Commissioner & Secretary Cottage and Rural Industries Govt. of Gujarat | In Association with : JSS Mahavidyapeetha JSS Mysore Urban Haat Mysuru

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಡಕೊಳ, ಮೈಸೂರು ಜಿಲ್ಲೆ–571311
Email id: itstaff_ulb_kadakola@yahoo.com, Tele phone no:0821-2970319
ಸಂ:ಪಪಕ/ತಾ.ಶಾ/ಟೆ.ಪ್ರ/ಸಿ.ಆರ್ 02/2023–24 ದಿನಾಂಕ:24–05–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ ಪಟ್ಟಣ ಪಂಚಾಯಿತಿ ಸಾಮಾನ್ಯ ನಿಧಿ ಅನುದಾನದಡಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ K.W-1 ಮತ್ತು K.W-2 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು https://eproc.karnataka.gov.in ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು https://eproc.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1. ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ: **05/06/2023 ರ ಸಂಜೆ 5.30** ಗಂಟೆಯವರೆಗೆ.
2. ಟೆಂಡರ್ ತೆರೆಯುವ ದಿನಾಂಕ:**07/06/2023 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ	ವಿವರ	ಅಂದಾಜು ಮೊತ್ತ ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ
1.	DMA/2022-23/OW/WORK_INDENT149750	25.00	25000.00	4ನೇ ದರ್ಜೆ ಹಾಗೂ ಮೇಲ್ಪಟ್ಟು
2.	DMA/2022-23/OW/WORK_INDENT149751	12.00	30000.00	4ನೇ ದರ್ಜೆ ಹಾಗೂ ಮೇಲ್ಪಟ್ಟು
3.	DMA/2022-23/OW/WORK_INDENT149752	20.00	50000.00	4ನೇ ದರ್ಜೆ ಹಾಗೂ ಮೇಲ್ಪಟ್ಟು
4.	DMA/2022-23/OW/WORK_INDENT149753	2.00	2500.00	4ನೇ ದರ್ಜೆ ಹಾಗೂ ಮೇಲ್ಪಟ್ಟು
5.	DMA/2022-23/OW/WORK_INDENT149754	5.00	12500.00	4ನೇ ದರ್ಜೆ ಹಾಗೂ ಮೇಲ್ಪಟ್ಟು
6.	DMA/2022-23/OW/WORK_INDENT149755	24.89	49780.00	4ನೇ ದರ್ಜೆ ಹಾಗೂ ಮೇಲ್ಪಟ್ಟು
7.	DMA/2022-23/OW/WORK_INDENT149756	42.50	42500.00	3ನೇ ದರ್ಜೆ ಹಾಗೂ ಮೇಲ್ಪಟ್ಟು
8.	DMA/2022-23/OW/WORK_INDENT149757	25.00	50000.00	4ನೇ ದರ್ಜೆ ಹಾಗೂ ಮೇಲ್ಪಟ್ಟು
9.	DMA/2022-23/OW/WORK_INDENT149758	49.50	99000.00	3ನೇ ದರ್ಜೆ ಹಾಗೂ ಮೇಲ್ಪಟ್ಟು

ಸೂಚನೆ:1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ, ಹೆಚ್ಚಿನ ವಿವರಗಳಿಗೆ ಟೆಂಡರ್‌ದಾರರು https://eproc.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– (ಶ್ರೀ ಬಿ.ಎನ್ ಗಿರೀಶ್) ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ, ಕಡಕೊಳ

ಸಹಿ/–(ಶ್ರೀ ಸಿ.ವೆಂಕಟೇಶ್) ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಕಡಕೊಳ

DIPR/DDMYS/KSMCA/25/2023-24